(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್ ಕೊಡದೆ ಕಲಾಪ ಮುಂದುವರೆಸುತ್ತಿರುವುದನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನೂ ತಾವು ರೂಲಿಂಗ್ ಈಗಲೇ ಕೊಡದಿರುವುದನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇನೆ.

ಅಧ್ಯಕ್ಷರು : ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತೆ ಮತ್ತೆ chair ಅನ್ನು defy ಮಾಡಬೇಡಿ. ತಾವು ಮತ್ತೆ ಮತ್ತೆ chair ಅನ್ನ defy ಮಾಡುವುದು ಸರಿಯಲ್ಲ. ನನ್ನ ರೂಲಿಂಗ್ ಅನ್ನು ನಾನು reserve ಮಾಡಿದ್ದೇನೆ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಸಂತಾಪ ಸೂಚಕ ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್, ಶ್ರೀ ಜಿ.ವಿ. ಶ್ರೀರಾಮರೆಡ್ಡಿ, ಶ್ರೀ ಎಸ್. ರಾಜೇಂದ್ರನ್ ಮತ್ತು ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು ಸಭಾತ್ಯಾಗ ಮಾಡಿದರು)

2. ಸಂತಾಪ ಸೂಚನೆ

ವಿಷಯ: ಭಾರತದ ಮಾಜಿ ರಾಷ್ಟ್ರಪತಿಯವರಾದ ಶ್ರೀ ಕೆ.ಆರ್. ನಾರಾಯಣನ್, ಮತ್ತಿತರ ಗಣ್ಯರ ನಿಧನ.

ಅಧ್ಯಕ್ಷರು : ಭಾರತದ ಮಾಜಿ ರಾಷ್ಟ್ರಪತಿಯವರಾದ ಶ್ರೀ ಕೆ.ಆರ್. ನಾರಾಯಣನ್, ಕೇಂದ್ರದ ಹಾಲಿ ಸಚಿವರಾಗಿದ್ದ ಶ್ರೀ ಪಿ.ಎಂ. ಸಯೀದ್, ರಾಜ್ಯದ ಮಾಜಿ ಸಚಿವರಾಗಿದ್ದ ಶ್ರೀ ಬಿ.ಎಸ್. ಪಾಟೀಲ್, ಶ್ರೀ ಪಿ.ಪಿ. ಹೆಗರೆ, ಮಾಜಿ ಸಂಸತ್ ಸದಸ್ಯರಾಗಿದ್ದ ಶ್ರೀ ವಿ. ಕೃಷ್ಣರಾವ್, ವಿಧಾನಸಭೆಯ ಮಾಜಿ ಸದಸ್ಯರುಗಳಾಗಿದ್ದ ಶ್ರೀ ಜಿ. ನಾರಾಯಣ ಕುಮಾರ್, ಶ್ರೀ ಶಂಕರ್ ಎಸ್. ಕರನಿಂಗ್, ಶ್ರೀ ಬಾಬುರಾವ್ ಅಣ್ಣಪ್ಪ ಬೋಳಶೆಟ್ಟಿ, ಶ್ರೀ ಕೆ.ಎಂ. ಪುಟ್ಟು, ಶ್ರೀ ಯು.ಕೆ. ಶಾಮಣ್ಣ, ಶ್ರೀ ಭೀಮನೇನಿ ಕೊಂಡಯ್ಯ, ಶ್ರೀ ಸಿ.ವಿ. ಮುಡಕಲಕಟ್ಟಿ, ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ, ವಿಧಾನ ಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎಸ್. ಚನ್ನಬಸವಯ್ಯ, ಡಾ: ಎಂ.ಆರ್. ತಂಗಾ, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಡಾ: ಹೆಚ್.ಎಲ್. ನಾಗೇಗೌಡ, ಡಾ: ಎಂ.ಸಿ. ಮೋದಿ, ಗಣ್ಯ ವ್ಯಕ್ತಿಗಳಾದ ಶ್ರೀಮತಿ ಶಾಂತಾದೇವಿ ಮಾಳವಾಡ, ಡಾ: ಎಲ್.ಆರ್. ಹೆಗಡೆ, ಡಾ: ಡಿ.ಎಂ. ನಂಜುಂಡಪ್ಪ, ಶ್ರೀ ಎಸ್.ಜಿ. ಮೈಸೂರುಮಠ, ಶ್ರೀ ಕೆ. ರಾಜಾರಾವ್, ಶ್ರೀ ವಜ್ರಮುನಿ ಹಾಗೂ ಶ್ರೀ ಸಿ.ಜಿ. ಕೃಷ್ಣಸ್ವಾಮಿ ಅವರುಗಳು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಶ್ರೀ ಕೆ.ಆರ್. ನಾರಾಯಣನ್

ಭಾರತದ ಮಾಜಿ ರಾಷ್ಟ್ರಪತಿಗಳಾದ ಶ್ರೀ ಕೆ.ಆರ್. ನಾರಾಯಣನ್ ಅವರು 1920ರ ಅಕ್ಟೋಬರ್ 27ರಂದು ಕೇರಳದ ಕೊಟ್ಟಾಯಂ ಜಿಲ್ಲೆಯ ಉಳವೂರು ಗ್ರಾಮದಲ್ಲಿ ಜನಿಸಿದ್ದು, ಉಪನ್ಯಾಸಕರಾಗಿ ವೃತ್ತಿಯನ್ನು ಪ್ರಾರಂಭಿಸಿ ನಂತರ ಹಲವಾರು ಪತ್ರಿಕೆಗಳ ವರದಿಗಾರರಾಗಿದ್ದರು. 1949ರಲ್ಲಿ ಶ್ರೀ ನಾರಾಯಣನ್ ಅವರು ವಿದೇಶಾಂಗ ಸೇವೆಗೆ ಸೇರಿ ಹಲವಾರು ದೇಶಗಳಲ್ಲಿ ರಾಜತಾಂತ್ರಿಕರಾಗಿ ಕಾರ್ಯನಿರ್ವಹಿಸಿದ್ದರು. ನಿವೃತ್ತಿಯ ನಂತರ ಜವಹರಲಾಲ್ ನೆಹರು ವಿಶ್ವವಿದ್ಯಾನಿಲಯದ ಕುಲಪತಿಯಾಗಿಯೂ ಕೆಲಸ ನಿರ್ವಹಿಸಿ ನಂತರ ಸಕ್ರಿಯ ರಾಜಕಾರಣದಲ್ಲಿ

ಪಾಲ್ಗೊಂಡರು. ಕೇರಳ ರಾಜ್ಯದ ಒತ್ತಪಾಲಂ ಕ್ಷೇತ್ರದಿಂದ 1984, 1989 ಹಾಗೂ 1991ರಲ್ಲಿ ಲೋಕಸಭೆಗೆ ಆಯ್ಕೆಯಾದ ಶ್ರೀಯುತರು ತದನಂತರ 1992ರಲ್ಲಿ ಭಾರತದ ಉಪರಾಷ್ಟ್ರಪತಿಯಾಗಿ ಹಾಗೂ 1997ರಲ್ಲಿ ರಾಷ್ಟ್ರಪತಿಗಳಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ಮೃದು ನುಡಿ, ನಿಷ್ಠುರ ನಡೆಯ ಶ್ರೀ ನಾರಾಯಣನ್ ಅವರು ರಾಷ್ಟ್ರಪತಿ ಹುದ್ದೆಯ ಘನತೆ ಹಾಗೂ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಿದವರು. ಹಲವಾರು ಬಾರಿ ಕೇಂದ್ರ ಸರ್ಕಾರದ ಶಿಫಾರಸ್ಸುಗಳನ್ನು ಮರುಪರಿಶೀಲನೆಗೆ ಹಿಂದಿರುಗಿಸಿ ಪ್ರಜಾಪ್ರಭುತ್ವದ ಅರ್ಥವನ್ನು ಎತ್ತಿ ಹಿಡಿದಿದ್ದ ಶ್ರೀಯುತರು ರಾಷ್ಟ್ರದಲ್ಲಿ ನಡೆದ ಹಿಂಸಾಚಾರಗಳ ಬಗ್ಗೆ ಅಪಾರ ಆತಂಕಕ್ಕೆ ಒಳಗಾಗಿದ್ದವರು. ಒಬ್ಬ ನಾಗರೀಕ ರಾಷ್ಟ್ರಪತಿ ಹಾಗೂ ಕಾರ್ಯನಿರತ ರಾಷ್ಟ್ರಪತಿಯಾಗಿ, ಬಹುಮುಖ ವ್ಯಕ್ತಿತ್ವ ಹೊಂದಿದ್ದ ಶ್ರೀ ನಾರಾಯಣನ್ ಅವರು ರಾಷ್ಟ್ರ ಕಂಡ ಅತ್ಯಂತ ಉತ್ತಮ ವ್ಯಕ್ತಿಗಳಲ್ಲೊಬ್ಬರಾಗಿದ್ದರು.

ಶ್ರೀಯುತರು ದಿನಾಂಕ 09.11.2005ರಂದು ನಿಧನ ಹೊಂದಿದರು.

2. ಶ್ರೀ ಪಿ.ಎಂ. ಸಯೀದ್

ಕೇಂದ್ರ ಸರ್ಕಾರದ ಹಾಲಿ ಸಚಿವರಾಗಿದ್ದ ಶ್ರೀ ಪಿ.ಎಂ. ಸಯೀದ್ ಅವರು 1941ರ ಮೇ 10ರಂದು ಲಕ್ಷ ದ್ವೀಪದ ಅಂಡ್ರೋತ್ ದ್ವೀಪದಲ್ಲಿ ಜನಿಸಿ, ಮಂಗಳೂರಿನ ಸರ್ಕಾರಿ ಕಲಾ ಕಾಲೇಜಿನಲ್ಲಿ ಬಿಕಾಂ ಪದವಿಯನ್ನು ಹಾಗೂ ಮುಂಬಯಿಯಲ್ಲಿ ಕಾನೂನು ಪದವಿಯನ್ನು ಪಡೆದಿದ್ದರು. ಪ್ರಥಮ ಬಾರಿಗೆ 1967ರಲ್ಲಿ ಲೋಕಸಭೆ ಪ್ರವೇಶಿಸುವ ಮೂಲಕ ಲಕ್ಷ ದ್ವೀಪ ಕ್ಷೇತ್ರವನ್ನು ಸತತ ಹತ್ತು ಭಾರಿ ಪ್ರತಿನಿಧಿಸಿದ್ದು, ಸೋಲಿಲ್ಲದ ಸರದಾರ ಎಂಬ ಬಿರುದು ಗಳಿಸಿದ್ದರು. 1999ರಿಂದ 2004ರವರೆಗೆ ಲೋಕಸಭೆಯ ಉಪ ಸಭಾಧ್ಯಕ್ಷರಾಗಿ, ನಂತರ ದೆಹಲಿಯಿಂದ ರಾಜ್ಯಸಭೆಗೆ ಆಯ್ಕೆಯಾಗಿ ಯು.ಪಿ.ಎ. ಸರ್ಕಾರದಲ್ಲಿ ವಿದ್ಯುತ್ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು. ಶ್ರೀ ಸಯೀದ್ ಅವರು ಬಹುಭಾಷಾ ಪಂಡಿತರು. ಕನ್ನಡ ಭಾಷೆಯನ್ನು ಸುಲಲಿತವಾಗಿ ಮಾತನಾಡುತ್ತಿದ್ದ ಶ್ರೀಯುತರು ಲೋಕಸಭೆಯಲ್ಲಿ ಕರ್ನಾಟಕದ ಸಂಸತ್ ಸದಸ್ಯರೊಬ್ಬರ ಪ್ರಶ್ನೆಗೆ ಕನ್ನಡದಲ್ಲಿಯೇ ಉತ್ತರಿಸಿ ಕನ್ನಡ ಪ್ರೇಮವನ್ನು ವ್ಯಕ್ತಪಡಿಸಿದ್ದರು.

ಶ್ರೀಯುತರು ದಿನಾಂಕ 18.12.2005ರಂದು ನಿಧನ ಹೊಂದಿದರು.

3. ಶ್ರೀ ಬಿ.ಎಸ್. ಪಾಟೀಲ್

ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಪಾಟೀಲ್ ಬಸನಗೌಡ ಸೋಮನಗೌಡ ಅವರು 1931ನೇ ಏಪ್ರಿಲ್ 24ರಂದು ಬಿಜಾಪುರ ತಾಲ್ಲೂಕಿನ ಕನಮಡಿಯಲ್ಲಿ ಜನಿಸಿದ್ದು, ಬಸವನಬಾಗೇವಾಡಿ ತಾಲ್ಲೂಕು ಮಂಡಳಿ ಅಧ್ಯಕ್ಷರಾಗಿ, ಡಿಸಿಸಿ ಬ್ಯಾಂಕ್, ಸಹಕಾರ ಸ್ಪಿನ್ನಿಂಗ್ ಮಿಲ್ಲಿನ ನಿರ್ದೇಶಕರಾಗಿ, ಹಿಂದುಳಿದ, ಅಲ್ಪ ಸಂಖ್ಯಾತರ, ಹರಿಜನ ಗಿರಿಜನರ ಹಾಗೂ ಕೃಷಿ ಕಾರ್ಮಿಕರ ಏಳಿಗೆಗಾಗಿ ಅಪಾರವಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ನಾಲ್ಕು, ಐದು, ಆರು, ಏಳು ಹಾಗೂ ಒಂಭತ್ತನೇ ವಿಧಾನಸಭೆಗೆ ಬಸವನಬಾಗೇವಾಡಿ ಕ್ಷೇತ್ರದಿಂದ ಆಯ್ಕೆಯಾಗಿದ್ದು ಭಾರಿ ನೀರಾವರಿ ರಾಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 16.11.2005ರಂದು ನಿಧನ ಹೊಂದಿದರು.

4. ಶ್ರೀ ಪಿ.ಪಿ. ಹೆಗರೆ

ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಪಿ.ಪಿ. ಹೆಗರೆ ಅವರು 1913ರಲ್ಲಿ ಜನಿಸಿದ್ದು, ಸಾರ್ವಜನಿಕ ಕ್ಷೇತ್ರದಲ್ಲಿ ಆಸಕ್ತಿ ಹೊಂದಿ ಬೆಳಗಾಂ ಜಿಲ್ಲಾ ಅಭಿವೃದ್ಧಿ ಮಂಡಳಿ, ಬೆಳಗಾಂ ಜಿಲ್ಲಾ ಐಟಿಐ ನೇಮಕಾತಿ ಸಮಿತಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಲಹಾ ಸಮಿತಿಯ ಸದಸ್ಯರಾಗಿ, ಸದಲಗ ಪಟ್ಟಣ ಪಂಚಾಯಿತಿಯ ಅಧ್ಯಕ್ಷರಾಗಿ, ಕರ್ನಾಟಕ ಆಗ್ರೋ ಇಂಡಸ್ಟ್ರೀಸ್‌ನ ಸದಸ್ಯರಾಗಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಹಲವಾರು ಸಮ್ಮೇಳನಗಳಲ್ಲಿ ಭಾಗವಹಿಸಿದ್ದರು. ಶ್ರೀಯುತರು ಐದು, ಆರು, ಹಾಗೂ ಏಳನೇ ವಿಧಾನಸಭೆಗೆ ಚಿಕ್ಕೋಡಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು ಹಾಗೂ 1983 ರಲ್ಲಿ ಸಮಾಜ ಕಲ್ಯಾಣ ಖಾತೆ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ 22.11.2005ರಂದು ನಿಧನ ಹೊಂದಿದರು.

5. ಶ್ರೀ ವಿ. ಕೃಷ್ಣರಾವ್

ಲೋಕಸಭೆ ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವಿ.ಕೃಷ್ಣರಾವ್ ಅವರು ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿ 1925ನೇ ನವೆಂಬರ್ 23ರಂದು ಜನಿಸಿದ್ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಶ್ರೀಯುತರು ಗೌರಿಬಿದನೂರು ತಾಲ್ಲೂಕು ಅಭಿವೃದ್ಧಿ ಸಮಿತಿ, ನಕ್ಕಲಹಳ್ಳಿ ಗ್ರಾಮ ಪಂಚಾಯಿತಿ, ಮಾರ್ಕೆಟಿಂಗ್ ಸೊಸೈಟಿ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಗೃಹನಿರ್ಮಾಣ ಸಹಕಾರ ಸಂಘ, ಎನ್. ಆದಿರಾಮಯ್ಯ ಪ್ರೌಢಶಾಲೆ ಹಾಗೂ ರೆಡ್‌ಕ್ರಾಸ್ ಸೊಸೈಟಿಯ ಅಧ್ಯಕ್ಷರಾಗಿ, ಮೈಸೂರು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕರಾಗಿ ಹಾಗೂ ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಐದನೇ ವಿಧಾನಸಭೆಗೆ ಗೌರಿಬಿದನೂರು ಕ್ಷೇತ್ರದಿಂದ ಹಾಗೂ ಚಿಕ್ಕಬಳ್ಳಾಪುರ ಕ್ಷೇತ್ರದಿಂದ 1984ರಿಂದ 1996ರವರೆಗೆ ಸತತ ಮೂರು ಬಾರಿ ಲೋಕಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 03.12.2005ರಂದು ನಿಧನ ಹೊಂದಿದರು.

6. ಶ್ರೀ ಜಿ. ನಾರಾಯಣಕುಮಾರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಜಿ. ನಾರಾಯಣಕುಮಾರ್ ಅವರು ಮಳವಳ್ಳಿ ತಾಲ್ಲೂಕಿನ ದಾಸನದೊಡ್ಡಿ ಗ್ರಾಮದಲ್ಲಿ ಜನಿಸಿದ್ದು, ಕನ್ನಡ ಹಾಗೂ ಕರ್ನಾಟಕದ ಗಡಿ ಸಮಸ್ಯೆಗಳ ಅಭಿವೃದ್ಧಿಗಾಗಿ ನಡೆದ ಹಲವಾರು ಹೋರಾಟಗಳಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿರುತ್ತಾರೆ. ಶ್ರೀಯುತರು ಕೆಂಪೇಗೌಡ ವಿದ್ಯಾಸಂಸ್ಥೆಯ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕನ್ನಡ ಚಳವಳಿ ಕೇಂದ್ರ ಸಮಿತಿಯ ಅಧ್ಯಕ್ಷರಾಗಿ, ಬೆಂಗಳೂರು ನಗರಸಭೆಯ ಸದಸ್ಯರಾಗಿ, ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು, ಏಳು ಹಾಗೂ ಎಂಟನೇ ವಿಧಾನ ಸಭೆಗೆ ಬಿನ್ನಿ ಪೇಟೆ ಕ್ಷೇತ್ರದಿಂದ ಆಯ್ಕೆಯಾಗಿರುತ್ತಾರೆ.

ಶ್ರೀಯುತರು ದಿನಾಂಕ 18.09.2005ರಂದು ನಿಧನ ಹೊಂದಿದರು.

7. ಶ್ರೀ ಶಂಕರ್ ಎಸ್. ಕರನಿಂಗ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಶಂಕರ್ ಎಸ್. ಕರನಿಂಗ್ ಅವರು 1926ರ ಜೂನ್ 12ರಂದು ಗೋಕಾಕ್ ತಾಲ್ಲೂಕಿನ ಕೊಣ್ಣೂರಿನಲ್ಲಿ ಜನಿಸಿದ್ದು ವೃತ್ತಿಯಲ್ಲಿ ಕೃಷಿಕರಾಗಿದ್ದರು.

ಕೊಸ್ನೂರು ನಗರಸಭೆಯ ಸದಸ್ಯರಾಗಿ, ಕೃಷಿ ಸೇವಾ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದ ಶ್ರೀಯುತರು ಒಂಭತ್ತನೇ ವಿಧಾನಸಭೆಗೆ ಗೋಕಾಕ್ ಕ್ಷೇತ್ರದಿಂದ ಆಯ್ಕೆಯಾಗಿರುತ್ತಾರೆ.

ಶ್ರೀಯುತರು ದಿನಾಂಕ 28.09.2005ರಂದು ನಿಧನ ಹೊಂದಿದರು.

8. ಶ್ರೀ ಬಾಬುರಾವ್ ಅಣ್ಣಪ್ಪ ಬೋಳಶೆಟ್ಟಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಾಬುರಾವ್ ಅಣ್ಣಪ್ಪ ಬೋಳಶೆಟ್ಟಿ ಅವರು 1926ನೇ ಜನವರಿ 26ರಂದು ಬೈಲಹೊಂಗಲ ತಾಲ್ಲೂಕು ಹುದಕೇರಿಯಲ್ಲಿ ಜನಿಸಿದ್ದು ಪದವಿಯವರೆಗೂ ವ್ಯಾಸಂಗ ಮಾಡಿದ್ದರು. ಎಂಟನೇ ವಯಸ್ಸಿನಲ್ಲಿಯೇ ಸೇಂದಿ ಅಂಗಡಿಗಳ ವಿರುದ್ಧದ ಹೋರಾಟದಲ್ಲಿ ಭಾಗವಹಿಸಿದ್ದ ಶ್ರೀಯುತರು ತಾಲ್ಲೂಕು ಎಪಿಎಂಸಿ ಅಧ್ಯಕ್ಷರಾಗಿ ಹಾಗೂ ಬೆಳಗಾಂ ಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಸಹಕಾರ ಕ್ಷೇತ್ರದಲ್ಲಿ ಅಪಾರ ಸೇವೆಯನ್ನು ಸಲ್ಲಿಸಿದ್ದರು. ನಾಲ್ಕನೇ ವಿಧಾನಸಭೆಗೆ ಬೈಲಹೊಂಗಲ ಕ್ಷೇತ್ರದಿಂದ ಹಾಗೂ 1972ರಲ್ಲಿ ವಿಧಾನಪರಿಷತ್ತಿನ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ 28.09.2005ರಂದು ನಿಧನ ಹೊಂದಿದರು.

9. ಶ್ರೀ ಕೆ.ಎಂ. ಪುಟ್ಟು

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ.ಎಂ. ಪುಟ್ಟು ಅವರು ದಿನಾಂಕ 5ನೇ ಅಕ್ಟೋಬರ್ 1940 ರಂದು ಜನಿಸಿದ್ದು ವೃತ್ತಿಯಲ್ಲಿ ಕೃಷಿಕರಾಗಿದ್ದರು. ಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದ ಶ್ರೀಯುತರು ಮಂಡ್ಯ ಜಿಲ್ಲಾ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾಗಿ, ಹಲವಾರು ಶಿಕ್ಷಣ ಸಂಸ್ಥೆಗಳ ಸ್ಥಾಪಕರಾಗಿ ಹಾಗೂ ಮಂಡ್ಯ ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಶ್ರೀ ಪುಟ್ಟು ಅವರು ಒಂಭತ್ತನೇ ವಿಧಾನಸಭೆಗೆ ಕಿರುಗಾವಲು ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಶ್ರೀಯುತರು ದಿನಾಂಕ 30.09.2005ರಂದು ನಿಧನ ಹೊಂದಿದರು.

10. ಶ್ರೀ ಯು.ಕೆ. ಶಾಮಣ್ಣ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಯು.ಕೆ. ಶಾಮಣ್ಣ ಅವರು ದಿನಾಂಕ 9ನೇ ಏಪ್ರಿಲ್ 1939ರಂದು ಜನಿಸಿದ್ದು, ವಿಜ್ಞಾನ ಪದವೀಧರರು. ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದ ಶ್ರೀಯುತರು ಒಂಭತ್ತನೇ ವಿಧಾನಸಭೆಗೆ ಶೃಂಗೇರಿ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 10.11.2005ರಂದು ನಿಧನ ಹೊಂದಿದರು.

11. ಶ್ರೀ ಭೀಮನೇನಿ ಕೊಂಡಯ್ಯ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಭೀಮನೇನಿ ಕೊಂಡಯ್ಯ ಅವರು 1943ನೇ ಮೇ 19ರಂದು ರಾಮರಂಗಾಪುರದಲ್ಲಿ ಜನಿಸಿದ್ದು ವೃತ್ತಿಯಲ್ಲಿ ಕೃಷಿಕರು. ಹೊಸಪೇಟೆ ವ್ಯವಸಾಯ ಉತ್ಪನ್ನ ಮಾರುಕಟ್ಟೆ ಸಮಿತಿ ಹಾಗೂ ಕಾಡಾ ಅಧ್ಯಕ್ಷರಾಗಿ ಸಾಮಾಜಿಕ ಸೇವೆಯಲ್ಲಿ ನಿರತರಾಗಿದ್ದ ಶ್ರೀಯುತರು ಎಂಟನೇ ವಿಧಾನಸಭೆಗೆ ಹೊಸಪೇಟೆ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಶ್ರೀಯುತರು ದಿನಾಂಕ 22.11.2005ರಂದು ನಿಧನ ಹೊಂದಿದರು.

12. ಶ್ರೀ ಸಿ.ವಿ. ಮುಡಕಲ ಕಟ್ಟಿ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಚನ್ನಬಸಪ್ಪ ವಿರೂಪಾಕ್ಷಪ್ಪ ಮುಡಕಲಕಟ್ಟಿ ಅವರು ವೃತ್ತಿಯಲ್ಲಿ ಕೃಷಿಕರಾಗಿದ್ದು, ದೀನದಲಿತರ ಏಳಿಗೆಗಾಗಿ ಸೇವೆ ಸಲ್ಲಿಸಿದ್ದರು. ಗ್ರಾಮಪಂಚಾಯಿತಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಹಲವಾರು ಶಿಕ್ಷಣ ಸಂಸ್ಥೆಗಳ ಪದಾಧಿಕಾರಿಗಳಾಗಿಯೂ ಸೇವೆ ಸಲ್ಲಿಸಿದ್ದ ಶ್ರೀಯುತರು ಆರು ಹಾಗೂ ಏಳನೇ ವಿಧಾನಸಭೆಗೆ ಧಾರವಾಡ ಗ್ರಾಮೀಣ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಶ್ರೀಯುತರು ದಿನಾಂಕ 08.01.2006ರಂದು ನಿಧನ ಹೊಂದಿದರು.

13. ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ ಅವರು 1934ನೇ ಅಕ್ಟೋಬರ್ 23ರಂದು ಸಕಲೇಶಪುರ ತಾಲ್ಲೂಕಿನ ಬನವಾಸಿ ಗ್ರಾಮದಲ್ಲಿ ಜನಿಸಿದ್ದು ವೃತ್ತಿಯಲ್ಲಿ ಕೃಷಿಕರು. ಹಲವಾರು ಸಾಮಾಜಿಕ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದ ಶ್ರೀಯುತರು ಎರಡು, ಮೂರು, ಆರು ಹಾಗೂ ಒಂಭತ್ತನೇ ವಿಧಾನಸಭೆಗೆ ಬೇಲೂರು ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 16.01.2006 ರಂದು ನಿಧನ ಹೊಂದಿದರು.

14. ಶ್ರೀ ಎಸ್. ಚನ್ನಬಸವಯ್ಯ

ವಿಧಾನಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಶ್ರೀ ಎಸ್. ಚನ್ನಬಸವಯ್ಯ ಅವರು 1942ನೇ ಮಾರ್ಚ್ 06ರಂದು ಗುಬ್ಬಿ ತಾಲ್ಲೂಕಿನ ತೋಟಸಾಗರ ಗೋಪಾಲಪುರದಲ್ಲಿ ಜನಿಸಿದ್ದು ಶಿಕ್ಷಕ ವೃತ್ತಿಯನ್ನು ಅವಲಂಬಿಸಿದ್ದರು. ಕರ್ನಾಟಕ ರಾಜ್ಯ ಶಿಕ್ಷಕರ ಹಾಗೂ ನೌಕರರ ಒಕ್ಕೂಟದ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಕೈಗಾರಿಕಾ ತರಬೇತಿ ಕೇಂದ್ರಗಳ ನೌಕರರ ಸಂಘದ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಇತರೆ ಹಲವಾರು ಸಂಘಗಳ ಪದಾಧಿಕಾರಿಗಳಾಗಿ ಶಿಕ್ಷಕರ ಹಾಗೂ ನೌಕರರ ಪರವಾದ ಹೋರಾಟವನ್ನು ನಡೆಸಿದವರು. ಹಲವಾರು ಬಾರಿ ಬೇಡಿಕೆಗಳ ಈಡೇರಿಕೆಗಾಗಿ ಸತ್ಯಾಗ್ರಹವನ್ನು ನಡೆಸಿ ಸೆರೆಮನೆವಾಸವನ್ನು ಅನುಭವಿಸಿದವರು. ಶ್ರೀ ಚನ್ನಬಸವಯ್ಯ ಅವರು 1976ರಿಂದ 1988ರವರೆಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಹಾಗೂ 2000ದಲ್ಲಿ ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 04.09.2005ರಂದು ನಿಧನ ಹೊಂದಿದರು.

15. ಡಾ: ಎಂ.ಆರ್. ತಂಗಾ

ವಿಧಾನಪರಿಷತ್ತಿನ ಹಾಲಿ ಸದಸ್ಯರಾಗಿದ್ದ ಡಾ: ಎಂ.ಆರ್. ತಂಗಾ ಅವರು 1935ನೇ ನವೆಂಬರ್ 28ರಂದು ಗುಲ್ಬರ್ಗಾದಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ವೈದ್ಯರು ಹಾಗೂ ಉಪನ್ಯಾಸಕರು ಆಗಿದ್ದ ಶ್ರೀಯುತರು ಸಾರ್ವಜನಿಕ ಕ್ಷೇತ್ರದಲ್ಲಿ ಆಸಕ್ತಿ ವಹಿಸಿ 1988ರಿಂದ 2006ರವರೆಗೆ ಈಶಾನ್ಯ ವಲಯ ಪದವೀಧರರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಸತತವಾಗಿ ಮೂರು ಬಾರಿ ಆಯ್ಕೆಯಾಗಿದ್ದರು. ರಾಜಕೀಯ ವಲಯದಲ್ಲಿ ಶಿಸ್ತು, ಪ್ರಾಮಾಣಿಕತೆ ಹಾಗೂ ನೇರ ನಡೆನುಡಿಗಳಿಗೆ ಹೆಸರುವಾಸಿಯಾಗಿದ್ದ ಡಾ: ಮಾಣಿಕ್ಯಚಂದ್ ಆರ್. ತಂಗಾ ಅವರು ಯಾವುದೇ ವಿಷಯವನ್ನು ಅಧಿಕಾರಯುತವಾಗಿ ಮಾತನಾಡುತ್ತಿದ್ದರು.

ಶ್ರೀಯುತರು ದಿನಾಂಕ 02.11.2005ರಂದು ನಿಧನ ಹೊಂದಿದರು.

16. ಶ್ರೀ ಹೆಚ್.ಎಲ್. ನಾಗೇಗೌಡ

ಜಾನಪದ ತಜ್ಞ ಹಾಗೂ ವಿಧಾನಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಡಾ: ಹೆಚ್.ಎಲ್. ನಾಗೇಗೌಡ ಅವರು 1915ನೇ ಫೆಬ್ರವರಿ 15ರಂದು ಮಂಡ್ಯ ಜಿಲ್ಲೆಯ ಹೆರಗನಹಳ್ಳಿಯಲ್ಲಿ ಜನಿಸಿದ್ದು, ಭಾರತೀಯ ಆಡಳಿತ ಸೇವೆಯ ನಿವೃತ್ತ ಅಧಿಕಾರಿಯಾಗಿ ಸರ್ಕಾರದ ಸೇವೆಯಲ್ಲಿ ಹಲವಾರು ಹುದ್ದೆಗಳನ್ನು ನಿರ್ವಹಿಸಿದ್ದರು. ಇವರು ಸಲ್ಲಿಸಿದ ಸೇವೆಯನ್ನು ಗಮನಿಸಿ ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರನ್ನಾಗಿ ಸರ್ಕಾರವು ನೇಮಿಸಿತ್ತು. ಜಾನಪದ ವಿದ್ವಾಂಸರಾಗಿದ್ದ ಶ್ರೀಯುತರು ರಾಮನಗರದಲ್ಲಿ ಜಾನಪದ ಲೋಕವನ್ನು ನಿರ್ಮಾಣ ಮಾಡಿ ಯುವಜನರಿಗೆ ಜಾನಪದ ಪರಿಚಯಿಸಲು ಶ್ರಮಪಟ್ಟಿದ್ದರು. ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡಮಿಯ ಪ್ರಥಮ ಅಧ್ಯಕ್ಷರಾಗಿ ಜಾನಪದ ಸಮ್ಮೇಳನವನ್ನು ಸಂಘಟಿಸಿದ್ದ ಶ್ರೀಯುತರು 1995ರಲ್ಲಿ ಮುಧೋಳದಲ್ಲಿ ನಡೆದ 65ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕರ್ನಾಟಕ ಸಾಹಿತ್ಯ ಅಕಾಡಮಿ, ಹಂಪಿ ವಿಶ್ವವಿದ್ಯಾನಿಲಯದ ನಾಡೋಜ ಹಾಗೂ ಪಂಪ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡಮಿಯ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡಮಿಯ ಫೆಲೋಶಿಪ್ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು. ಶ್ರೀಯುತರು ಹಲವಾರು ಕೃತಿಗಳನ್ನು ರಚಿಸಿದ್ದು, ಆಡಳಿತ, ಜಾನಪದ, ಸಾಹಿತ್ಯ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಅಪಾರ ಸೇವೆ ಸಲ್ಲಿಸಿದ್ದರು. 1995ರಲ್ಲಿ ವಿಧಾನ ಪರಿಷತ್ತಿಗೆ ನಾಮನಿರ್ದೇಶನಗೊಂಡು ಕಾರ್ಯನಿರ್ವಹಿಸಿದ್ದರು.

ಶ್ರೀಯುತರು ದಿನಾಂಕ 22.09.2005ರಂದು ನಿಧನ ಹೊಂದಿದರು.

17. ಡಾ: ಎಂ.ಸಿ. ಮೋದಿ

ಅಪ್ರತಿಮ ನೇತ್ರ ವೈದ್ಯ ಹಾಗೂ ವಿಧಾನಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಡಾ: ಎಂ.ಸಿ. ಮೋದಿ ಅವರು 1916ನೇ ಅಕ್ಟೋಬರ್ 04ರಂದು ಜಾಲಿಕಟ್ಟೆಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ನೇತ್ರ ವೈದ್ಯರು. ಡಾ: ಮೋದಿಯವರು ಈ ನಾಡು ಕಂಡ ಓರ್ವ ಅಪ್ರತಿಮ ನೇತ್ರವೈದ್ಯರು. ದೃಷ್ಟಿಹೀನರಿಗೆ ದೃಷ್ಟಿಕರುಣಿಸಿದ ನೇತ್ರದಾನಿ. ಅರ್ಧ ಶತಮಾನದ ಕಾಲ ಉಚಿತ ನೇತ್ರ ಶಿಬಿರಗಳನ್ನು ನಡೆಸಿದ ಕರ್ಮಯೋಗಿ. ಡಾ: ಮೋದಿಯವರು ಲಕ್ಷಾಂತರ ಜನರಿಗೆ ಮಾಡಿದ ಸೇವೆಯನ್ನು ಗುರುತಿಸಿ ಭಾರತ ಸರ್ಕಾರವು ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿಗಳನ್ನು ಪ್ರಧಾನ ಮಾಡಿತ್ತು. ಇದರ ಜೊತೆಗೆ ಹಲವಾರು ದೇಶಗಳು ಆ ದೇಶಗಳ ಪರಮೋಚ್ಚ ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ. ಇವರನ್ನು ನೇತ್ರ ಚಿಕಿತ್ಸೆಯ ಶ್ರೇಷ್ಟ ಶಿಲ್ಪಿ, ನೇತ್ರ ರಾಜ ಎಂದು ವಿದೇಶಗಳು ಬಣ್ಣಿಸಿವೆ. ಒಂದು ಕೋಟಿಗೂ ಹೆಚ್ಚು ಶಸ್ತ್ರ ಚಿಕಿತ್ಸೆ ಮಾಡಿ ಗಿನ್ನಿಸ್ ದಾಖಲೆಯನ್ನು ಮಾಡಿದವರು. ಇವರ ಸೇವೆಯನ್ನು ಗುರುತಿಸಿ ಶ್ರೀಯುತರನ್ನು ವಿಧಾನ ಪರಿಷತ್ತಿನ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿತ್ತು.

ಶ್ರೀಯುತರು ದಿನಾಂಕ 11.11.2005 ರಂದು ನಿಧನ ಹೊಂದಿದರು.

18. ಶ್ರೀಮತಿ ಶಾಂತಾದೇವಿ ಮಾಳವಾಡ

ನಾಡಿನ ಹೆಸರಾಂತ ಹಿರಿಯ ಲೇಖಕಿ ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ಮಾಗಿದ ಅನುಭವಗಳನ್ನು ಚಿತ್ರಿಸುವ ಮೂಲಕ ಲೇಖಕಿಯರಿಗೆ ಒಂದು ಆದರ್ಶ ಪರಂಪರೆಯನ್ನು ಹಾಕಿ ಕೊಟ್ಟವರು. ಕನ್ನಡ ನವೋದಯ ಸಾಹಿತ್ಯದ ಕೊಂಡಿಯಾಗಿದ್ದ ಶ್ರೀಮತಿ ಶಾಂತಾದೇವಿಯವರು ಶೋಷಣೆಯ ಲಕ್ಷ್ಮಣರೇಖೆಯನ್ನು ದಾಟಿದವರು. ಸಾಹಿತಿಯಾಗಿ, ಸಾಮಾಜಿಕ ಕಾರ್ಯಕರ್ತೆಯಾಗಿ ಸಾಂಸ್ಕೃತಿಕ ವಲಯದಲ್ಲಿ ವಿಶಿಷ್ಟ ಸ್ಥಾನಗಳಿಸಿದ್ದು, ಸರಳತೆ, ಸಜ್ಜನಿಕೆ ಹಾಗೂ ಮೃದು ಮಾತಿನಿಂದಾಗಿ ಶಾಂತಕ್ಕ ಎಂದೇ ಹೆಸರಾಗಿದ್ದರು. ಉತ್ತರ ಕರ್ನಾಟಕ ಲೇಖಕಿಯರ ಸಂಘದ ಮೂಲಕ ಮಹಿಳಾ ಲೇಖಕಿಯರ ಹಲವು ಮೌಲ್ವಿಕ ಕೃತಿಗಳನ್ನು ಹೊರತರಲು ಕಾರಣಕರ್ತರಾದರು. 2000ನೇ ಇಸವಿಯಲ್ಲಿ ಬಾಗಲಕೋಟೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳನ್ನು ಗಳಿಸಿರುವ ಇವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇದರ ಜೊತೆಗೆ ಹಲವಾರು ಸಂಘಟನೆಗಳ ಪದಾಧಿಕಾರಿಗಳಾಗಿಯೂ ಅವಿಸ್ಮರಣೀಯ ಸೇವೆ ಸಲ್ಲಿಸಿರುತ್ತಾರೆ.

ಶ್ರೀಮತಿ ಶಾಂತಾದೇವಿ ಅವರು ದಿನಾಂಕ 07.08.2005 ರಂದು ನಿಧನ ಹೊಂದಿದರು.

19. ಡಾ: ಎಲ್.ಆರ್. ಹೆಗಡೆ

ಹಿರಿಯ ಜಾನಪದ ವಿದ್ವಾಂಸರಾದ ಡಾ: ಎಲ್.ಆರ್. ಹೆಗಡೆ ಅವರು ಜಾನಪದ ಸಾಹಿತ್ಯ, ಕಥೆ, ಕಾದಂಬರಿ, ಆಯುರ್ವೇದ, ಜನಪದ ವೈದ್ಯ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದು, 57ಕ್ಕೂ ಅಧಿಕ ಕಥಾ ಕವನ ಸಂಕಲನಗಳನ್ನು ಪ್ರಕಟಿಸಿರುತ್ತಾರೆ. ಇವರ ಹಲವು ಕಥೆಗಳು ರಷ್ಯನ್ ಮತ್ತು ಫ್ರೆಂಚ್ ಭಾಷೆಗೆ ಅನುವಾದವಾಗಿದೆ. ಜಾನಪದ ಮತ್ತು ಗಿರಿಜನರ ಕಥೆಯನ್ನು ಕೇಂದ್ರ ಸಾಹಿತ್ಯ ಅಕಾಡಮಿ ನೇತೃತ್ವದಲ್ಲಿ ಇಂಗ್ಲೀಷ್ ಸೇರಿದಂತೆ ದೇಶದ ಹಲವಾರು ಭಾಷೆಗಳಿಗೆ ಅನುವಾದ ಮಾಡಲಾಗಿದೆ. ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುವ ಶ್ರೀ ಹೆಗಡೆಯವರು ಗೌರೀಶ ಕಾಯ್ಕಿಣಿ ಪ್ರತಿಷ್ಠಾನದ ಪ್ರಶಸ್ತಿಯೂ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರು ದಿನಾಂಕ 15.09.2005 ರಂದು ನಿಧನ ಹೊಂದಿದರು.

20. ಡಾ: ಡಿ.ಎಂ. ನಂಜುಂಡಪ್ಪ

ಪ್ರಪಂಚದ ಏಳು ಮಂದಿ ಅತ್ಯುತ್ತಮ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರೆಂದು ಖ್ಯಾತರಾಗಿದ್ದ ಡಾ: ಡಿ.ಎಂ.ನಂಜುಂಡಪ್ಪ ಅವರು 1930ನೇ ಅಕ್ಟೋಬರ್ 25ರಂದು ಹೊಳಲ್ಕೆರೆ ತಾಲ್ಲೂಕಿನ ದೊಗ್ಗನಾಳು ಗ್ರಾಮದಲ್ಲಿ ಜನಿಸಿದ್ದರು. ಅಧ್ಯಾಪಕರಾಗಿ ವೃತ್ತಿ ಪ್ರಾರಂಭಿಸಿದ ಶ್ರೀಯುತರು ಭಾರತ ಸರ್ಕಾರದ ಸೇವೆಗೆ ಸೇರಿ ನಂತರ ಕರ್ನಾಟಕ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾಗಿ, ಅಖಿಲಭಾರತ ಆರ್ಥಿಕ ಸಮ್ಮೇಳನ ಹಾಗೂ ಕಾರ್ಮಿಕ ಅರ್ಥಶಾಸ್ತ್ರ ಸಮ್ಮೇಳನದ ಕಾರ್ಯದರ್ಶಿಯಾಗಿ, ಇಂಗ್ಲೆಂಡಿನ ಪ್ರತಿಷ್ಠಿತ ಹಾಲ್ಸ್ ವರ್ತ್‌ನ ವಿಸಿಟಿಂಗ್ ರೀಸರ್ಚ್ ಫೆಲೋ ಆಗಿ, ರಾಜ್ಯ ಸರ್ಕಾರದ ಆರ್ಥಿಕ ಸಲಹೆಗಾರರಾಗಿ, ರಾಜ್ಯದ ಯೋಜನಾ ಇಲಾಖೆಯ ಕಾರ್ಯದರ್ಶಿಯಾಗಿ, ಕರ್ನಾಟಕ ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳ ಉಪ ಕುಲಪತಿಗಳಾಗಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸದಸ್ಯ ಕಾರ್ಯದರ್ಶಿಯಾಗಿ, ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಯಿದ್ದ ಕಾಲದಲ್ಲಿ ರಾಜ್ಯಪಾಲರ ಸಲಹೆಗಾರರಾಗಿ, ಭಾರತ ಸರ್ಕಾರದ ರೈಲ್ವೆ ಮಂತ್ರಾಲಯದ

ರೈಲು ಪ್ರಯಾಣ ಸಾಗಾಣಿಕೆ ದರಗಳ ಸಮಿತಿಯ ಅಧ್ಯಕ್ಷರಾಗಿ, ಕರ್ನಾಟಕ ಸರ್ಕಾರದ ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರಾಗಿ, ಭಾರತ ಸರ್ಕಾರದ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಮಂತ್ರಾಲಯದ ಇಂಡಿಯನ್ ಕೌನ್ಸಿಲ್ ಆಫ್ ಸೋಷಿಯಲ್ ಸೈನ್ಸ್ ಸಂಶೋಧನಾ ಪರಿಷತ್ತಿನ ಅಧ್ಯಕ್ಷರಾಗಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕರ್ನಾಟಕದ ಉಪಾಧ್ಯಕ್ಷರಾಗಿ, ರಾಜ್ಯ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಅಧ್ಯಕ್ಷರಾಗಿ ಹಾಗೂ ಇನ್ನಿತರೆ ಹಲವಾರು ಸಂಘ ಸಂಸ್ಥೆಗಳ ಪಧಾದಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರು. ದೂರದೃಷ್ಟಿಯ ಅಭಿವೃದ್ಧಿ ಚಿಂತನೆಯಲ್ಲಿ ನಂಬಿಕೆಯಿಟ್ಟಿದ್ದ ಶ್ರೀ ನಂಜುಂಡಪ್ಪನವರು ಕೆಳಸ್ತರದ ಜನರ ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯೆಗಳ ಬಗ್ಗೆ ಚಿಂತನೆ ನಡೆಸಿದ್ದು ಅಧ್ಯಯನ ಶೀಲತೆ, ದಕ್ಷತೆ ಹಾಗೂ ಪ್ರಾಮಾಣಿಕತೆಗಳ ತ್ರಿವೇಣಿ ಸಂಗಮದಂತಿದ್ದರು.

ಶ್ರೀಯುತರು ದಿನಾಂಕ 26.09.2005 ರಂದು ನಿಧನ ಹೊಂದಿದರು.

21. ಶ್ರೀ ಎಸ್.ಜಿ. ಮೈಸೂರುಮಠ

ಹಿರಿಯ ಪತ್ರಕರ್ತರಾದ ಶ್ರೀ ಎಸ್.ಜಿ. ಮೈಸೂರುಮಠ ಅವರು ವರದಿಗಾರರಾಗಿ ವೃತ್ತಿಯನ್ನು ಪ್ರಾರಂಭಿಸಿ ಹಲವಾರು ಪತ್ರಿಕೆಗಳಲ್ಲಿ ಅಂಕಣವನ್ನು ಬರೆಯುವ ಮೂಲಕ ಪ್ರಖ್ಯಾತಿಯಾಗಿದ್ದರು. ಇಂಗ್ಲೀಷ್ ಹಾಗೂ ಕನ್ನಡ ಭಾಷೆಯಲ್ಲಿ ನಿರರ್ಗಳವಾಗಿ ಬರೆಯುವ ಸಾಮರ್ಥ್ಯವನ್ನು ಹೊಂದಿದ್ದ ಶ್ರೀಯುತರು ಪತ್ರಿಕಾ ಅಕಾಡಮಿಯ ಅಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 08.12.2005 ರಂದು ನಿಧನ ಹೊಂದಿದರು.

22. ಶ್ರೀ ಕೆ. ರಾಜಾರಾವ್

ಹಿರಿಯ ಪತ್ರಕರ್ತರಾದ ಶ್ರೀ ಕೆ. ರಾಜಾರಾವ್ ಅವರು ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ದಿ ಟೈಮ್ಸ್ ಆಫ್ ಡೆಕ್ಕನ್, ಮುಂಜಾನೆ, ಸಂಡೇ ಮಿಡ್ ಡೇ, ನಗರದಲ್ಲಿ ಇಂದು ಹಾಗೂ ಇತರ ವಿವಿಧ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಹಲವಾರು ತನಿಖಾ ವರದಿಗಳ ಮೂಲಕ ರಾಜಾರಾಯರು ಪತ್ರಿಕೋದ್ಯಮದಲ್ಲಿ ಹೆಸರು ಮಾಡಿದ್ದರು.

ಶ್ರೀಯುತರು ದಿನಾಂಕ 29.12.2005 ರಂದು ನಿಧನ ಹೊಂದಿದರು.

23. ಶ್ರೀ ವಜ್ರಮುನಿ

ಕನ್ನಡ ಚಿತ್ರರಂಗದ ಖಳನಾಯಕರೆಂದೇ ಹೆಸರುಗಳಿಸಿದ್ದ ಶ್ರೀ ವಜ್ರಮುನಿ ಅವರು ಬೆಳ್ಳಿ ತೆರೆಯ ಮೇಲೆ ಹುಲಿಯಂತೆ ಅಬ್ಬರಿಸುತ್ತಿದ್ದವರು. ಪುಟ್ಟಣ್ಣ ಕಣಗಾಲ್ ನಿರ್ದೇಶನದ ಸಾವಿರ ಮೆಟ್ಟಿಲು ಚಿತ್ರದಿಂದ ಬೆಳ್ಳಿ ತೆರೆಗೆ ಬಂದ ಶ್ರೀಯುತರು ಮೂಲತಃ ರಂಗಭೂಮಿಯವರು. ಕಳೆದ ಮೂರು ದಶಕಗಳಲ್ಲಿ 300ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದರು. ಚಲನಚಿತ್ರದಲ್ಲಿ ಖಳನಾಯಕರಾಗಿದ್ದರೂ ನಿಜ ಜೀವನದಲ್ಲಿ ಮೃದು ಮನಸ್ಸಿನವರಾಗಿದ್ದರು.

ಶ್ರೀಯುತರು ದಿನಾಂಕ 05.01.2006 ರಂದು ನಿಧನ ಹೊಂದಿದರು.

24. ಶ್ರೀ ಸಿ.ಜಿ. ಕೃಷ್ಣಸ್ವಾಮಿ

ಖ್ಯಾತ ರಂಗ ನಿರ್ದೇಶಕ ಪ್ರೊ. ಸಿ.ಜಿ. ಕೃಷ್ಣಸ್ವಾಮಿ ಅವರು ಬಂಡಾಯ ಚಳವಳಿಯ ಆರಂಭದಿಂದಲೂ ಸಾಹಿತ್ಯ ಮತ್ತು ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ರಂಗ ಚಟುವಟಿಕೆಯನ್ನು ಸಮುದಾಯ ಚಳವಳಿಯಾಗಿ ಕಟ್ಟುವಲ್ಲಿ ಶ್ರಮಿಸಿದ್ದವರು. ಬಂಡಾಯ, ಸಮುದಾಯ ರೈತ ಚಳವಳಿಗಳಲ್ಲಿ ದಶಕಗಳ ಕಾಲ ದುಡಿದಿದ್ದ ಸಿ.ಜಿ.ಕೆ., ಗಾಂಧಿ ವಿಚಾರಧಾರೆಯ ಬಗ್ಗೆ ಆಳವಾದ ಪ್ರೀತಿ ಮತ್ತು ಅವುಗಳನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕು ಎಂಬ ಕಾಳಜಿ

ಹೊಂದಿದ್ದವರು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಗಾಂಧಿ ಅಧ್ಯಯನ ಕೇಂದ್ರವನ್ನು ಕಟ್ಟಿ ಬೆಳೆಸಿದ್ದವರು. ಕರ್ನಾಟಕ ನಾಟಕ ಅಕಾಡಮಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಸಿ.ಜಿ.ಕೆ. ಅವರು ಸಾಣೆಹಳ್ಳಿಯ ಶಿವ ಸಂಚಾರ ರೆಪರ್ಟರಿ ಗ್ರೀಕ್ ಮಾದರಿಯ ರಂಗ ಮಂದಿರದ ರೂವಾರಿಗಳಲ್ಲಿ ಒಬ್ಬರಾಗಿದ್ದರು. ರಾಜ್ಯೋತ್ಸವ, ಅಂಬೇಡ್ಕರ್, ಶಿವಕುಮಾರ್ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರು ದಿನಾಂಕ 11.01.2006 ರಂದು ನಿಧನ ಹೊಂದಿದರು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ತಾವು ಮಂಡಿಸಿರುವಂತಹ ಸಂತಾಪ ಸೂಚನೆಗಳಿಗೆ ಸಂಬಂಧಪಟ್ಟ ನಿರ್ಣಯವನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಟ್ಟಿದ್ದು, ಒಟ್ಟು 24 ಜನ ಗಣ್ಯರು ಹೋದ ಸದನ ಹಾಗೂ ಈ ಸದನದ ಮಧ್ಯದ ಅವಧಿಯಲ್ಲಿ ನಮ್ಮನ್ನಗಲಿದ್ದಾರೆ. ವಿಶೇಷವಾಗಿ ನಮ್ಮ ದೇಶದ ಬಹಳಷ್ಟು ನಿಮ್ನ ವರ್ಗದ ಪರಿಶಿಷ್ಟ ಜಾತಿಯ ಮತ್ತು ವಿಶೇಷವಾಗಿ ಅಂಬೇಡ್ಕರ್ ವಾದದ ಮೇಲೆ, ಆ ಒಂದು ವಿಚಾರಧಾರೆಯಲ್ಲಿ ಹೆಚ್ಚಿನ ಶ್ರದ್ಧೆ ಇಟ್ಟಿದ್ದಂತಹ ಶ್ರೀ ಕೆ.ಆರ್. ನಾರಾಯಣನ್ ಅವರು, ಕೇಂದ್ರದ ಸಚಿವರಾಗಿ, ರಾಜ್ಯಪಾಲರಾಗಿ ರಾಷ್ಟ್ರಪತಿಯಾಗಿ ಹಾಗೂ ಉಪ ರಾಷ್ಟ್ರಪತಿಯಾಗಿ ಕೆಲಸ ಮಾಡಿದ್ದಾರೆ. ಅವರು, ತಮ್ಮ ಜೀವನ ಕಾಲದಲ್ಲಿ ಈ ರಾಷ್ಟ್ರದ ಸಮಸ್ಯೆಗಳ ಬಗ್ಗೆ ಮತ್ತು ವಿಶೇಷವಾಗಿ ಶೋಷಿತ ಜನಾಂಗದ ಬಗ್ಗೆ ಕಳಕಳಿ ಇದ್ದಂತಹ ಒಬ್ಬ ವ್ಯಕ್ತಿ. ನಾವೇನು ಫಿಲಾಸಫರ್ ಎಂದು ಹೇಳುತ್ತೇನೆ, ಅಂತಹ ಒಬ್ಬ ವಿಚಾರವಾದಿ, ಅವರನ್ನು ದೇಶ ಬಹಳ ಗೌರವದಿಂದ ಕಾಣುತ್ತಿತ್ತು. ಈ ದೇಶದಲ್ಲಿ ಇರುವಂತಹ ಪ್ರಜಾಪ್ರಭುತ್ವದಲ್ಲಿ, ಹಳ್ಳಿಯಿಂದ ದಿಲ್ಲಿಯವರೆಗೆ ರಾಷ್ಟ್ರಪತಿ ಭವನದ ಕಡೆ ನೋಡುವಂತಹ ಕಾಲದಲ್ಲಿ ನಮ್ಮ ಬಗ್ಗೆ ವಿಚಾರ ಮಾಡತಕ್ಕಂಥ ಒಬ್ಬ ರಾಷ್ಟ್ರಪತಿ ಈ ದೇಶದಲ್ಲಿ ಇದ್ದಾರೆ ಎನ್ನುವ ಭಾವನೆ ನಿರ್ಮಾಣ ಮಾಡತಕ್ಕಂಥ ರೀತಿಯಲ್ಲಿ ಮುತ್ಸದ್ದಿ, ದಾರ್ಶನಿಕ ಹಾಗೂ ಒಳ್ಳೆಯ ವಿಚಾರವಂತಹ ರಾಷ್ಟ್ರಪತಿಗಳಾಗಿದ್ದಂತವರು ಶ್ರೀ ಕೆ.ಆರ್. ನಾರಾಯಣನ್ ರವರು. ಇದೇ ರೀತಿಯಾಗಿ ಪಿ.ಎಂ. ಸಯೀದ್ ಅವರು ನಮಗೆ ಮತ್ತು ಮಾನ್ಯ ಖರ್ಗೆಯವರಿಗೆ ಬಹಳ ಸ್ನೇಹಿತರಾಗಿದ್ದವರು. 1968ರಲ್ಲಿ ಕಾಂಗ್ರೆಸ್ ಇಬ್ಭಾಗವಾದಮೇಲೆ ಶ್ರೀಮಾನ್ ತುಳಸಿದಾಸಪ್ಪ ಅವರ ಜೊತೆಗೆ ಆ ಒಂದು ಪ್ರದೇಶದಿಂದ 9 ಬಾರಿ ಆರಿಸಿಬಂದಂತಹ ನಿಷ್ಠಾವಂತರು. ಶ್ರೀಮತಿ ಇಂದಿರಾಗಾಂಧಿಯವರಿಗೆ ಹಾಗೂ ಶ್ರೀ ರಾಜೀವ್‌ಗಾಂಧಿಯವರಿಗೆ, ಮತ್ತು ಈಗ ಶ್ರೀಮತಿ ಸೋನಿಯಾಗಾಂಧಿಯವರಿಗೆ ಗೊತ್ತಿದ್ದಂತೆ ಕಾಂಗ್ರೆಸ್ ಪಕ್ಷದಲ್ಲಿ ಇದ್ದು ನಿಷ್ಠೆಯಿಂದ ಕೆಲಸ ಮಾಡತಕ್ಕಂಥ ವ್ಯಕ್ತಿಯಾಗಿದ್ದ ಮಾನ್ಯ ಸಯೀದ್‌ರವರು, ಹೋದ ಚುನಾವಣೆಯಲ್ಲಿ ಕೇವಲ 300 ಮತಗಳಿಂದ ಪರಾಜಿತರಾದರು. ಆದರೂ ಕೂಡ ಅವರು ನಮ್ಮ ದೇಶದಲ್ಲಿರುವ ಹಳ್ಳಿ ಪ್ರದೇಶಕ್ಕೆ ವಿದ್ಯುದ್ಧೀಕರಣ ಮಾಡುವ ನಿಟ್ಟಿನಲ್ಲಿ ಏನು ಸಮಸ್ಯೆಗಳು ಇತ್ತು, ಅಂತಹ ಸಂದರ್ಭದಲ್ಲಿ ಅವರು ಕೇಂದ್ರದ ಮಂತ್ರಿಗಳಾಗಿದ್ದಾಗ ನಮ್ಮ ಕರ್ನಾಟಕಕ್ಕೆ 8–10 ಬಾರಿ ಬಂದು ಎಲ್ಲಾ ಕಡೆಗೆ ವಿದ್ಯುದ್ಧೀಕರಣ ಮಾಡಿ, ಕರ್ನಾಟಕ ರಾಜ್ಯದಲ್ಲಿ ಇರುವಂತಹ ವಿದ್ಯುತ್ ಸಮಸ್ಯೆಯನ್ನು ಬಗೆಹರಿಸುವ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಏಕೆಂದರೆ ಅವರಿಗೆ ಕರ್ನಾಟಕದ ಬಗ್ಗೆ ಅಷ್ಟೊಂದು ಅಟ್ಯಾಚ್‌ಮೆಂಟ್ ಇತ್ತು. ಅವರಿಗೆ, ನಾನು ಮೈಸೂರು ಹಾಗೂ ಮಂಗಳೂರಿನಲ್ಲಿ ಓದಿದ್ದೇನೆ, ಆದುದರಿಂದ ಕರ್ನಾಟಕಕ್ಕೆ ಈ ಕೆಲಸ ಮಾಡಬೇಕೆನ್ನುವ ಅಭಿಪ್ರಾಯವಿತ್ತು. ಈಗ ಅವರ ಬಗ್ಗೆ ಮತ್ತೊಂದು ವಿಚಾರ ಹೇಳಿದರೆ ಅತಿಶಯೋಕ್ತಿಯಾಗಲಾರದು ಹಾಗೂ ಅದನ್ನು ಹೇಳಬಾರದೆಂದೇನೂ ಕೂಡ ಇಲ್ಲ. ಹೋದಸಲ ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲಿ ನಾಯಕರನ್ನು

ಆರಿಸುವಂತಹ ಸಂದರ್ಭದಲ್ಲಿ ಪಿ.ಎಂ. ಸಯೀದ್ ಹಾಗೂ ವಿಲಾಸ್‌ರಾವ್ ದೇಶ್‌ಮುಖ್‌ರವರು ಬಂದಿದ್ದರು. ಆಗ ನಮಗೆ ಹೆಚ್ಚಿನ ಸಹಾಯ ಮಾಡಿದರು. ನೀವು 1968ರಿಂದ ಕೂಡ ಕಾಂಗ್ರೆಸ್ ಪಕ್ಷದಲ್ಲಿದ್ದೀರಿ ಹಾಗೆ ನಾನೂ ಕೂಡ ಇದ್ದೇನೆ. ನಿಮ್ಮನ್ನು ಶಾಸಕಾಂಗ ಪಕ್ಷದ ನಾಯಕರನ್ನು ಮಾಡಿರುವುದು ತುಂಬಾ ಸಂತೋಷವಾಗಿದೆ ಎನ್ನುವಂತಹ ಮಾತನ್ನು ಆಡಿದರು. ಅಲ್ಲದೆ ಮಾನ್ಯ ತುಳಸೀ ದಾಸಪ್ಪನವರು ಅಪಲೋ ಹಾಸ್ಪಿಟಲ್‌ನಲ್ಲಿ ಇದ್ದಾಗ, ನೇರವಾಗಿ ದೂರವಾಣಿ ಮಾಡಿ ನೋಡಲು ಹೋಗಿ ಎಂದು ಹೇಳಿದ್ದರಲ್ಲದೆ, ಆ ಸಂದರ್ಭದಲ್ಲಿ ಪಾರ್ಲಿಮೆಂಟ್ ನಡೆದರೂ ಕೂಡ ಅವರು ಇಲ್ಲಿಗೆ ಬಂದು ಹೋದರು. ಮಾನ್ಯ ತುಳಸೀದಾಸಪ್ಪನವರು ನಿಧನ ಹೊಂದಿದಾಗ ಕೂಡ ಅವರು ಬಂದು ಹೋಗಿದ್ದರು. ಅವರು ಒಬ್ಬ ಮಾನವೀಯತೆಯ ದೃಷ್ಟಿಯನ್ನು ಇಟ್ಟುಕೊಂಡು ಅಲ್ಪಸಂಖ್ಯಾತರ ನಾಯಕರಾಗಿ ಈ ದೇಶದಲ್ಲಿದ್ದಂತಹ ಅವರು, ಲೋಕಸಭೆಯ ಉಪಾಧ್ಯಕ್ಷರಾಗಿ ಕೂಡ ಕೆಲಸ ಮಾಡಿದ್ದಾರೆ. ಅವರನ್ನು ಕೂಡ ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತಿದ್ದೇನೆ.

ಇನ್ನು ಪಿ.ಪಿ. ಹೆಗಡೆ ಅವರು ಕೂಡ ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು. ಅವರು ಅಂಬೇಡ್ಕರ್ ವಾದದಲ್ಲಿ ನಂಬಿಕೆಯಿಟ್ಟವರು. ಅವರು ಸಮರ್ಪಣಾ ಭಾವನೆಯಿಂದ ಕೆಲಸವನ್ನು ಮಾಡುವಂತಹ ಹಾಗೂ ಶಾಸಕರಿಗೆ ಏನು ಕಮಿಟ್‌ಮೆಂಟ್ ಬೇಕಾಗುತ್ತದೆ ಆ ಒಂದು ಗುಣ ಅವರಲ್ಲಿ ಇತ್ತು. ಇನ್ನು ಶ್ರೀ ವಿ. ಕೃಷ್ಣಾರಾವ್ ಅವರು ನಾಲ್ಕು ಬಾರಿ ಲೋಕಸಭಾ ಸದಸ್ಯರಾಗಿದ್ದರು. ದಿವಂಗತ ಪಿ.ವಿ. ನರಸಿಂಹರಾವ್ ಈ ದೇಶದ ಪ್ರಧಾನಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಅವರ ನಿಕಟ ವರ್ತಿಗಳಾಗಿದ್ದರು. ಅವರು ಬಹಳ ಸರಳ ಸ್ವಭಾವದವರು. ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದವರು.

ಇನ್ನು ಶ್ರೀ ಜಿ. ನಾರಾಯಣ್‌ಕುಮಾರ್‌ರವರು, ವಾಟಾಳ್ ಪಕ್ಷದಲ್ಲಿ ಜೊತೆಯಾಗಿದ್ದರು. ಅದಾದನಂತರ ಅವರು ಬೇರೆಯಾದರು. ಆದರೂ ಕೂಡ ಕನ್ನಡದ ಬೆಳವಣಿಗೆ ಬಗ್ಗೆ ಮತ್ತು ಬೆಂಗಳೂರಿನಲ್ಲಿ ಇರುವಂತಹ ಕನ್ನಡಿಗರ ಸಮಸ್ಯೆಗಳ ಬಗ್ಗೆ ಪರಿಣಾಮಕಾರಿಯಾಗಿ ಹೋರಾಡುವಂತಹ ವ್ಯಕ್ತಿಗಳು. ಅವರನ್ನು ಕೂಡ ನಾವು ಕಳೆದುಕೊಂಡಿದ್ದೇವೆ.

ಇನ್ನು ಅದೇರೀತಿಯಾಗಿ ಶ್ರೀ ಶಂಕರ್ ಎಸ್. ಕರನಿಂಗ್ ರವರು ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು. ಅಲ್ಲದೆ ಶ್ರೀ ಬಾಬುರಾವ್ ಅಣ್ಣಪ್ಪ ಬೋಳಶೆಟ್ಟಿ, ಶ್ರೀ ಕೆ.ಎಂ. ಪುಟ್ಟು, ಶ್ರೀ ಯು.ಕೆ. ಶಾಮಣ್ಣ, ಶ್ರೀ ಭೀಮಸೇನಿ ಕೊಂಡಯ್ಯ ಹಾಗೂ ಶ್ರೀ ಸಿ.ವಿ. ಪುಡಕಲ ಕಟ್ಟಿ, ಇವರು ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿದ್ದರು. 1980ರಲ್ಲಿ ಮಾನ್ಯ ದಿವಂಗತ ಗುಂಡೂರಾವ್‌ರವರು ಮುಖ್ಯಮಂತ್ರಿಯಾದಂತಹ ಸಂದರ್ಭದಲ್ಲಿ ನಾನು ಹಾಗೂ ಖರ್ಗೆಯವರು, ಧಾರವಾಡದ ರೋಣದಲ್ಲಿ ಅವರು ಸ್ಪರ್ಧೆ ಮಾಡಿದಂತಹ ಸಂದರ್ಭದಲ್ಲಿ ಹೋಗಿದ್ದೆವು. ಅವರು ಕೂಡ ಸಂಭಾವಿತ ವ್ಯಕ್ತಿ. ಮತ್ತು ರೈತರ ಬಗ್ಗೆ ಹೆಚ್ಚಿನ ಕಳಕಳಿ ಇಟ್ಟುಕೊಂಡು ಕೆಲಸ ಮಾಡಿದಂತಹವರು.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ, ಇವರು ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದಂತಹ, ಹಾಸನ ಜಿಲ್ಲೆಯಿಂದ ಮೂರ್‍ನಾಲ್ಕು ಬಾರಿ ಆರಿಸಿ ಬಂದಂತಹ ವ್ಯಕ್ತಿ.

ಶ್ರೀ ಹೆಚ್.ಎಲ್. ನಾಗೇಗೌಡರು, ಇವರು ಜಾನಪದ ಸಾಹಿತ್ಯದಲ್ಲಿ ವಿದ್ವಾಂಸರಾಗಿದ್ದು, ಅವರು ಯಾವಾಗಲೂ ನಾವು ಗಾಲ್ಫ್ ಕ್ಲಬ್‌ಗೆ ವಾಕಿಂಗ್ ಹೋದಾಗ ಅವರೂ ಬರುತ್ತಿದ್ದರು. ಅವರು ಯಾವಾಗಲೂ ಕೂಡ ವಿಚಾರ ವಿಮರ್ಶೆ ಮಾಡುತ್ತಿದ್ದರು. ನಾನು ಮುಖ್ಯಮಂತ್ರಿ ಆದಮೇಲೂ

ಕೂಡ ಆ ಒಂದು ಜಾನಪದ ಲೋಕಕ್ಕೆ ಹೆಚ್ಚಿನ ಅನುದಾನ ಕೊಡಬೇಕು ಹಾಗೂ ಸಿಬ್ಬಂದಿಗಳಿಗೆ ಹೆಚ್ಚಿನ ಮಾನ್ಯತೆ ನೀಡಬೇಕು ಎಂದು ಅವರು ನಿರಶನ ಮಾಡಿದ್ದರು. ಆಗ ಅವರ ಜೊತೆ ಮಾತನಾಡಿ ಅವರ ಸಮಸ್ಯೆಗಳನ್ನು ಬಗೆಹರಿಸಿಕೊಟ್ಟಿದ್ದೆವು. ಅವರು ವಿಧಾನಪರಿಷತ್ತಿನ ಸದಸ್ಯರಾಗಿ ವಿಶೇಷವಾಗಿ ಜಾನಪದದಲ್ಲಿ ಹೆಚ್ಚಿನ ಕೆಲಸವನ್ನು ಮಾಡಿದ್ದರು.

ಡಾ: ಎಂ.ಸಿ. ಮೋದಿಯವರು ನಮ್ಮ ರಾಜ್ಯದ ಒಬ್ಬ ಹಿರಿಯ ಡಾಕ್ಟರ್ ಆಗಿದ್ದರು. ಮತ್ತು ಗಾಂಧಿವಾದಿಗಳು ಆಗಿದ್ದರು. ಇವರು ಈ ದೇಶದಲ್ಲಿರುವಂತಹ ಬಡವರ ಬಗ್ಗೆ ಹೆಚ್ಚಿನ ಸಹಾಯವನ್ನು ಮಾಡಿದ್ದಾರೆ. ಅದೇ ರೀತಿಯಲ್ಲಿ ಶ್ರೀಮತಿ ಶಾಂತಾದೇವಿ ಮಾಳಾವಾಡರವರು, ಡಾ: ಎಲ್.ಆರ್. ಹೆಗಡೆಯವರು ಮತ್ತು ಡಾ: ಡಿ.ಎಂ. ನಂಜುಂಡಪ್ಪನವರು he was an economist. ಮತ್ತು ಉಪ ಕುಲಪತಿಗಳಾಗಿ ಮತ್ತು ಪ್ಲಾನಿಂಗ್ ಕಮೀಷನ್‌ನಲ್ಲಿ ಡೆಪ್ಯೂಟಿ ಚೇರ್ಮನ್ ಆಗಿ ಸೇವೆ ಮಾಡಿದ್ದಾರೆ. ಅದೇ ರೀತಿಯಲ್ಲಿ ರೈಲ್ವೆಯಲ್ಲೂ ಸಹ ಸಹಾಯ ಮಾಡುವ ರೀತಿಯಲ್ಲಿ ಕೆಲಸವನ್ನು ಮಾಡಿದ್ದಾರೆ. ಅದರಲ್ಲೂ ವಿಶೇಷವಾಗಿ ಕಳೆದ ಬಾರಿ ಶ್ರೀ ಎಸ್.ಎಂ.ಕೃಷ್ಣರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ, ಅವರಿಗೆ ಬೀದರ್‌ನಿಂದ ಬೆಳಗಾಂನವರೆಗೂ ಪರಿಸ್ಥಿತಿ ಏನು ಇದೆಯೆಂಬ ಬಗ್ಗೆ, ಉತ್ತರ ಕರ್ನಾಟಕದ ಭಾಗಗಳಲ್ಲಿ ಇರುವಂತಹ ಸಮಸ್ಯೆಗಳ ಬಗ್ಗೆ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ, ಬೀದರ್‌ನಲ್ಲಿ ಪಶು ವಿದ್ಯಾನಿಲಯದ ಬಗ್ಗೆಯಾಗಲಿ, ಮತ್ತೆ ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯದ ಬಗ್ಗೆ, ಮತ್ತೆ ಹನಿ ನೀರಾವರಿ ನಿಗಮದ ಬಗ್ಗೆ, ಈ ಉತ್ತರ ಕರ್ನಾಟಕದ ಅಭಿವೃದ್ಧಿಗೆ 9,600ಕೋಟಿ ರೂಪಾಯಿಗಳು ಬೇಕಾಗಿದೆಯೆಂಬ ಬಗ್ಗೆ ಇವರು ತಮ್ಮ ರಿಪೋರ್ಟಿನಲ್ಲಿ ಕೊಟ್ಟಿದ್ದಾರೆ. ಕಳೆದ ವರ್ಷ ಈ ರಾಜ್ಯಕ್ಕೆ ಮಾನ್ಯ ಪ್ರಧಾನಮಂತ್ರಿಯವರು ಬಂದಿದ್ದಾಗ, ಡಾ: ಡಿ.ಎಂ. ನಂಜುಂಡಪ್ಪನವರ ವರದಿಯಲ್ಲಿ ಈ 9,600 ಕೋಟಿ ರೂಪಾಯಿಗಳ ಖರ್ಚು ಮಾಡಬೇಕೆಂಬುದು ಏನು ಇದೆ, ಅದರ ಅರ್ಧದಷ್ಟು ಹಣವನ್ನು ಕೇಂದ್ರ ಸರ್ಕಾರ ಕೊಡಬೇಕೆಂಬ ಬಗ್ಗೆ ಹೇಳಿದ್ದೇವೆ. ಅವರ ವರದಿ ಯಾವಾಗಲೂ ಉತ್ತರ ಕರ್ನಾಟಕ ಭಾಗಕ್ಕೆ ಅನುಕೂಲವಾಗುವಂತೆ ಕೊಟ್ಟಿದ್ದಾರೆ. ಆರ್ಟಿಕಲ್ 371 ಏನು ಇದೆ, ಆ ಭಾಗದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೋಸ್ಕರ, ಅವರು ರಚನೆ ಮಾಡಿರುವ ಪುಸ್ತಕ ಏನು ಇದೆ, ಅದರಲ್ಲಿ ನಮ್ಮ ಜನರಿಗೆ ಒಳ್ಳೆಯದಾಗುವ ರೀತಿಯಲ್ಲಿ ರಿಪೋರ್ಟ್ ಅನ್ನು ಕೊಟ್ಟಿದ್ದಾರೆ. ನಮ್ಮ ಉತ್ತರ ಕರ್ನಾಟಕದ ಭಾಗಕ್ಕೆ ಏನು ಸವಲತ್ತುಗಳನ್ನು ಕೊಡಬೇಕೆಂಬ ಬಗ್ಗೆ ತಮ್ಮ ವರದಿಯಲ್ಲಿ ಏನು ನಮೂದು ಮಾಡಿದ್ದಾರೆ, ಅದರ ಬಗ್ಗೆ ನಾನು ತಿಳಿಯಬಯಸುತ್ತೇನೆ. ಇನ್ನು ಶ್ರೀಮತಿ ಶಾಂತಾದೇವಿ ಮಾಳವಾಡರವರು ಹಾಗೂ ಡಾ: ಎಲ್.ಆರ್. ಹೆಗಡೆಯವರು, ಅದೇ ರೀತಿಯಲ್ಲಿ ಶ್ರೀ ಎಸ್.ಜಿ. ಮೈಸೂರು ಮಠ ರವರು ಪ್ರಜಾವಾಣಿ ದಿನಪತ್ರಿಕೆಯ ಹಿರಿಯ ಪತ್ರಕರ್ತರಾಗಿದ್ದಾರೆ. ಇವರು ಯಾವಾಗಲೂ ಈ ರಾಜ್ಯದ ಬಗ್ಗೆ ಕನಸು ಕಾಣುವಂಥ ಎಷ್ಟೋ ಮುಖ್ಯಮಂತ್ರಿಗಳ ಜೊತೆಗೆ ಮತ್ತು ರಾಜಕಾರಣಗಳ ಜೊತೆಗೆ ವಿಚಾರವನ್ನು ಮಾಡಿ, ತಮ್ಮ ಲೇಖನಿಯ ಮುಖಾಂತರ ಈ ರಾಜ್ಯದ ಜನತೆಗೆ ಹೆಚ್ಚಿನ ವಿಚಾರವನ್ನು ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿಯಲ್ಲಿ ಕೆ. ರಾಜಾರಾವ್‌ರವರು ಸಹ "ಸಂಯುಕ್ತ ಕರ್ನಾಟಕ" ದಿನಪತ್ರಿಕೆಯ ವರದಿಗಾರರಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ಇದ್ದರು, ಇಲ್ಲಿಯೂ ಇದ್ದರು. ಅವರ ಆರೋಗ್ಯ ಸರಿಯಿಲ್ಲದಿದ್ದಾಗ ಅವರನ್ನು ನಾನು ಭೇಟಿಯಾಗಿದ್ದೆ. ಅವರು ಕೂಡ ಈ ಸಂಯುಕ್ತ

ಕರ್ನಾಟಕ ಪತ್ರಿಕೆಗೆ ಸೇವೆಯನ್ನು ಸಲ್ಲಿಸಿದ್ದಾರೆ. ಇನ್ನು ಶ್ರೀ ವಜ್ರಮುನಿಯವರು ಒಮ್ಮೆ ಬಸವನಗುಡಿ ಕ್ಷೇತ್ರಕ್ಕೆ ಸ್ಪರ್ಧಿಸಿದ್ದರು, ಮಾನ್ಯ ರಾಮಲಿಂಗಾರೆಡ್ಡಿಯವರ ಮತ್ತು ಮಾನ್ಯ ಚಂದ್ರಶೇಖರ್‌ರವರ ಜೊತೆಯಲ್ಲಿ ಸಾಕಷ್ಟು ಸಲ ವಿಚಾರ ವಿಮರ್ಶೆಯನ್ನು ಮಾಡಿದ್ದೇವೆ. ನಮ್ಮ ಚಲನಚಿತ್ರ ಜಗತ್ತಿನಲ್ಲಿ ಪರಿಣಾಮಕಾರಿಯಾಗಿ, ಜನರಿಗೆ ಮೆಚ್ಚುಗೆ ಆಗುವ ರೀತಿಯಲ್ಲಿ ಅವರು ಪಾತ್ರವನ್ನು ಮಾಡಿದ್ದಾರೆ. ಅದೇ ರೀತಿಯಲ್ಲಿ ಶ್ರೀ ಸಿ.ಬಿ. ಕೃಷ್ಣಸ್ವಾಮಿಯವರನ್ನು ಸಹ ಕಳೆದುಕೊಂಡಿದ್ದೇವೆ. ಇವರೆಲ್ಲರ ನಿಧನಕ್ಕೆ ತಾವು ಈ ಸದನದಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಏನು ಪ್ರಸ್ತಾಪ ಮಾಡಿದ್ದೀರಿ, ಅದನ್ನು ನಾನು ಅನುಮೋದಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ಸದನದಲ್ಲಿ ತಂದಿರುವಂತಹ ಸಂತಾಪ ಸೂಚನೆಗೆ ಅನುಮೋದನೆಯನ್ನು ಸೂಚಿಸುತ್ತೇನೆ. ನಮ್ಮ ಭಾರತ ದೇಶದ ರಾಷ್ಟ್ರಪತಿಗಳಾಗಿದ್ದ ಶ್ರೀ ಕೆ.ಆರ್. ನಾರಾಯಣನ್ ಹಾಗೂ ಇತರ ಅನೇಕ ಜನ ಗಣ್ಯರು ಯಾರು ತಮ್ಮ ಜೀವನವನ್ನು ಈ ನಾಡಿದ ಈ ದೇಶದ ಅಭಿವೃದ್ಧಿಗಾಗಿ ಸರ್ವಸ್ವವನ್ನು ತ್ಯಾಗ ಮಾಡಿದಂಥವರಾಗಿದ್ದಾರೆ. ಇವತ್ತು ತತ್ವ, ನೀತಿ, ಸಿದ್ಧಾಂತ, ಇದಕ್ಕೆ ತಿಲಾಂಜಲಿಯನ್ನು ನೀಡಿ, ಅಧಿಕಾರದ ಉಳಿವಿಗಾಗಿ, ಎಲ್ಲಾ ರೀತಿಯ ವಾಮ ಮಾರ್ಗಗಳನ್ನು ಅನುಸರಿಸಲು ಸಿದ್ಧವಿರುವಂತಹ, ಒಂದು ಕಾಲ ಘಟ್ಟದಲ್ಲಿ, ಗಂಧದ ಕೊರಡಿನಂತೆ ತಮ್ಮ ಜೀವನವನ್ನು ಈ ದೇಶಕ್ಕಾಗಿ, ಈ ನಾಡಿಗಾಗಿ, ಸಮರ್ಪಣೆ ಮಾಡಿದಂಥವರು. ದೇಶ ಕಂಡಂತಹ ಅಪರೂಪದ ವ್ಯಕ್ತಿ, ಭಾರತದ ಮಾಜಿ ರಾಷ್ಟ್ರಪತಿಯವರಾದ ಶ್ರೀ ಕೆ.ಆರ್. ನಾರಾಯಣನ್‌ರವರು ಆಗಿದ್ದಾರೆ. ಇವರು ಬಹಳ ಸರಳ, ಸಜ್ಜನಿಕೆಯ ವ್ಯಕ್ತಿಯಾಗಿದ್ದರು, ಮೃದುಭಾಷಿಯಾಗಿದ್ದರು. ಹಲವು ಬಾರಿ ಸರ್ಕಾರ ತೆಗೆದುಕೊಂಡಂತಹ ತೀರ್ಮಾನವನ್ನು ಪರಿಶೀಲನೆ ಮಾಡಿ, ಇದು ಸರಿಯಿಲ್ಲ ಎಂದು ವಾಪಸ್ಸು ಕಳುಹಿಸಿಕೊಟ್ಟರು. ಇದು ಸರಿಯಿಲ್ಲವೆಂದು ದಿಟ್ಟತನದ ಅಭಿಪ್ರಾಯವನ್ನು ವ್ಯಕ್ತಪಡಿಸಿದಂತಹ ವ್ಯಕ್ತಿಗಳು ಬಹಳ ಅಪರೂಪ, ಅಂತಹ ವ್ಯಕ್ತಿಯನ್ನು ಕಳೆದುಕೊಂಡು ನಮ್ಮ ದೇಶ ಮಾತ್ರವಲ್ಲ, ಇಡೀ ಜಗತ್ತೆ ದೊಡ್ಡ ವ್ಯಕ್ತಿಯನ್ನು ಕಳೆದುಕೊಂಡ ನೋವನ್ನು ಅನುಭವಿಸುತ್ತಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಇನ್ನು ಶ್ರೀ ಪಿ.ಎಂ. ಸಯೀದ್‌ರವರು ಉತ್ತಮ ವಾಗ್ಮಿಗಳಾಗಿದ್ದರು. ಇವರು ನಮ್ಮ ಚಿಕ್ಕಮಗಳೂರಿನಲ್ಲಿ ಶಿಕ್ಷಣವನ್ನು ಪಡೆದರು. ಲೋಕಸಭೆಯಲ್ಲಿ ಕನ್ನಡ ಭಾಷೆಯಲ್ಲಿ ಮಾತನಾಡಿದರು. ಒಬ್ಬ ಕನ್ನಡಿಗರ ಹೆಮ್ಮೆಯ ಪುತ್ರನನ್ನು ಕಳೆದುಕೊಂಡು ಈ ನಾಡು ತಬ್ಬಲಿಯಾಗಿದೆ. ಅದೇ ರೀತಿಯಲ್ಲಿ ಡಾ: ಡಿ.ಎಂ. ನಂಜುಂಡಪ್ಪನವರು, ಇವರ ಬಗ್ಗೆ ನಾವು ಎಷ್ಟೇ ಮಾತುಗಳನ್ನು ಹೇಳಿದರೂ ಸಹ, ಉತ್ತರ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಬಹಳ ಅಧ್ಯಯನವನ್ನು ಮಾಡಿ, ಇವರು ಸಾಮಾನ್ಯ, ಕಡುಬಡವರ ಜೀವನದಲ್ಲಿ ಒಂದು ಬದಲಾವಣೆ ಆಗಬೇಕು. ಇಡೀ ಕರ್ನಾಟಕ ರಾಜ್ಯದ ಅಭಿವೃದ್ಧಿಯ ಪ್ರಶ್ನೆ ಬಂದಾಗ, ಸರಿ ಸಮಾನವಾಗಿ ಸಂಪತ್ತನ್ನು ಹಂಚಬೇಕು, ಅವರು ಅಭಿವೃದ್ಧಿಯಾಗಬೇಕೆಂಬ ಬಗ್ಗೆ ವರದಿಯನ್ನು ಏನು ಕೊಟ್ಟಿದ್ದಾರೆ ಅದನ್ನು ಸಂಪೂರ್ಣವಾಗಿ ಜಾರಿಗೆ ತಂದಾಗ ಮಾತ್ರ, ಅವರ ಆತ್ಮಕ್ಕೆ ಶಾಂತಿ ದೊರೆದಂತೆ ಆಗುತ್ತದೆ. ಆ ಕೆಲಸವನ್ನು ನಾವು ಮಾಡೋಣವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಡಾ: ಎಂ.ಆರ್. ತಂಗಾರವರು, ನಮ್ಮ ಪಕ್ಷದಲ್ಲಿ ಇದ್ದು, ಇಡೀ ಉತ್ತರ ಕರ್ನಾಟಕದ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸುತ್ತಾ, ಒಬ್ಬ ಸಜ್ಜನಿಕೆಯ, ಅಪರೂಪದ ಮೂರ್ತಿಯಾಗಿ, ಅನುಭವದಿಂದ ಒಬ್ಬ ಉತ್ತಮ ವಾಗ್ಮಿಯಾಗಿ ಕೆಲಸವನ್ನು

ಮಾಡಿದರು. ಅವರು ಯಾವುದೇ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕೆಂದರೆ, ಅವರು ಮೊದಲು ಗಂಟೆಗಟ್ಟಲೆ ಅಭ್ಯಾಸವನ್ನು ಮಾಡಿ, ಅಂಕಿಅಂಶಗಳನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದರು. ಅವರು ವಿಧಾನಪರಿಷತ್ತಿನಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷವೆಂದು ವ್ಯತ್ಯಾಸವನ್ನು ತೋರದೇ ಅವರ ಮಾತಿಗೆ ಎಲ್ಲರೂ ತಲೆತೂಗುತ್ತಿದ್ದರು. ಅವರು ಮಾಡಿದಂತಹ ಉತ್ತಮವಾದಂತಹ ವಿಷಯಗಳ ಭಾಷಣವನ್ನು, ಗ್ರಂಥಾಲಯ ಇಲಾಖೆಯವರು ಒಂದು ಉತ್ತಮ ಮಸ್ತಕದ ರೂಪದಲ್ಲಿ ಹೊರತರುವ ಮೂಲಕ ಇದು ಮುಂದಿನ ಪೀಳಿಗೆಗೆ ಉಪಯುಕ್ತವಾಗುವ ರೀತಿಯಲ್ಲಿ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಡಾ: ಎಂ.ಸಿ. ಮೋದಿಯವರು ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಯನ್ನು ಪಡೆದಂಥವರು. ಅವರು ಎಷ್ಟೋ ಜನರಿಗೆ, ಲಕ್ಷಾಂತರ ಜನರಿಗೆ ಕಣ್ಣನ್ನು ಕೊಟ್ಟರು. ಬಹಳ ಸರಳವಾಗಿ ಇದ್ದಂಥ ವ್ಯಕ್ತಿಯಾಗಿದ್ದ ಡಾ: ಎಂ.ಸಿ. ಮೋದಿಯವರಂಥವರನ್ನು ಈ ದೇಶ ಇನ್ನೊಬ್ಬರನ್ನು ಕಾಣುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಕನ್ನಡಾಂಬೆ ಇಂತಹ ವ್ಯಕ್ತಿಗೆ ಇಲ್ಲಿ ಜನ್ಮವನ್ನು ಕೊಟ್ಟು ಈ ಕ್ಷೇತ್ರದಲ್ಲಿ ಸೇವೆಯನ್ನು ಮಾಡಲು ಅವಕಾಶವನ್ನು ಮಾಡಿ ಕೊಟ್ಟಿತ್ತು. ಅವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರುತ್ತಿದ್ದೇನೆ. ಅದೇ ರೀತಿಯಲ್ಲಿ ಅನೇಕ ಜನಹಿರಿಯರು ನಮ್ಮನ್ನು ಅಗಲಿದ್ದಾರೆ. ಅವರ ಬಗ್ಗೆ ಮಾತನಾಡುವುದಕ್ಕೆ ಹೋದರೆ, ಇಡೀ ದಿವಸ ಚರ್ಚೆ ಮಾಡಬೇಕಾಗುತ್ತದೆ. ಇವತ್ತು ಬಹಳ ಅಪರೂಪದ, ಪ್ರಮುಖವಾದಂತಹ ವಿಷಯಗಳು ಸದನದಲ್ಲಿ ಪ್ರಸ್ತಾಪ ಆಗಬೇಕಾಗಿರುವಂತಹ ಸಂದರ್ಭದಲ್ಲಿ, ಮಾನ್ಯ ರಾಜ್ಯಪಾಲರ ಸೂಚನೆ ಪಾಲನೆಯಾಗಬೇಕಾದಂತಹ ಸಂದರ್ಭದಲ್ಲಿ, ಇಲ್ಲಿ ನಾವು ಊಟಕ್ಕೆ ಹೋಗುತ್ತೇವೆ. ಮತ್ತೊಂದು ಕಡೆ ಹೋಗುತ್ತೇವೆನ್ನುವಂಥಾದ್ದು ಅಲ್ಲ. ಇಲ್ಲಿ ನಾವು ಕರ್ತವ್ಯದ ಕಡೆಗೆ ಭಾಗವಹಿಸಬೇಕಾಗಿದೆ. ಆದುದರಿಂದ ಈ ವಿಷಯದ ಬಗ್ಗೆ ನಾನು ಹೆಚ್ಚಿಗೆ ಎಳೆಯದೆ ಯಾರ್ಯಾರು ಅಗಲಿದ್ದಾರೆ, ಇವತ್ತು ಯುವ ಪೀಳಿಗೆಗೆ ಇವರ ಜೀವನವೂ ಆದರ್ಶವಾಗಬೇಕು. ಅವರು ನಂದಾದೀಪದಂತೆ ಬೆಳಗಿ ಕತ್ತಲೆಯಲ್ಲಿದ್ದಂತಹ ಜನರಿಗೆ ಬೆಳಕನ್ನು ನೀಡಿದರು. ಅಂತಹ ವ್ಯಕ್ತಿಗಳ ಅಗತ್ಯತೆ ಇದೆ, ಅವರು ಹಾಕಿಕೊಟ್ಟಿರುವಂತಹ ಮಾರ್ಗಗಳಲ್ಲಿ ನಾವು ಹೋಗುವುದೇ ನಿಜವಾದಂತಹ ಶ್ರದ್ಧಾಂಜಲಿಯನ್ನು ಅರ್ಪಿಸುವಂಥಾದ್ದೆಂದು ನಾನು ತಿಳಿದುಕೊಂಡಿದ್ದೇನೆ. ಇಂತಹ ಸಂದರ್ಭದಲ್ಲಿ ತಾವು ಸಭೆಯ ಮುಂದೆ ತಂದಿರುವಂತಹ ಈ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸಿ, ಮೃತರ ಎಲ್ಲಾ ಬಂಧು ಬಳಗದವರಿಗೆ ಈ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿಕೊಟ್ಟು, ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ, ಅವರ ಬಂಧುಬಳಗದವರಿಗೆ ಈ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಆ ಭಗವಂತನು ನೀಡಲಿ ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ, ತಮಗೆ ವಂದಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಉಪ ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ತಾವು ಸೂಚಿಸಿರುವಂಥ ಸಂತಾಪ ಸೂಚನಾ ನಿರ್ಣಯಕ್ಕೆ ಇಡೀ ಸದನ ಸಹಮತಿಯನ್ನು ಕೋರುತ್ತಿದೆ. ಅದಕ್ಕೆ ಒಪ್ಪಿಗೆಯನ್ನು ಸೂಚಿಸಿ, ಅನುಮೋದಿಸುತ್ತಿದ್ದೇವೆ. ನಿಮಗೆಲ್ಲಾ ಗೊತ್ತಿದ್ದಂತೆ ಕೆ.ಆರ್. ನಾರಾಯಣನ್‌ರವರು ಅತ್ಯಂತ ಹಿಂದುಳಿದ ಮತ್ತು ಪರಿಶಿಷ್ಟ ಜಾತಿಗೆ ಸೇರಿದಂಥವರು. ಅಂದರೆ, ಕೇರಳದಲ್ಲಿರುವಂಥ ಅಗಸ ಜಾತಿಗೆ ಸೇರಿದಂಥ ಒಬ್ಬ ನಾಯಕರು ಇವರು. ಅಂದರೆ, ತುಳಿತಕ್ಕೆ ಒಳಗಾಗಿರತಕ್ಕಂಥ ಸಮಾಜದಲ್ಲಿ ಅವರು ಇದ್ದರೂ ಕೂಡ ತಮ್ಮ ವಿದ್ಯೆಯಿಂದ ಮತ್ತು ಪ್ರತಿಭೆಯಿಂದ

ಸರ್ಕಾರೀ ಸೇವೆಯಲ್ಲಿಯೂ ಮತ್ತು ರಾಜತಾಂತ್ರಿಕ ವಲಯದಲ್ಲಿಯೂ ಆಡಳಿತಗಾರರಾಗಿಯೂ ಕೂಡ ಉತ್ತಮವಾಗಿರತಕ್ಕಂಥ ಸೇವೆಯನ್ನು ಸಲ್ಲಿಸಿದರು. ಕೇರಳದಲ್ಲಿ ದೋಬಿ ಸಮಾಜವನ್ನು ಪರಿಶಿಷ್ಟ ಜಾತಿ ಎಂದು ಗುರುತಿಸಿದ್ದಾರೆ. ನಮ್ಮಲ್ಲಿ ಲಂಬಾಣಿ ಮೊದಲಾದಂಥ ಜನಾಂಗಗಳು ಪರಿಶಿಷ್ಟ ಜಾತಿಗೆ ಸೇರಿದಂತೆ, ಇವರೂ ಪರಿಶಿಷ್ಟ ಜಾತಿಗೆ ಸೇರಿದಂಥವರು. ಇವರು ಚೈನಾ ದೇಶದ ರಾಯಭಾರಿಯಾಗಿದ್ದಾಗ, ಚೈನಾ ದೇಶದ ವಿದ್ಯಮಾನಗಳ ಬಗ್ಗೆ ಅವರು ಭಾರತವನ್ನು ಯಾವ ದೃಷ್ಟಿಯಿಂದ ಗ್ರಹಿಸುತ್ತಾರೆ ಎನ್ನುವಂಥ ವಿಷಯಗಳ ಬಗ್ಗೆ ಅತ್ಯುತ್ತಮವಾದ ವರದಿಯನ್ನು ಶ್ರೀ ಕೆ.ಎಂ. ಫಣೀಕರ್‌ರವರ ನಂತರ ಕೊಟ್ಟವರು ಎಂದರೆ ಮಾನ್ಯ ಕೆ.ಆರ್. ನಾರಾಯಣನ್‌ರವರು. ಅದಾದ ನಂತರ ನಮ್ಮ ರಾಷ್ಟ್ರದ ಅಧ್ಯಕ್ಷರಾಗಿ ಸೇವೆ ಸಲ್ಲಿಸುವಂಥ ಸಂದರ್ಭದಲ್ಲಿಯೂ ಕೂಡ ಸಂವಿಧಾನಬದ್ಧವಾಗಿರತಕ್ಕಂಥ ತಮ್ಮ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ, ಬೇರೆ ಬೇರೆ ರಾಜಕಾರಣಿಗಳು ಅಧಿಕಾರಕ್ಕೆ ಬಂದಂಥ ಸಂದರ್ಭದಲ್ಲಿ ಮಾಡಿದಂಥ ಕೆಲವು ತಪ್ಪು ನಿರ್ಣಯಗಳನ್ನು ಇವರು ಮಾಡಲಿಲ್ಲ. ಅವರು ಕಾನೂನಿಗೆ ಅನುಗುಣವಾಗಿ ತಮ್ಮ ಆಡಳಿತವನ್ನು ನಡೆಸಿದರು. ಹಿಂದಿನ ರಾಷ್ಟ್ರಪತಿಗಳ ಕಾಲದಲ್ಲಿ, ಅಂದರೆ ಅದು ಡಾ: ಜಾಕಿರ್ ಹುಸೇನರು ಆಗಿರಬಹುದು, ಡಾ: ಬಾಬೂ ರಾಜೇಂದ್ರ ಪ್ರಸಾದ್‌ರವರು ಆಗಿರಬಹುದು ಅಥವಾ ಅದಕ್ಕೂ ಹಿಂದಿನ ತಲೆಮಾರಿನವರಾದ ಡಾ: ರಾಧಾಕೃಷ್ಣನ್‌ರವರು ರಾಷ್ಟ್ರಪತಿಗಳಾಗಿದ್ದಂಥ ಸಂದರ್ಭದಲ್ಲಿಯೂ ಕೂಡ ಬಹಳ ಸಂದಿಗ್ಧವಾಗಿರತಕ್ಕಂಥ ಸಮಯಗಳು ಬಂದವು. ಮೇಲ್ನೋಟಕ್ಕೆ ರಾಷ್ಟ್ರಪತಿಗಳ ಸ್ಥಾನ ಅಥವಾ ರಾಜ್ಯಪಾಲರ ಸ್ಥಾನಗಳು ಸಂವಿಧಾನವಾಗಿರತಕ್ಕಂಥವು, ಅವುಗಳಿಗೆ ನಿಜವಾದ ಅಧಿಕಾರ ಇಲ್ಲ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದರೂ ಕೂಡ ಅತ್ಯಂತ ಕ್ಲಿಷ್ಟಮಯವಾಗಿರತಕ್ಕಂಥ ಸನ್ನಿವೇಶದಲ್ಲಿ ಅಥವಾ ಕರ್ನಾಟಕ ರಾಜ್ಯ ಈಗ ಎದುರಿಸುತ್ತಿರುವಂಥ ಕ್ಲಿಷ್ಟಮಯವಾದಂಥ ಸನ್ನಿವೇಸದ ಸಂದರ್ಭದಲ್ಲಿಯೂ ಕೂಡ ಕಾನೂನನ್ನು ಅರ್ಥೈಸುವಿಕೆಯ ವಿಚಾರದಲ್ಲಿ ಮತ್ತು ನೈತಿಕವಾಗಿ ತೆಗೆದುಕೊಳ್ಳತಕ್ಕಂಥ ಜವಾಬ್ದಾರಿಯ ವಿಷಯದಲ್ಲಿ ಆ ಮನುಷ್ಯನ ವ್ಯಕ್ತಿತ್ವ, ರಾಷ್ಟ್ರಪತಿಗಳ ಜವಾಬ್ದಾರಿ ಏನು ಎನ್ನುವುದು ಸಂವಿಧಾನದ ಮೂಲಕವಾಗಿ ಗೊತ್ತಾಗುತ್ತದೆ. ಆ ರೀತಿಯ ಕೆಲವು ಸಂದರ್ಭಗಳು ಬಂದಾಗಲೂ ಕೂಡ ಮಾನ್ಯ ನಾರಾಯಣನ್‌ರವರು ಬಹಳ ಉತ್ತಮವಾಗಿರತಕ್ಕಂಥ ನಿರ್ಣಯಗಳನ್ನು ಕೈಗೊಂಡರು ಮತ್ತು ಅಷ್ಟೇ ಘನತೆಯಿಂದ ಅವರು ನಿವೃತ್ತಿಯನ್ನು ಪಡೆದಂಥವರಾದರು. ಆ ಕಾರಣಕ್ಕಾಗಿ ನಾರಾಯಣನ್‌ರವರು, ನಾವು ಹೆಸರಿಸಲ್ಪಡುವ ಮತ್ತು ಉತ್ತಮ ರಾಷ್ಟ್ರಪತಿಗಳಾಗಿ ಕರ್ತವ್ಯವನ್ನು ನಿರ್ವಹಿಸಿದರು ಎನ್ನುವಂಥ ಮುತ್ಸದ್ಧಿಗಳ ಸಾಲಿನಲ್ಲಿ ಅವರು ಸೇರುತ್ತಾರೆ. ನಮ್ಮಲ್ಲಿ ಅಂಥ ಒಂದು ದೊಡ್ಡ ಪರಂಪರೆ ಇದೆ. ನಮ್ಮ ರಾಜಕೀಯ ಇತಿಹಾಸಗಳಲ್ಲಿ ಕೆಲವು ಸನ್ನಿವೇಶಗಳಲ್ಲಿ ತೆಗೆದುಕೊಂಡಿರತಕ್ಕಂಥ ನಿರ್ಣಯಗಳ ಬಗ್ಗೆ ಹೇಳುವುದಾದರೆ, ಬಹಳ ದೊಡ್ಡದೊಡ್ಡ ಚರ್ಚೆಗಳು ಆಗಿರತಕ್ಕಂಥಾದ್ದು ಕೂಡ ಇದೆ. ಡಾ: ರಾಧಾಕೃಷ್ಣನ್‌ರವರನ್ನು ರಾಷ್ಟ್ರದ ಅಧ್ಯಕ್ಷರನ್ನಾಗಿ ಮಾಡಬೇಕು, ರಾಷ್ಟ್ರಪತಿಗಳನ್ನಾಗಿ ಮಾಡಬೇಕು ಎಂದು ಸ್ವತಃ ನೆಹರೂರವರು ಇಷ್ಟಪಟ್ಟಂಥ ಸಂದರ್ಭದಲ್ಲಿ, ಡಾ: ಬಾಬೂ ರಾಜೇಂದ್ರ ಪ್ರಸಾದ್‌ರವರನ್ನು ಎರಡನೇ ಬಾರಿಗೆ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಎಲ್ಲರೂ ಒಕ್ಕೊರಲಿನಿಂದ ಮಾತನಾಡಿದರು. ಆ ಸಂದರ್ಭದಲ್ಲಿ ಡಾ: ಬಾಬೂ ರಾಜೇಂದ್ರ ಪ್ರಸಾದ್‌ರವರ ಬಗ್ಗೆ ಒಂದು ತಪ್ಪು ಅಭಿಪ್ರಾಯವಿತ್ತು, ಬಾಬೂ ರಾಜೇಂದ್ರ ಪ್ರಸಾದ್‌ರವರೆಂದರೆ ಸಂಪ್ರದಯವಾದಿಗಳು, ಹೆಚ್ಚು ಹಿಂದುತ್ವ ಪ್ರಿಯರಾಗಿರತಕ್ಕಂಥವರು, ಕಾಶಿ ವಿಶ್ವನಾಥ ದೇವಾಲಯದಲ್ಲಿ

ಬಹಳ ಜನ ಬ್ರಾಹ್ಮಣರ ಪಾದಗಳನ್ನು ಅವರು ಪೂಜೆ ಮಾಡಿದರು ಎನ್ನುವ ಕಾರಣಕ್ಕಾಗಿ ಲೋಹಿಯಾರವರು ಅದರ ಬಗ್ಗೆ ಒಂದು ದೊಡ್ಡ ವಿವಾದವನ್ನೇ ಮಾಡಿದರು. ಆ ಸಂದರ್ಭದಲ್ಲಿ ಡಾ: ರಾಧಾಕೃಷ್ಣನ್‌ರವರ ಯೋಗ್ಯತೆಯನ್ನು ಕಡಿಮೆ ಮಾಡಿರತಕ್ಕಂಥಾದ್ದು ಅಲ್ಲ, ಆ ಸಂದರ್ಭದಲ್ಲಿ ಅಬ್ದುಲ್ ಕಲಾಂ ಅಜಾದ್‌ರವರು ತಮ್ಮ ಪುಸ್ತಕದಲ್ಲಿ ಬರೆಯುತ್ತಾರೆ ಮತ್ತು ಅದೇ ರೀತಿಯಾಗಿ ಚರ್ಚೆಯನ್ನು ಮಾಡುತ್ತಾರೆ. ನೆಹರೂರವರೇ, ನಾನು ಇಡೀ ರಾತ್ರಿ ದೀಪವನ್ನು ಹಚ್ಚಿ ಹುಡುಕಿದೆ, ಸ್ವಾತಂತ್ರ್ಯ ಸಮರದ ಸಂದರ್ಭದಲ್ಲಿ ಡಾ: ರಾಧಾಕೃಷ್ಣನ್‌ರವರ ಹೆಸರು ಎಲ್ಲೂ ಕಾಣಲೇ ಇಲ್ಲ, ಅವರು ಯಾರು? ಎನ್ನುವಂಥ ಪ್ರಶ್ನೆಯನ್ನು ಮಾಡುತ್ತಾರೆ. ಹಾಗಾಗಿ, ಡಾ: ಬಾಬೂ ರಾಜೇಂದ್ರ ಪ್ರಸಾದ್‌ರವರನ್ನು ಎರಡನೇ ಬಾರಿಗೆ ಅಧ್ಯಕ್ಷರನ್ನಾಗಿ ಮಾಡುತ್ತಾರೆ. ಇಂಥ ಇತಿಹಾಸದ ಘಟನೆಗಳನ್ನು ಅನೇಕ ಸಂದರ್ಭಗಳಲ್ಲಿ ಉದಾಹರಿಸಬಹುದು. ಅಂಥ ಒಂದು ಮೇಲ್ತರಗತಿಯ ಸಂಪ್ರದಾಯವನ್ನು ಹಾಕಿದವರಲ್ಲಿ ಮಾನ್ಯ ನಾರಾಯಣನ್‌ರವರೂ ಕೂಡ ಒಬ್ಬರು.

ಹಾಗೆಯೇ, ಮಾನ್ಯ ಪಿ.ಪಿ. ಹೆಗರೆಯವರ ಜೊತೆಗೆ ನಾವು ಕೆಲಸ ಮಾಡಿದಂಥವರು. ಹೆಗರೆಯವರು ಆವತ್ತಿನ ಜನತಾ ಶಾಸಕಾಂಗ ಪಕ್ಷದ ಉಪಾಧ್ಯಕ್ಷರಾಗಿದ್ದರು. ನಾಯಕರಾಗಿ ಮಾನ್ಯ ರಾಮಕೃಷ್ಣ ಹೆಗಡೆಯವರಿದ್ದರು. ಉಪಾಧ್ಯಕ್ಷರಾಗಿ ಮಾನ್ಯ ಹೆಗರೆಯವರಿದ್ದರು. ಆಗ ನಾವೆಲ್ಲಾ ಹೊಸದಾಗಿ ಮಂತ್ರಿಗಳಾಗಿದ್ದಂಥವರು. ಅವರು ನಮ್ಮ ಜೊತೆಯಲ್ಲಿ ನಡೆದುಕೊಳ್ಳುತ್ತಿದ್ದಂಥ ರೀತಿ ಮತ್ತು ಶಾಸಕಾಂಗ ಪಕ್ಷದಲ್ಲಿ ಅನೇಕ ನಮ್ಮ ಗೊತ್ತುವಳಿಗಳನ್ನು ಅಥವಾ ನಾವು ತರುವಂಥ ಕಾನೂನಿನ ವಿಚಾರಗಳಲ್ಲಿ ಚರ್ಚೆ ಆಗಲೇ ತೀರಬೇಕು ಎನ್ನುವಂಥ ಹಠವನ್ನು ಅವರು ತೋರುತ್ತಿದ್ದರು. ಇತ್ತೀಚಿನ ದಿನಮಾನಗಳಲ್ಲಿ ಶಾಸಕಾಂಗ ಪಕ್ಷದ ಸಭೆಯನ್ನು ಕರೆಯತಕ್ಕಂಥಾದ್ದು ಇಲ್ಲವೇ ಇಲ್ಲ. ಆಡಳಿತ ಪಕ್ಷದಲ್ಲಿರತಕ್ಕಂಥವರು ಮೂಕ ಪ್ರೇಕ್ಷಕರಾಗಿರಬೇಕಾಗುತ್ತದೆ. ಸದನದಲ್ಲಿ ನಾವು ತಂದಿರತಕ್ಕಂಥ ಕಾನೂನುಗಳನ್ನು ಅವರು ಅನಿವಾರ್ಯವಾಗಿ ಸಮರ್ಥಿಸಿಕೊಳ್ಳಲೇಬೇಕಾಗುತ್ತದೆ. ಆದರೆ ಕಾನೂನಿನ ಅಂತರ್ಗತ ಅರ್ಥಗಳೇನು? ಅಥವಾ ಯಾವ ವಿಚಾರದ ಬಗ್ಗೆ ಇಂಥ ಅಭಿಪ್ರಾಯವನ್ನು ತಂದಿದ್ದಾರೆ ಎನ್ನುವುದರ ಬಗ್ಗೆ ಕೂಡ ಗೊತ್ತಾಗದೇ ಅನೇಕ ಸಂದರ್ಭಗಳಲ್ಲಿ ಆಡಳಿತ ಪಕ್ಷಗಳಲ್ಲಿರುವಂಥ ಸದಸ್ಯರು ಮುಜುಗರವನ್ನು ಅನುಭವಿಸಿರತಕ್ಕಂಥಾದ್ದನ್ನು ನಾವು ನೋಡಿದ್ದೇವೆ. ಆದರೆ ಪ್ರಾರಂಭದ ದಿನಮಾನಗಳಲ್ಲಿ ಶಾಸಕಾಂಗ ಪಕ್ಷದಲ್ಲಿ, ಉದ್ದೇಶಿತವಾಗಿರತಕ್ಕಂಥ ಕಾನೂನನ್ನು ಚರ್ಚೆಗೆ ಒಳಪಡಿಸುತ್ತಿದ್ದರು. ಹಾಗೆ ಚರ್ಚೆಗೆ ಒಳಪಡಿಸುವುದರ ಮೂಲಕವಾಗಿ ಅಲ್ಲಿ ಅನೇಕ ವಿಚಾರಗಳು ಪ್ರಸ್ತಾಪವಾಗಲು ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದರು. ಅಲ್ಲಿ ಇಡೀ ಆಡಳಿತ ಪಕ್ಷದ ಶಾಸಕಾಂಗ ಪಕ್ಷ ಯಾವ ಅಭಿಪ್ರಾಯವನ್ನು ಕೊಡುತ್ತದೆ. ಆ ಅಭಿಪ್ರಾಯವನ್ನು ಕ್ರೋಢೀಕರಿಸಿ, ಅಂಥ ಒಂದು ಮಸೂದೆಯನ್ನು ಸದನದಲ್ಲಿ ಮಂಡಿಸಬೇಕು ಎಂದು ಪ್ರತಿಪಾದಿಸುತ್ತಿದ್ದವರಲ್ಲಿ ಮಾನ್ಯ ಹೆಗರೆಯವರು ಕೂಡ ಒಬ್ಬರಾಗಿದ್ದರು. ಆ ಸಂದರ್ಭದಲ್ಲಿಯೇ, ಡಾ: ತಿಪ್ಪೇಸ್ವಾಮಿಯವರನ್ನೆಲ್ಲಾ ಕರೆಸಿ, ಕ್ರೀಮಿಲೇಯರ್ ಕಾನ್ಸೆಪ್ಟೆ ಎಂದು ಸುಪ್ರೀಂ ಕೋರ್ಟ್‌ನವರು ಏನು ಹೇಳುತ್ತಿದ್ದರು, ಅಂದರೆ ಮೀಸಲಾತಿಯ ಕಾರಣಕ್ಕಾಗಿ ಒಂದು ಮೇಲ್ವರ್ಗದ ಜನತೆಯ ಜೊತೆ ಹೋರಾಟ ಮಾಡಿ, ಅನುಕೂಲಗಳು ಲಭ್ಯವಾದ ನಂತರ, ಅವರು ಮತ್ತೆ ಆ ಒಂದು ಅನುಕೂಲಗಳನ್ನು ಆ ಒಂದು ತಲೆಮಾರಿನ ಜನ ಪಡೆಯಬಾರದು, ಅದು ಬೇರೆ ಹಳ್ಳಿಗಳಲ್ಲಿರತಕ್ಕಂಥ, ನಮಗಿಂತಲೂ ನತದೃಷ್ಟರಾಗಿರತಕ್ಕಂಥ ಜನಗಳ ಪರವಾಗಿ ಈ ಒಂದು ಮೀಸಲಾತಿಯ ಕ್ರಮ ಹೋಗಬೇಕು ಎನ್ನುವಂಥ ಒಂದು ದೂರದೃಷ್ಟಿಯನ್ನು ಹೆಗರೆಯವರು ಇಟ್ಟುಕೊಂಡಿದ್ದಂಥಾದ್ದನ್ನು ನಾವೆಲ್ಲಾ ಕಂಡಿದ್ದೇವೆ.

ಹಾಗೆಯೇ, ಮಾನ್ಯ ಜಿ. ನಾರಾಯಣ ಕುಮಾರ್‌ರವರು ಕನ್ನಡದ ಪರವಾಗಿ ಹೋರಾಟ ಮಾಡುತ್ತಿದ್ದಂಥವರು. ಅವರು ಇದೇ ಸದನದಲ್ಲಿ ಬಂಗಾರಪ್ಪನವರ ಜೊತೆಯಲ್ಲಿ ಉಳಿದಂಥ ಹತ್ತು ಜನರಲ್ಲಿ ಒಬ್ಬರಾಗಿದ್ದರು. ಅವರು ಇದ್ದಾಗ, ಅನೇಕ ಕೌತುಕದ ರಸಘಳಿಗೆಗಳು ಕೂಡ ಇದ್ದವು. ಮಾನ್ಯ ರಮೇಶ್‌ಕುಮಾರ್‌ರವರ ಪಕ್ಕದಲ್ಲೇ ಅವರು ಕೂರುತ್ತಿದ್ದರು. ಅನೇಕ ವಿಚಾರಗಳಲ್ಲಿ ರಮೇಶ್‌ಕುಮಾರ್‌ರವರು ನಾರಾಯಣ ಕುಮಾರ್‌ರವರಿಗೆ ಮಾತನಡಲಿಕ್ಕೆ ಹೇಳಿ, ಆ ಮೂಲಕವಾಗಿ ಇಲ್ಲಿ ಒಂದು ತಮಾಷೆಯ ಅಥವಾ ಸಂದಿಗ್ಧದ ಚರ್ಚೆಯಾಗುದ ವಾತಾವರಣವನ್ನು ನಿರ್ಮಿಸುತ್ತಿದ್ದರು. ಆಗಲೇ ಇಲ್ಲಿ, ಬಂಡಾಯ ಎನ್ನುವ ಶಬ್ದವನ್ನು ಬಳಸಿದ ತಕ್ಷಣ ವಾತಾವರಣದಲ್ಲಿ ಹೇಗೆ ವ್ಯತ್ಯಾಸ ಬಂತೋ ಹಾಗೆ, ಆ ತರಹದ ಒಂದು ವಾತಾವರಣ ನಿರ್ಮಾಣವಾಗುತ್ತಿತ್ತು. ಅವರು ಅಷ್ಟು ಮುಗ್ಧರಾಗಿದ್ದರು. ಆದರೆ ಒಂದು ಮಾತು ಮಾತ್ರ ನಿಜ, ಕನ್ನಡದ ಪರವಾಗಿ ಅವರು ಬಹಳ ಗಟ್ಟಿಯಾಗಿ ನಿಲ್ಲತಕ್ಕಂಥವರಾಗಿದ್ದರು. ದಿವಂಗತ ಶ್ರೀ ರಾಮಕೃಷ್ಣ ಹೆಗಡೆಯವರ ಪರವಾಗಿ, ಅವರಿಗೆ ಬಹಳ ನಿಷ್ಠರಾಗಿದ್ದಂಥವರು. ತಾವು ಅನಾರೋಗ್ಯಕ್ಕೆ ಒಳಗಾಗಿದ್ದಂಥ ಸಂದರ್ಭದಲ್ಲೂ, ಮಾನ್ಯ ವಾಟಾಳ್ ನಾಗರಾಜ್‌ರವರ ಜೊತೆಗೆ ಸೇರಿಕೊಂಡು ಕನ್ನಡದ ಪರವಾಗಿ ನಿಂತು ಹೋರಾಟ ಮಾಡಿದಂಥ ಸಂಘಟನಾಕಾರರಲ್ಲಿ ಮ. ರಾಮಮೂರ್ತಿಯವರು, ಅ.ನ. ಕೃಷ್ಣರಾಯರು, ಬೀಚಿಯವರು, ಇಲ್ಲಿದ್ದಂಥ ಅನೇಕ ಹಿರಿಯರ ಜೊತೆಗೆ ಅವರು ಕನ್ನಡದ ಪರವಾಗಿ ಧ್ವನಿಯೆತ್ತಿದವರು. ಒಂದು ಅರ್ಥದಲ್ಲಿ ಕನ್ನಡ, ಕನ್ನಡ ಎಂದು ಮಾತನಾಡತಕ್ಕಂಥಾದ್ದು, ಎಷ್ಟು ಪ್ರಸ್ತುತ, ಇದರ ಬಗ್ಗೆ ಚರ್ಚೆ ಮಾಡಬೇಕಾಗಿರತಕ್ಕಂಥಾದ್ದಿದೆ ಎಂದು ಅನೇಕ ಬುದ್ಧಿಜೀವಿಗಳು ಮಾತನಾಡಿದರೂ ಕೂಡ ಇವತ್ತು ಕನ್ನಡಿಗರ ಬವಣೆ, ಕನ್ನಡದ ಸಾರ್ವಭೌಮತ್ವದ ಬಗ್ಗೆ ನಾವು ತೆಗೆದುಕೊಳ್ಳಬೇಕಾಗಿರತಕ್ಕಂಥ ನಿಲುವು ಇಂಥ ವಿಚಾರಗಳಲ್ಲಿ ಬರೀ ಶಿಷ್ಟಾಚಾರವನ್ನು ಪಾಲಿಸತಕ್ಕಂಥಾದ್ದೇ ಬಹಳ ಮುಖ್ಯವಲ್ಲ. ಶಿಷ್ಟಾಚಾರದ ಜೊತೆಗೆ, ಕೆಲವು ಸಂದರ್ಭಗಳಲ್ಲಿ ಶಿಷ್ಟಾಚಾರವನ್ನು ಬಿಟ್ಟರೂ ಚಿಂತೆಯಿಲ್ಲ, ಮೂಲಭೂತವಾಗಿರತಕ್ಕಂಥ ವಿಷಯದ ಬಗ್ಗೆ ನಾವು ಚರ್ಚೆಯನ್ನು ಮಾಡಬೇಕು ಎನ್ನುವಂಥ ಗಟ್ಟಿಯಾದ ನಿಲುವನ್ನು ತೆಗೆದುಕೊಂಡಿರತಕ್ಕಂಥವರು ಮತ್ತು ಅದೇ ರೀತಿಯಾಗಿ ಕಾರ್ಪೋರೇಷನ್ನಿನ ಚುನಾವಣೆಯಲ್ಲಿ ನಿಂತು ಕಾರ್ಪೋರೇಷನ್ನಿನ ಸದಸ್ಯರಾಗಿದ್ದಂಥವರು ಅವರು. ಆ ರೀತಿಯಲ್ಲಿ ನೋಡಿದರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಅವರಿಬ್ಬರೂ ಒಂದೇ. ಅವರೂ ಕೂಡ ಕಾರ್ಪೋರೇಷನ್ನಿನ ಸದಸ್ಯರಾಗಿದ್ದಂಥವರು. ಆಗ ನಾವು ಹಳ್ಳಿಗಳಲ್ಲಿ ವಕಾಲತ್ತು ಮಾಡುತ್ತಿದ್ದಂಥ ಸಂದರ್ಭದಲ್ಲಿ, ಇವರು ಮಾಡುವ ಕತ್ತೆ ಮೆರವಣಿಗೆ, ಇವರೇ ಗೌನ್ ಹಾಕಿಕೊಂಡು ಮೇಯರ್ ಆಗಿರತಕ್ಕಂಥಾದ್ದು ಇಂಥವುಗಳನ್ನೆಲ್ಲಾ ನಾವು ಓದಿದಾಗ ಇವುಗಳು ಒಂದು ರೀತಿಯಲ್ಲಿ ರೋಚಕ ಕತೆಯಾಗುತ್ತದೆ ಎಂದು ಅನ್ನಿಸುತ್ತಿತ್ತು. ಒಂದು ಅರ್ಥದಲ್ಲಿ ಕನ್ನಡದ ಪರವಾದಂಥ ಫೋಕಸ್ ಎಂದು ಏನು ಕರೆಯುತ್ತೇವೆ, ಅದರ ಕಡೆಗೆ ಅವರು ಮಾಡಿದಂಥ ಗಣನೀಯವಾದಂಥ ಸೇವೆಯನ್ನು ನಾವೆಲ್ಲರೂ ಕೂಡ ನೆನೆಸಬೇಕಾಗಿರತಕ್ಕಂಥಾದ್ದಾಗಿದೆ.

ಇನ್ನು, ಮಾನ್ಯ ಭೀಮಸೇನಿ ಕೊಂಡಯ್ಯನವರು ನಮ್ಮ ಜಿಲ್ಲೆಯವರೇ. ನನ್ನ ಒಳ್ಳೆಯ ಸಹಪಾಠಿ. ಅವರು ಈ ಒಂದು ಶಾಸನ ಸಭೆಯಲ್ಲಿ ಸದಸ್ಯರೂ ಕೂಡ ಆಗಿದ್ದರು. ಅವರು ಶಾಸನ ಸಭೆಯ ಸದಸ್ಯರಾಗಿದ್ದೂ ಕೂಡ ಬಹಳ ರೋಚಕವಾದ ಒಂದು ಕತೆಯೇ ಆಗಿದೆ. ನಾವು ಟಿಕೆಟ್ ಕೊಟ್ಟಿರತಕ್ಕಂಥ ಒಬ್ಬ ವ್ಯಕ್ತಿಯ ಪರವಾಗಿ ಸೂಚನೆ ಕೊಡಲಿಕ್ಕಾಗಿ ಇವರು ನಾಮಪತ್ರದ ಸಲ್ಲಿಕೆಯ

ಸಂದರ್ಭದಲ್ಲಿ ಹೊಸಪೇಟೆಗೆ ಹೋದರು. ಹೊಸಪೇಟೆಗೆ ಹೋದಂಥ ಸಂದರ್ಭದಲ್ಲಿ, ನಮ್ಮ ದುರ್ದೈವವೋ ಅಥವಾ ನಾವು ಟಿಕೆಟ್ ಕೊಟ್ಟಂಥ ವ್ಯಕ್ತಿಯ ದುರ್ದೈವವೋ, ಆತನ ಹೆಸರು ಮತದಾರರ ಪಟ್ಟಿಯಲ್ಲಿ ಇರಲೇ ಇಲ್ಲ. ಅವರ ಹೆಸರು ಮತದಾರರ ಪಟ್ಟಿಯಲ್ಲಿ ಇರಲಿಲ್ಲ ಎನ್ನುವ ಕಾರಣಕ್ಕಾಗಿ ಮಾನ್ಯ ಭೀಮಸೇನಿ ಕೊಂಡಯ್ಯನವರು ನಾಮಪತ್ರವನ್ನು ಸಲ್ಲಿಸಿದರು. ಆಗ ನಾನು ಜಿಲ್ಲಾ ಅಧ್ಯಕ್ಷನಾಗಿದ್ದೆ. ಅವರು ಮೊದಲ ಸಲ ಚುನಾವಣೆಯಲ್ಲಿ ಸೋತರು. ಎರಡನೇ ಸಲ ಗೆದ್ದು ಬಂದಿರತಕ್ಕಂಥಾದ್ದು ಕೂಡ ನಿಮಗೆ ಗೊತ್ತಿರತಕ್ಕಂಥಾದ್ದು. ಬಹಳ ಉತ್ತಮವಾಗಿರತಕ್ಕಂಥ ಒಬ್ಬ ವ್ಯಕ್ತಿ ಅವರು. ಕಾಡಾದ ಅಧ್ಯಕ್ಷರಾಗಿಯೂ ಕೂಡ ಅವರು ಸೇವೆ ಮಾಡಿದರು. ಟಿ ಎ ಪಿ ಸಿ ಎಂ ಸಿ, ಕೋ-ಆಪರೇಟಿವ್ ಸೊಸೈಟಿ ಇಂಥ ಚಿಕ್ಕ ಸಹಕಾರ ಸಂಘಗಳ ಮೂಲಕ ತಮ್ಮನ್ನು ಗುರುತಿಸಿಕೊಂಡಿದ್ದಂಥ ಅವರು ಕೃಷಿ ಮನೆತನದಿಂದ ಬಂದಂಥವರು. ದುರ್ದೈವದ ಸಂಗತಿ ಏನೆಂದರೆ, ಆ ದಿವಸ ನಾನು, ಮಾನ್ಯ ಸಿಂಧ್ಯಾರವರು, ಶ್ರೀ ಭೋಸರಾಜುರವರು, ಶ್ರೀ ಹಂಪನಗೌಡರು ಹೀಗೆ ನಮ್ಮ ಅನೇಕ ಹಿರಿಯರು, ಎಲ್ಲರೂ ಹೊಸಪೇಟೆಯಲ್ಲಿ ಇದ್ದರು. ಆ CADA ದಲ್ಲಿ ನಮ್ಮ ತುಂಗಭದ್ರಾ ನದಿಯ ನೀರನ್ನು ಯಾವ್ಯಾವ ಕಾಲುವೆಗಳಿಗೆ ಯಾವ ರೀತಿಯಾಗಿ ಬಳಸಬೇಕೆನ್ನುವ ವಿಚಾರದಲ್ಲಿ ಚರ್ಚೆ ಮಾಡುತ್ತಿದ್ದೆವು. 'ಆ ಸಭೆಗೆ ನಾನು ಹೋಗಿ ಬರುತ್ತೇನೆ, ನೀವು ಇಲ್ಲಿಯೇ ಇರಿ' ಎಂದು ಹೇಳಿದ್ದರು. ಆದರೆ, ಅವರಿಗೆ ಒಂದು ಫೋನ್ ಕಾಲ್ ಬಂತು ಎನ್ನುವ ಕಾರಣಕ್ಕಾಗಿಯೇ ಅವರು ಬಳ್ಳಾರಿಗೆ ವಾಪಸ್ಸು ಹೋಗಿ ಮತ್ತೆ ಬರುತ್ತೇನೆ ಎಂದು ಹೇಳಿ ಕಳುಹಿಸಿದರು. ಆದರೆ, ಅವರಿಗೆ ಒಂದು ವಿಚಾರವನ್ನು ತಿಳಿಸಿದರು. ನಿಮ್ಮ ವಿರುದ್ಧವಾಗಿ ನಿಮ್ಮ ಕೊಲೆಯ ಸಂಚು ನಡೆದಿದೆ ಎನ್ನುವ ಮಾತು ತಿಳಿದಾಗ, ಇವರು ಅವರ ತಮ್ಮಂದಿರಿಗೆ ಫೋನ್ ಮಾಡಿ ಈ ರೀತಿ ಕೊಲೆಯ ಸಂಚು ನಡೆದಿದೆ ಎಂಬ ಮಾಹಿತಿ ಬಂದಿದೆ, ಈ ರೀತಿ ಏನಾದರೂ ಆಗಿದೆಯೇ ಎಂದು ಕೇಳಿದರು. ಅಂಥ ಮಾಹಿತಿ ನಮ್ಮ ಹತ್ತಿರ ಇಲ್ಲ ಎಂದು ಹೇಳಿದಾಗ, ಇವರು ದೊಡ್ಡ ಧೈರ್ಯದಿಂದ ಯಾವ ತರಹದ ರಕ್ಷಣೆಯನ್ನೂ ಸಹ ಅವರು ತೆಗೆದುಕೊಂಡಿರಲಿಲ್ಲ. ಅವರು ತಮ್ಮ ಡ್ರೈವರ್ ಜೊತೆಗೆ ನೇರವಾಗಿ ಹೋದಾಗ ಆ ಜಿಂದಾಲ್ ಕಂಪನಿಯ ಹತ್ತಿರ ಘಟನೆ ಆದ ನಂತರ ಆ ಬೂದಿಗುಡ್ಡದ ಹತ್ತಿರ ಎದುರಿಗೆ ಆಕ್ಸಿಡೆಂಟ್ ಆಯಿತು ಎಂದು ತೋರಿಸಿಕೊಳ್ಳುವಂಥ ರೀತಿಯ ಒಂದು ಪ್ರಹಸನ ನಡೆದು ಅಲ್ಲಿ ಏನೂ ಆಗದೆ ಇದ್ದಾಗ ಪೂರ್ಣ ಎಡಗಡೆಗೆ ಹೋದಾಗ ಅವರನ್ನು ತಡೆಹಿಡಿದು ಕೊಲೆ ಮಾಡಿಸಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ತತ್‌ಕ್ಷಣದಲ್ಲಿ ಕೇವಲ ಒಂದು ಗಂಟೆಯೊಳಗೆ ನಾವು ಅಲ್ಲಿ ಇದ್ದೆವು. ಹೆಗಲ ಮೇಲಿನ ಇಡೀ ಭಾಗವನ್ನು ಕಡಿದು ಹಾಕಿದ್ದರು. ಈ ಕಡೆ ಕಿವಿಯ ಹತ್ತಿರ ಕತ್ತರಿಸಿದ್ದರು. ಅವರೆಲ್ಲರೂ ಈ ರೀತಿ ಮಾಡಿ ಅವಸರದಲ್ಲಿ ವಾಪಸ್ಸು ಹೋಗುವಾಗ ಅವರು ಹೊಸ ಕಾರನ್ನು ತಂದಿದ್ದರು. ಆ ಹೊಸ ಟೊಯೊಟೋ ವ್ಯಾನ್ ಅನ್ನು ಏನು ತಂದಿದ್ದರು ಅದು ಅಲ್ಲಿಯೇ ಕೆಟ್ಟು ನಿಂತು ಹೋಗಿತ್ತು. ಅವರು ಮೊಬೈಲ್ ಅನ್ನು ಏನು ಅವಸರದಲ್ಲಿ ಬಿಟ್ಟುಹೋಗಿದ್ದರು, ಅದರಲ್ಲಿ ೬ ಜನರನ್ನು ಈಗಾಗಲೇ ಗುರುತಿಸಿದ್ದಾರೆ. ಈಗಾಗಲೇ ಆ ಆರು ಜನರನ್ನು ದಸ್ತಗಿರಿ ಮಾಡಿರತಕ್ಕಂಥದ್ದು ಇದೆ. ಒಬ್ಬ ಉತ್ತಮ ಮನುಷ್ಯನಾಗಿ, ಉತ್ತಮ ಕೃಷಿಕನಾಗಿ ಒಬ್ಬ ಸ್ನೇಹಜೀವಿಯಾಗಿ, ಅಪಾಯದ ಸುಳಿವು ಇದ್ದಾಗಲೂ ಕೂಡ ಅಪಾಯದ ನಡುವೆ ನುಗ್ಗಬೇಕೆನ್ನುವ ರೀತಿಯಲ್ಲಿ ಇರತಕ್ಕಂಥ ಒಬ್ಬ ಭೀಮಸೇನಿ ಕೊಂಡಯ್ಯನವರು ನಮ್ಮ ಜಿಲ್ಲಾ ಜಾತ್ಯಾತೀತ ಜನತಾ ದಳದ ಅಧ್ಯಕ್ಷರಾಗಿದ್ದರು. ಅದನ್ನು ರಾಜಕೀಯವಾಗಿ ಪರಿವರ್ತಿಸಬೇಕೆನ್ನುವಂಥ ಮಾತುಗಳು ಇದ್ದರೂ ಕೂಡ ನಾವು ಅದನ್ನು

ಕೌಟುಂಬಿಕವಾಗಿ ದ್ವೇಷಗಳು ಇದ್ದವು, ಬಹಳ ವರ್ಷಗಳ ಕಾಲ ಇವರು ನಮ್ಮ ಜೊತೆಗೆ ಇದ್ದುದರಿಂದ ಮತ್ತೊಬ್ಬರು ಕಾಂಗ್ರೆಸ್ಸಿನ ಜೊತೆಗಿದ್ದರು. ಆದರೆ ಇದರಲ್ಲಿ ರಾಜಕೀಯ ಪಕ್ಷದ ಪ್ರಶ್ನೆ ಅಲ್ಲ, ಒಂದು ಕುಟುಂಬದ ಪ್ರಶ್ನೆ ಎಂದು ಇದನ್ನು ಮಾಡಿದ್ದರಿಂದ, ಅಲ್ಲಿ ಯಾವುದೇ ತರಹವಾದಂಥ ಪ್ರಕ್ಷುಬ್ಧದ ಒಂದು ಪರಿಸ್ಥಿತಿ ಉಂಟಾಗದಂಥ ರೀತಿಯಲ್ಲಿ ಆ ಕೆಲಸ ಆಯಿತು.

ಇನ್ನು ಶ್ರೀ ಎಸ್. ಚನ್ನಬಸವಯ್ಯನವರು, ಅವರು ಸರ್ಕಾರಿ ನೌಕರರ ವಿಚಾರವಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ಹೋರಾಟವನ್ನು ಮಾಡುತ್ತಿದ್ದರು. ಸುಮಾರು ಮೂರು ಬಾರಿ ಶಾಸಕರಾಗಿ ಇಲ್ಲಿ ಕೆಲಸ ಮಾಡಿರತಕ್ಕಂಥ ಅನುಭವಿಗಳು ಕೂಡ ಆಗಿದ್ದರು. ಮತ್ತೆ ಒಂದು ಕನಿಷ್ಠವಾಗಿ ಸರ್ಕಾರಿ ನೌಕರರ ಸೇವೆಗೆ ಸಂಬಂಧಪಟ್ಟಂತೆ, ಅವರ ಪರವಾಗಿ ಹೋರಾಟ ಮಾಡಬೇಕೆನ್ನುವಂಥ ಕಳಕಳಿ ಮತ್ತು ಬದ್ಧತೆ ಅವರಿಗೆ ಇತ್ತು. ಶ್ರೀ ಸಿದ್ಧಗಂಗಾ ಮಠಕ್ಕೆ ಬಹಳ ಮಟ್ಟಿನ ನಿಷ್ಠೆಯನ್ನು ಅವರು ಬೇರೆ ಬೇರೆ ಸಂದರ್ಭಗಳಲ್ಲಿಯೂ ಕೂಡ ತೋರಿಸಿಕೊಂಡು ತಮ್ಮದೇ ಆದಂಥ ಒಂದು ವ್ಯಕ್ತಿತ್ವವನ್ನು ಇಟ್ಟುಕೊಂಡಿದ್ದಂಥವರಾಗಿದ್ದರು. ನಮ್ಮ ಪಕ್ಷದವರೇ ಆಗಿದ್ದರು. ಆ ಒಂದು ಸೀಟನ್ನು ನಾವು ಗೆಲ್ಲಲಿಕ್ಕೆ ಸಾಧ್ಯವಿಲ್ಲ. ಅದು ಯಾವಾಗಲೂ ಕೂಡ ಭಾರತೀಯ ಜನತಾ ಪಕ್ಷದವರಿಗೇ ಮೀಸಲಾಗಿರುವಂಥದ್ದು. ಆ ಕ್ಷೇತ್ರಗಳು ಪದವೀಧರರ ಕ್ಷೇತ್ರವಾಗಿರಬಹುದು, ಶಿಕ್ಷಕರ ಕ್ಷೇತ್ರವಾಗಿರಬಹುದು. ಅವು ನಮಗೆ ಬರಲಿಕ್ಕಿಲ್ಲ ಎನ್ನುವಂಥ ಸಂದರ್ಭಗಳಲ್ಲಿ ನಮಗೆ ಅಂಥ ಒಂದು ಸೀಟನ್ನು ಗಳಿಸಿಕೊಟ್ಟಿರತಕ್ಕಂಥವರು ಮಾನ್ಯ ಚನ್ನಬಸವಯ್ಯನವರು.

ಇನ್ನು ಡಾ: ಎಂ.ಆರ್. ತಂಗಾರವರ ಬಗ್ಗೆ ನಾವು ಹೆಚ್ಚು ಹೇಳಬೇಕಾಗಿರತಕ್ಕಂಥ ಅಗತ್ಯವಿಲ್ಲ. ಅವರು ಪ್ರಥಮ ಬಾರಿಗೆ ಚುನಾವಣೆಗೆ ನಿಂತಾಗ ನಾವು ಸಂಗಮೇಶ್ವರ ಎನ್ನುವ ನಮ್ಮ ಗುಲ್ಬರ್ಗಾದ ಒಬ್ಬ ಪ್ರಾಧ್ಯಾಪಕರನ್ನು ನಮ್ಮ ಪಕ್ಷದ ಅಭ್ಯರ್ಥಿಯನ್ನಾಗಿ ನಿಲ್ಲಿಸಿದ್ದೆವು. ಆಗ ಅವರು 7 ಮತಗಳ ಅಂತರದಿಂದ ಗೆದ್ದು ಬಂದರು. ಅದಾದ ಮೇಲೆ ಅವರು ತಿರುಗಿ ನೋಡಲಿಲ್ಲ. 7 ಮತಗಳ ಅಂತರದಲ್ಲಿ ಅವರು ಗೆದ್ದು ಬಂದಂಥ ಸಂದರ್ಭದಲ್ಲಿ ನಮ್ಮ ಪಕ್ಷದ ಅಭ್ಯರ್ಥಿಯೇ ಗೆಲ್ಲುತ್ತಾರೆಂದು ನಾವು ಭಾವಿಸಿಕೊಂಡಿದ್ದೆವು. ಒಂದು ದೃಷ್ಟಿಯಿಂದ ನಮ್ಮ ಪಕ್ಷದ ಅಭ್ಯರ್ಥಿ ಗೆಲ್ಲಲಿಲ್ಲ. ಆ ಮಾತು ಬೇರೆ. ಆದರೆ, ಅದು ನಮ್ಮ ಕನ್ನಡ ನಾಡಿದ ವಿಧಾನ ಮಂಡಲ್ಲದ ಮತ್ತು ರಾಜಕೀಯ ವಿಚಾರಗಳಿಗೆ ಅವರಿಂದ ದೊಡ್ಡ ಕೊಡುಗೆ, ಅಪಾರವಾದ ಕೊಡುಗೆಯಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮೇಲ್ಮನೆಯಲ್ಲಿದ್ದಂಥ ಅವರು ಅನೇಕ ವಿಷಯಗಳ ಬಗ್ಗೆ ತಮ್ಮದೇ ಆದಂಥ ವಿದ್ವತ್‌ಪೂರ್ಣವಾದಂತ ವಿಚಾರಗಳನ್ನು ಪ್ರಸ್ತಾಪ ಮಾಡುವುದರ ಜೊತೆಗೆ ಅವರು ನೋಡುವಂಥ ದೃಷ್ಟಿಕೋನ ವಿಭಿನ್ನವಾಗಿತ್ತು. ಹೇಳುವ ವಿಚಾರಗಳಲ್ಲಿ ಆಡಳಿತ ಪಕ್ಷದಲ್ಲಿ ಇದ್ದಂಥವರಿಗೂ ಕೂಡ ನೋವು ಉಂಟು ಮಾಡದಂಥ ರೀತಿಯಲ್ಲಿ ಆ ತಪ್ಪುಗಳನ್ನು ಎಳೆ ಎಳೆಯಾಗಿ ಬಿಡಿಸಿ ಹೇಳುತ್ತಿದ್ದಂಥ ಅವರ ಮಾತುಗಳು ಇವತ್ತಿಗೂ ಕೂಡ ಮನನೀಯವಾದಂಥದ್ದು. ಅವರಲ್ಲಿ ಕನ್ನಡ ಬಗ್ಗೆ ಅಷ್ಟು ಹೆಚ್ಚು ವಾಕ್‌ಪಟುತ್ವ ಇರಲಿಲ್ಲ. ಆದರೆ ಅವರ ಇತ್ತೀಚಿನ ದಿನಮಾನಗಳಲ್ಲಿ ಅದನ್ನು ಸಂಪೂರ್ಣವಾಗಿ ಗ್ರಹಿಸಿಕೊಂಡು ಪ್ರಸ್ತಾಪ ಮಾಡತಕ್ಕಂಥದ್ದು ಇತ್ತು. ಅವರು ಇಂಗ್ಲೀಷ್‌ನಲ್ಲಿಯೇ ಮಾತನಾಡಲಿ, ಮರಾಠಿಯಲ್ಲಿಯೇ ಮಾತನಾಡಲಿ, ಕನ್ನಡದಲ್ಲಿಯೇ ಮಾತನಾಡಲಿ, ಎಲ್ಲಾ ವಿಷಯಗಳ ಬಗ್ಗೆಯೂ ಕೂಡ ಬಹಳ ಗಂಭೀರವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಂಥವರು. ನಿಜವಾಗಿಯೂ ಕೂಡ ಮೇಲ್ಮನೆಗೆ ಸಂಪೂರ್ಣವಾದ ಒಂದು ಘನತೆಯನ್ನು ತಂದುಕೊಟ್ಟಂಥ ಮಹನೀಯರುಗಳ ಪೈಕಿ ಡಾ: ಎಂ.ಆರ್.

ತಂಗಾರವರು ಕೂಡ ಒಬ್ಬರು ಎಂದು ಹೇಳಿದರೆ ತಪ್ಪಾಗಲಾರದು. ಅವರು ಬಹಳ ವರ್ಷಗಳ ಕಾಲ ಸ್ವತಃ ವೈದ್ಯರು ಆಗಿದ್ದರೂ ಕೂಡ ಅವರು ತಮ್ಮ ರಕ್ತದ ಕ್ಯಾನ್ಸರ್ ವಿಚಾರದಲ್ಲಿ ಬಹಳ ಜಾಗರೂಕರಾಗಿದ್ದರು. ಆದರೆ ಅವರಿಗೆ ಸಾವಿನ ಮುನ್ಸೂಚನೆ ಗೊತ್ತಿದ್ದರೂ ಕೂಡ ಅವರು ಒಂದು ದಿವಸ ಕೂಡ ಆಲಸಿಗಳಾಗಿ ಇರಲಿಲ್ಲ. ಅಥವಾ ಇನ್ನಾವುದೋ ರೀತಿ ವಿಶ್ರಾಂತಿ ತೆಗೆದುಕೊಳ್ಳುವವರೂ ಕೂಡ ಆಗಿರಲಿಲ್ಲ. ಸದನ ನಡೆಯುವಾಗ ಅವರು ಕರಾರುವಕ್ಕಾಗಿ ಬಂದು ಸದನದ ಕೊನೆಯವರೆಗೂ ಇರತಕ್ಕಂಥ ದೊಡ್ಡ ಸತ್ಸಂಪ್ರದಾಯದ ಮತ್ತು ಅದೇ ರೀತಿಯಾದಂಥ ಸಾರ್ವಜನಿಕ ಲಜ್ಜೆಯ ನಡವಳಿಕೆಗಳನ್ನು ಹೊಂದಿದ್ದರು. ಸಾರ್ವಜನಿಕ ಜೀವನದಲ್ಲಿ ನಾವೆಲ್ಲ ರಾಜಕಾರಣಿಗಳು ಇರುತ್ತೇವೆ. ಆದರೆ ರಾಜಕಾರಣಿಗಳು ಅನೇಕ ಸಂದರ್ಭಗಳಲ್ಲಿ ನಾವು ತೆಗೆದುಕೊಳ್ಳತಕ್ಕಂಥ ನಿರ್ಣಯದಲ್ಲಿ ಸಾರ್ವಜನಿಕರ ಅಭಿಪ್ರಾಯಗಳು ಏನು ಬರುತ್ತವೆ ಎನ್ನುವುದರ ಬಗ್ಗೆ ನಾವು ಯಾವಾಗಲೂ ಕೂಡ ಯೋಚನೆಯನ್ನು ಮಾಡುವುದಿಲ್ಲ. ಮತ್ತೆ ನಾವು ಚುನಾವಣೆಯ ಸಂದರ್ಭದಲ್ಲಿ ಅವರ ಹತ್ತಿರ ಹೋಗುತ್ತೇವೆ. ಗೆದ್ದು ಬರಬಹುದು. ಗೆದ್ದು ಬರತಕ್ಕಂಥದ್ದೇ ಈ ರಾಜಕೀಯ ಜೀವನದ ಕೊನೆ ಅಲ್ಲ. ಗೆದ್ದು ಬರುವುದಕ್ಕಿಂತಲೂ ಹೆಚ್ಚಾಗಿ ಈ ಸಾರ್ವಜನಿಕ ಜೀವನದಲ್ಲಿ ನಾವು ಕೆಲಸ ಮಾಡುವುದರ ಜೊತೆಗೆ ಯಾವ ವಿಚಾರಗಳ ಬಗ್ಗೆ ನಾವು ಪ್ರತಿಪಾದನೆ ಮಾಡುತ್ತೇವೆ. ಯಾವ ನಿಲುವನ್ನು ನಾವು ತೆಗೆದುಕೊಳ್ಳುತ್ತೇವೆ. ಅದರಿಂದ ಸೋಲೋ, ಗೆಲುವೋ, ಒಂಟಿತನವೋ ಒಂಟಿತನವಲ್ಲವೋ ಎನ್ನುವ ಮಾತು ಕೂಡ ಇರುತ್ತದೆ. ಆದ್ದರಿಂದ ಡಾ: ಶಿವರಾಮ ಕಾರಂತರು 'ಒಂಟಿ ಧ್ವನಿ' ಎನ್ನುವಂಥ ಒಂದು ಪುಸ್ತಕವನ್ನು ಬರೆದಿದ್ದರು ಯಾರಾದರೂ ಕಾಡಿನಲ್ಲಿರತಕ್ಕಂಥ ಮಲ್ಲಿಗೆಗೆ 'ನೀನು ಏಕೆ ಅರಳುತ್ತೀಯಾ ಎಂದು ಪ್ರಶ್ನೆ ಕೇಳಿದಾಗ ಏನು ಹೇಳುತ್ತದೆ? ನಿನ್ನನ್ನು ಮುಡಿಯಲ್ಲಿ ಮುಡಿದುಕೊಳ್ಳತಕ್ಕಂಥ ಜನ ಇಲ್ಲ, ನಿನ್ನ ಸುವಾಸನೆಯನ್ನು ನೋಡುವಂಥವರು ಯಾರೂ ಇಲ್ಲ, ಆದರೆ ನೀನು ಏಕೆ ಅರಳಬೇಕೆನ್ನುವಂಥ ಪ್ರಶ್ನೆ ಇದ್ದರೆ' 'ಅರಳುವುದು ನನ್ನ ಧರ್ಮ, ಅದರ ಸುವಾಸನೆಯನ್ನು ಯಾರು ಆಘ್ರಾಣಿಸುತ್ತಾರೆ' ಇದು ಆ ಪ್ರಶ್ನೆ ಅಲ್ಲ. ಆಘ್ರಾಣಿಸುವಂತಹವರ ಪ್ರಶ್ನೆಯೂ ಅಲ್ಲ. ಆ ಕಾರಣಕ್ಕಾಗಿಯೇ ಅರಳುವಂಥ ನನ್ನ ಧರ್ಮವನ್ನು ನಾನು ಮಾಡಿದ್ದೇನೆ ಎನ್ನುವಂಥ ರೀತಿಯಲ್ಲಿ ಸಾರ್ವಜನಿಕ ಜೀವನದಲ್ಲಿ ಆ ತರಹದ ನಿರ್ಣಯಗಳನ್ನು ಕೈಗೊಂಡವರ ಪೈಕಿ ತಪ್ಪುಗಳು ಅಥವಾ ನಿರ್ಧಾರಗಳು ಅವು ಯಾವಾಗಲೂ ವಿವಾದಾತ್ಮಕವಾಗಿರುತ್ತವೆ. ಅವು ಯಾವಾಗಲೂ ಎಲ್ಲರನ್ನೂ ಮೆಚ್ಚಿಸಲಿಕ್ಕೆ ಸಾಧ್ಯ ಆಗಿರತಕ್ಕಂಥದ್ದು ಇರುವುದಿಲ್ಲ. ಅವರದೇ ಆಗಿರತಕ್ಕಂಥ ರಾಜಕೀಯ ಸಿದ್ಧಾಂತಗಳ ಬಗ್ಗೆಯೂ ಕೂಡ ನಾವು ಆ ಸಿದ್ಧಾಂತಗಳ ವಿರುದ್ಧವಾಗಿಯೇ ಚರ್ಚೆ ಮಾಡಬೇಕಾಗುತ್ತದೆ. ಆ ಒಂದು ನಿರ್ಧಾರವನ್ನು ನಾವು ಒಪ್ಪದೇ ಇರತಕ್ಕಂಥದ್ದು ಬೇರೆ ವಿಷಯ. ಆದರೆ ಅದನ್ನು ನಾವು ಸ್ವಾಗತ ಮಾಡುವ ರೀತಿಯಲ್ಲಿ ಕೆಲಸ ಮಾಡಿದಂಥವರಲ್ಲಿ ಡಾ: ಎಂ.ಆರ್. ತಂಗಾರವರು ಕೂಡ ಒಬ್ಬ ಅತ್ಯಂತ ಮೇಲ್ಮಟ್ಟದ ಒಬ್ಬ ರಾಜಕಾರಣಿ ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಅವರನ್ನು ಜ್ಞಾಪಕ ಮಾಡಿಕೊಳ್ಳುತ್ತೇನೆ.

ಇನ್ನು ಡಾ: ಹೆಚ್.ಎಲ್. ನಾಗೇಗೌಡರವರು ನಿಮಗೆ ಗೊತ್ತಿದ್ದಂತೆ, ಅವರು ಒಬ್ಬ ಜಾನಪದ ತಜ್ಞರು. ಪ್ರಾರಂಭದ ದಿನಮಾನಗಳಲ್ಲಿ ನಾಗಮಂಗಲದಲ್ಲಿ ಇವತ್ತು ಏನು ನಮ್ಮ ಚಲುವರಾಯಸ್ವಾಮಿಯವರ ಕ್ಷೇತ್ರ ಇದೆ, ನಾಗಮಂಗಲದಲ್ಲಿ ಅಲ್ಲಿ ಆದಿಚುಂಚನಗಿರಿ ಸ್ವಾಮಿಗಳ ನೇತೃತ್ವದಲ್ಲಿ ಪ್ರಥಮ ಬಾರಿಗೆ ಕನ್ನಡ ಜಾನಪದ ಸಾಹಿತ್ಯ ಸಮ್ಮೇಳನ ಏರ್ಪಾಡು ಮಾಡಿದಾಗ ನಮ್ಮ

ಊರಿನಿಂದ ನಾನು ಬೊಂಬೆ ಆಟವನ್ನು ತೆಗೆದುಕೊಂಡು ಹೋ.,ದ್ದೆ. ಆ ಸಂದರ್ಭದಲ್ಲಿ ಚಿತ್ರಕುಮಾರ ಸೇನ್ ಎನ್ನುವವರು ಕೇಂದ್ರ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಆಗ 500 ರೂಪಾಯಿಗಳನ್ನು ನಮ್ಮೂರಿನ ಗೊಂಬೆಯಾಟದವರಿಗೆ ಬಣ್ಣ ಕೊಡಿಸಲಿಕ್ಕ್, ದುಡ್ಡು ಕೊಡಿಸಿದ್ದರು. ಮತ್ತೆ ಅವರದೇ ಆಗಿರತಕ್ಕಂಥ ಒಂದು trust ಇತ್ತು. ನಮ್ಮ ಊರಿನ ಹತ್ತಿರದಲ್ಲಿಯೇ ಒಂದು ಯಡ್ರಾಮಿಹಳ್ಳಿ ಎನ್ನುವ ಒಂದು ಹಳ್ಳಿ ಇದೆ. ಕಿಳ್ಳೆಕ್ಯಾತರು ಎಂದು ಒಂದು ಜನಾಂಗ ಇದೆ. ಅವರು ಬೆಸ್ತರು. ಮೀನನ್ನು ಹಿಡಿಯುತ್ತಾರೆ ಅಂದರೆ ಬೆಸ್ತರೂ ಅಲ್ಲ, ಪರಿಶಿಷ್ಟ ಜಾತಿಗೆ ಸೇರಿರತಕ್ಕಂಥವರು. ತೊಗಲು ಗೊಂಬೆಯಾಟ ಮತ್ತು ಮೀನನ್ನು ಹಿಡಿಯತಕ್ಕಂಥದ್ದು ಅವರ ಕೆಲಸ. ಅವರಲ್ಲಿ ಯಡ್ರಾಮಿಹಳ್ಳಿಯ ಭರಮಪ್ಪ, ಅವರು ಪಾಂಡವರ ಕಥೆಯನ್ನು ರಾಮಾಯಣದ ಕಥೆಯನ್ನು ಆಡುತ್ತಿದ್ದಂಥದ್ದು. ಸುಮಾರು ಮೂರುವರೆ ಅಡಿ ಎತ್ತರದ ಗೊಂಬೆ ಮಾಡಿ ಅವರು ಸ್ವತಃ ಪ್ರದರ್ಶನ ಮಾಡುತ್ತಿದ್ದಂಥ ಸಂದರ್ಭದಲ್ಲಿ ಅವರನ್ನು ಜರ್ಮನಿಗೆ ಕಳುಹಿಸುವ ಉದ್ದೇಶ ಇಟ್ಟುಕೊಂಡು ಆ ಬಗ್ಗೆ ನಾವು ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಒಪ್ಪಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಅವರನ್ನು ಜರ್ಮನಿಗೆ ಕಳುಹಿಸಿಕೊಡುವ ಕೆಲಸವನ್ನು ನಾವು ಮಾಡಿದೆವು. ಬಟ್ಟೆ ತೆಗೆದುಕೊಂಡು ಹೋಗಲಿಕ್ಕೆ ಕೂಡ ಅವರಿಗೆ ದುಡ್ಡು ಇರಲಿಲ್ಲ. ಆಗ ಡಾ: ಹೆಚ್.ಎಲ್. ನಾಗೇಗೌಡರು ತಮ್ಮ ಟ್ರಸ್ಟ್‌ನ ವತಿಯಿಂದ 15 ಸಾವಿರ ರೂಪಾಯಿಗಳನ್ನು ಭರಮಪ್ಪನವರಿಗೆ, ಅವರ ಕುಟುಂಬಕ್ಕೆ ಅವರ ಮಕ್ಕಳಿಗೆ, ಅವರ ಸೊಸೆಯಂದಿರಿಗೆ, ಬಟ್ಟೆ ಉಡುಗೊರೆ, ಉಣ್ಣೆಯಂಥ ಧಿರಿಸುಗಳನ್ನು ಕೊಡಿಸಿ ಅವರನ್ನು ಅಲ್ಲಿಗೆ ಕಳುಹಿಸಿಕೊಡುವಂಥ ರೀತಿಯಲ್ಲಿ ಕೆಲಸವನ್ನು ಮಾಡಿದರು. ಅನಂತರ ಅವರಿಗೆ ರಾಜ್ಯ ಪ್ರಶಸ್ತಿಯನ್ನು ಕೊಡಿಸತಕ್ಕಂಥದ್ದು ಆಗಿತ್ತು. ಅದರಲ್ಲಿ ನಿಮಗೆಲ್ಲ ಗೊತ್ತಿದ್ದ ಹಾಗೆ ಅವರು ಶಿವಮೊಗ್ಗದ ಜಿಲ್ಲಾಧಿಕಾರಿಗಳಾಗಿದ್ದಂಥ ಸಂದರ್ಭದಲ್ಲಿ ಕೆಳದಿ ಸಂಸ್ಥಾನದ ಅರಸರಾಗಿದ್ದಂಥ ಶಿವಪ್ಪ ನಾಯಕರ ಅರಮನೆ, ಅದು ನಮ್ಮ ಅಬಕಾರಿ ಇಲಾಖೆಯವರ ಸ್ವಾಧೀನದಲ್ಲಿತ್ತು. ಅಬಕಾರಿ ಇಲಾಖೆಯವರು ಯಾರ್ಯಾರಿಂದ ಸಾರಾಯಿಯನ್ನು ಹಿಡಿದುಕೊಂಡು ಬಂದಿರುತ್ತಾರೆ ಅವನ್ನೆಲ್ಲ ತೆಗೆದುಕೊಂಡು ಬಂದು ಆ ಅರಮನೆಯಲ್ಲಿ ಹಾಕುತ್ತಿದ್ದರು. ಇವರು ಜಿಲ್ಲಾಧಿಕಾರಿಗಳಾಗಿದ್ದಂಥ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರಾಚ್ಯವಸ್ತು ಇಲಾಖೆಯ ಸಹಾಯದಿಂದ ಅದನ್ನು ಸಂಪೂರ್ಣವಾಗಿ ನವೀಕರಿಸಿ ಅದು ನಿಜವಾದಂಥ ಅರ್ಥದಲ್ಲಿ ಒಂದು ದೊಡ್ಡ ಅರಮನೆಯ ಸ್ವರೂಪವನ್ನು ಪಡೆಯುವಂಥ ರೀತಿಯಲ್ಲಿ ಮಾಡಿ ಕೆಳದಿ ಅರಸರ ಬಗ್ಗೆ ಕೂಡ ದೊಡ್ಡ ಕೆಲಸವನ್ನು ಮಾಡಿದಂಥವರು ಆಗಿದ್ದರು. ವಿದೇಶಿಯರು ಕಂಡಂಥ ಭಾರತ ಎಂದು ಒಂದು ಉತ್ತಮವಾದಂಥ ಪುಸ್ತಕವನ್ನು ಅವರು ಬರೆದರು. ವಿದೇಶಿಯವರು ಭಾರತ ದೇಶಕ್ಕೆ ಬಂದಂಥ ಸಂದರ್ಭದಲ್ಲಿ ಯಾವ್ಯಾವ ವಿಚಾರಗಳ ಬಗ್ಗೆ ಅವರ ಪ್ರಸ್ತಾಪ ಮಾಡಿದರು ಎನ್ನುವುದನ್ನು ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಣೆಗೊಳಿಸಿರತಕ್ಕಂಥ ಪುಸ್ತಕಗಳಲ್ಲಿ ನಾವು ಕಂಡಿದ್ದೇವೆ. 'ಬೆಟ್ಟದಿಂದ ಬಟ್ಟಲಿಗೆ' ಎಂದು ಹೇಳಿ ಕಾಫಿ ಬೀಜದ ವಿಷಯದಲ್ಲಿಯೂ ಕೂಡ ಬಹಳ ಅದ್ಭುತವಾದಂಥ ಕಥೆಯನ್ನು ಬರೆದಿದ್ದಾರೆ. ಹೀಗೆ ಒಂದು ಸಣ್ಣ ಕಾಫಿ ಬೀಜದ ವಿಚಾರವನ್ನು ಕೂಡ ಅವರು ಪ್ರಸ್ತಾಪ ಮಾಡಿದ್ದಾರೆ 'ದೊಡ್ಡಮನೆ' ಎಂದು ಹೇಳಿ ಅವರದೇ ಆಗಿರತಕ್ಕಂಥ ಒಂದು ಕಾದಂಬರಿಯನ್ನು ಬರೆಯುತ್ತಾರೆನ್ನುವುದಕ್ಕಿಂತ ಅದನ್ನು ಆತ್ಮಕಥೆ ಎಂದು ನಾವು ಭಾವಿಸಿಕೊಳ್ಳಬಹುದು. ಒಂದು ಹಳ್ಳಿಯ ಒಕ್ಕಲುತನದ ಮನೆತನದಲ್ಲಿದ್ದಂಥ ನಾಗೇಗೌಡರು ಅವರ ಯಾವ ಹುಟ್ಟು ಮತ್ತು ಪರಿಸರ

ಅದರ ಮೂಲಕವಾಗಿ ಮೇಲೆ ಬರಲಿಕ್ಕೆ ಏನು ಸಾಧ್ಯತೆ ಇತ್ತು ಎಂದು ಹೇಳುತ್ತೇನೆ. ನಮ್ಮಲ್ಲಿರುವಂಥ ಸಿರಿಯಜ್ಜರವರ ಬಗ್ಗೆಯಾಗಲಿ, ಎಲ್ಲರನ್ನೂ ಗುರುತಿಸಿ ಸುಮಾರು 20 ಸಾವಿರಕ್ಕಿಂತಲೂ ಹೆಚ್ಚು ತಾಸು ಆಗುವಂಥ ರೀತಿಯ ಎಲ್ಲ ರೆಕಾರ್ಡ್ ಅನ್ನು ಮಾಡಿಕೊಂಡಿರತಕ್ಕಂಥ ಒಂದು ಟ್ರಸ್ಟಿನ ಅಧ್ಯಕ್ಷರಾಗಿ ಅವರು ಕೆಲಸ ಮಾಡಿದಂಥವರು. ಬೋರಲಿಂಗಯ್ಯ ಅಂಥ ಹೇಳಿ ಅವರ ಶಿಷ್ಯನೇ ಇವತ್ತು ನಮ್ಮ ಹಂಪಿ ವಿಶ್ವವಿದ್ಯಾನಿಲಯದಲ್ಲಿ ಜನಪದ ಅಧ್ಯಯನ ಸಂಸ್ಥೆಗೆ ನೇಮಕ ಮಾಡಿದಂಥವರು. ಹಂಪಿ ವಿಶ್ವವಿದ್ಯಾನಿಲಯದಲ್ಲಿ ಕಂಬಾರರವರಿಗೆ ಗಿರಿಸೀಮೆ ನಿರ್ಮಾಣ ಮಾಡಿ ಎಂದು ಹೇಳಿ ಸಲಹೆ ಕೊಟ್ಟವರ ಪೈಕಿ ಕೂಡ ನಾಗೇಗೌಡರಾಗಿದ್ದರು. ಅವರು ರಾಮನಗರದಲ್ಲಿ ಏನು ಈ ಜನಪದ ಲೋಕವನ್ನು ಪ್ರಾರಂಭ ಮಾಡುವಾಗ ನಾನು ಕನ್ನಡ, ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿದ್ದೆ. ಆ ಸಂದರ್ಭದಲ್ಲಿ ನಾವು ಮಂಜೂರಾತಿ ಮಾಡಿಕೊಟ್ಟಂಥ ಹಣವನ್ನು ಉಪಯೋಗ ಮಾಡಿ ಇವತ್ತು ಅದು ಅತ್ಯಂತ ಪ್ರೇಕ್ಷಣೀಯವಾಗಿರತಕ್ಕಂಥ ಮತ್ತು ಜನಗಳಿಗೆ ಹಿಂದಿನ ತಲೆಮಾರಿನ ಜನ ಯಾವ ರೀತಿ ಬದುಕುತ್ತಿದ್ದರು, ಎನ್ನುವಂಥ ರೀತಿಯಲ್ಲಿ ಪರಂಪರೆಯ ಒಂದು ಸ್ಥಾನವನ್ನು ಅಂದರೆ ಹೆರಿಟೇಜ್ ಸೆಂಟರ್ ಅನ್ನುವಂಥ ರೀತಿಯಲ್ಲಿ ಕೂಡ ಮಾಡಿದಂಥ ಕೆಲಸವನ್ನು ನಾಗೇಗೌಡರು ಮಾಡಿದ್ದರು. ಅವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಲೋಕಸಭೆಗೂ ಕೂಡ ಅವರು ಚುನಾವಣೆಗೆ ನಿಂತು ಸೋತಂತಹವರಾಗಿದ್ದರು. ಯಾವುದೇ ಸಂದರ್ಭ ಬಂದಾಗ ಆ ಸವಾಲುಗಳನ್ನು ಎದುರಿಸುವಂಥ ರೀತಿಯಲ್ಲಿ ಕೆಲಸ ಮಾಡಿದಂಥವರು. ಅವರ ಒಬ್ಬ ಮಗಳು ಉತ್ತಮವಾಗಿರತಕ್ಕಂಥ ಪೈಂಟರ್ ಆಗಿದ್ದಾರೆ. she is a Lecturer. ಬಹಳ ಅದ್ಭುತವಾಗಿ ಕಾವಾದಲ್ಲಿ ಕೆಲಸ ಮಾಡಿದಂಥವರಾಗಿದ್ದರು. ಡಾ: ಮೋದಿಯವರ ಬಗ್ಗೆಯಂತೂ ನಾವು ಗುಣಗಾನ ಮಾಡತಕ್ಕಂಥ ಅಗತ್ಯವೇ ಇಲ್ಲ. ಪ್ರಾಯಶಃ ಗಿನ್ನಿಸ್ ದಾಖಲೆಯಲ್ಲಿ ಈ ಕಣ್ಣಿನ ಶಸ್ತ್ರ ಚಿಕಿತ್ಸೆಯ ಬಗ್ಗೆ ತಮ್ಮದೇ ಆದಂಥ ಹೊಸ ವಿಧಾನವನ್ನು ಕಂಡುಕೊಂಡು ರಷ್ಯಾ ದೇಶದ ಲೆನಿನ್ ಪ್ರಶಸ್ತಿಯಿಂದ ಹಿಡಿದು, ಪ್ರಪಂಚದ ಎಲ್ಲಾ ವಿಶಿಷ್ಟವಾಗಿರತಕ್ಕಂಥ ಪ್ರಶಸ್ತಿಗಳನ್ನು ಪಡೆದಿರತಕ್ಕಂಥ ಪದ್ಮಶ್ರೀ ಡಾ: ಮೋದಿಯವರು ಒಂದು ಉತ್ತಮವಾದಂಥ ಜನಪದ ಸೇವೆಯ ಉದಾಹರಣೆ ಎಂದು ಹೇಳಿ ನಾವು ಕರೆಯಬಹುದು. ಯಾರೂ ಊಹೆ ಮಾಡಲಿಕ್ಕೆ ಸಾಧ್ಯವಿಲ್ಲದಂಥ ಬೆಳಗಾವಿಯ ಆಯುರ್ವೇದ ಕಾಲೇಜಿನಲ್ಲಿ ಓದಿದಂಥವರು. ಆಯುರ್ವೇದ ಡಾಕ್ಟರುಗಳು ಅಂದರೆ, ಈ ಅಲೋಪತಿ ಡಾಕ್ಟರುಗಳು ಅವರು ಯಾವಾಗಲೂ ಕೂಡ 2ನೇ ದರ್ಜೆಯ ಜನ ಎಂದು ಹೇಳಿ ಪರಿಗಣಿಸಿರತಕ್ಕಂಥ ಒಂದು ವಾತಾವರಣದ ಸಂದರ್ಭದಲ್ಲಿ ಡಾ: ಮೋದಿಯವರು ತಮ್ಮ ಕೈಯಲ್ಲೇ ಸರಸ್ವತಿಯನ್ನು ಕುಸುರಿ ಕಲೆ ಇದ್ದಂಥ ರೀತಿಯಲ್ಲಿ ಇಟ್ಟುಕೊಂಡಿದ್ದವರು. ಅವರು ಕೇವಲ ಒಂದು ನಿಮಿಷದೊಳಗಾಗಿ ಕಣ್ಣಿನ ಪದರನ್ನು ತೆಗೆಯತಕ್ಕಂಥದ್ದು, ಮತ್ತು ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡತಕ್ಕಂಥದ್ದು, ಆ ಸಂದರ್ಭದಲ್ಲಿ ಅವರಿಗೆ ಬೇಕಾದಷ್ಟು ಟೀಕೆ ಟಿಪ್ಪಣಿಗಳಾದವು. ಸುಮ್ಮನೆ ತಮ್ಮ ಜನಪ್ರಿಯತೆಗಾಗಿ ಇಂಥ ಕೆಲಸವನ್ನು ಮಾಡುತ್ತಾರೆ. ಬಡವರಿಗಾಗಿ ಅನುಕೂಲವನ್ನು ಮಾಡಿಕೊಡುತ್ತೇವೆಂದು ಹೇಳಿ ಪೋಸ್ಟ್ ಆಪರೇಷನಲ್ ಕೇರ್ ಮಾಡುವುದಿಲ್ಲ. ಅವರು ಶಸ್ತ್ರ ಚಿಕಿತ್ಸೆಯ ನಂತರ ಅವರಿಗೆ ಏನೇನಿಲ್ಲ ಮಾಡಬೇಕು ಅದ್ಯಾವುದೂ ಮಾಡದೇ ಬಹಳ ಜನಗಳ ಕಣ್ಣು ಹೊರಟು ಹೋಗಿದೆ ಎಂದು ಹೇಳಿ ಅಪಪ್ರಚಾರವನ್ನು ಮಾಡಿದರು. ಆದರೆ, ಯಾವುದಕ್ಕೂ ಕೂಡ ಎದೆಗುಂದದೆ ಗಿನ್ನಿಸ್ ದಾಖಲೆಯಾಗುವಂಥ ರೀತಿಯಲ್ಲಿ ಭಾರತ ದೇಶದ ಉದ್ದಗಲದಲ್ಲಿ, ವಿದೇಶಗಳಲ್ಲಿರತಕ್ಕಂಥ ಬಡವರ

ಮನೆ ಬಾಗಿಲಿಗೇ ಹೋಗಿ ಶಸ್ತ್ರ ಚಿಕಿತ್ಸೆಯನ್ನು ಮಾಡಿ ಕಣ್ಣಿಲ್ಲದವರಿಗೆ ಕಣ್ಣನ್ನು ಕೊಟ್ಟಿರತಕ್ಕಂಥವರು. ಕಣ್ಣಿಲ್ಲದಂಥ ಜನ ನಾವು ಎಷ್ಟು ಜನ ಇದ್ದೇವೆ ಎನ್ನುವುದು ಗೊತ್ತಿಲ್ಲ. ಕಣ್ಣಿಲ್ಲದವರೇ ಒಂದೊಂದು ಸಲ ಕಣ್ಣಿದ್ದಂಥ ನಮ್ಮೆಲ್ಲರಿಗಿಂತಲೂ ಬಹಳ ಉತ್ತಮರು ಎಂದು ನಾನು ಭಾವಿಸುತ್ತೇನೆ. ಆ ರೀತಿಯಾಗಿರತಕ್ಕಂಥವರು. "ಲೋಕದ ಚೇಷ್ಟೆಗೆ ರವಿ ಬೀಜವಾದಂತೆ ಕರಣಗಳ ಚೇಷ್ಟೆಗೆ ಮನವೇ ಬೀಜ" ಎಂದು ಹೇಳಿ ಒಂದು ಕಡೆ ವಚನ ಬರುತ್ತದೆ. ಹಾಗೆ ಅನೇಕರು ಕಣ್ಣನ್ನು ಕಳೆದುಕೊಂಡಿದ್ದಂಥ ಜನಗಳಿಗೆ ತಾತ್ಕಾಲಿಕವಾದಂಥ ದೃಷ್ಟಿಕೋನ ಬರಲಿ ಎಂದು ಹೇಳಿ ಸೇವೆ ಮಾಡಿದಂಥವರು. ತಮ್ಮ ಆಸ್ತಿಯನ್ನು ಸಂಪೂರ್ಣವಾಗಿ ಇಂಥ ವಿಚಾರಗಳಿಗಾಗಿ ದಾನ ಕೊಟ್ಟಿದ್ದಾರೆ. ಅವರ ಮಗ ಈ ವಿಚಾರದಲ್ಲಿ ಮುಂದುವರಿಯುತ್ತೇವೆ ಎಂದು ಹೇಳಿ ಮಾತು ಕೊಟ್ಟು, ಡಾ: ಮೋದಿಯವರ ಆಸ್ಪತ್ರೆಯನ್ನು ಬೆಳೆಸಿದ್ದಾರೆ. ದಾವಣಗೆರೆಯಲ್ಲಿರತಕ್ಕಂಥದ್ದು, ಬೆಳಗಾವಿಯಲ್ಲಿರತಕ್ಕಂಥದ್ದು, ಬೇರೆ ಬೇರೆ ಕಡೆ ಇರತಕ್ಕಂಥ ತಮ್ಮ ಆಸ್ತಿಯನ್ನು ಸಹ ದಾನವಾಗಿ ಕೊಟ್ಟಿದ್ದಾರೆ. ವಿಧಾನ ಪರಿಷತ್ತಿನ ಸದಸ್ಯರಾಗಿ ಬಹಳ ಉತ್ತಮವಾದಂಥ ಕೆಲಸವನ್ನು ಮಾಡಿದರು ಎನ್ನುವುದಕ್ಕಿಂತಲೂ ಹೆಚ್ಚಾಗಿ ಅವರು ಬಂದು ಅಂಥ ಸದನದಲ್ಲಿ ಕೂಡತಕ್ಕಂಥದ್ದು, ಮಲ್ಲಿಕಾರ್ಜುನ ಮನ್ಸೂರ್‌ರವರಂಥವರಾಗಲಿ, ಅಥವಾ ಗಂಗೂಬಾಯಿ ಹಾನಗಲ್‌ರವರಂಥವರಾಗಲಿ ಅಥವಾ ಡಾ: ಎಂ.ಸಿ. ಮೋದಿಯಂಥವರಾಗಲಿ ಬಂದಾಗ ಸಂವಿಧಾನದ ಆಶಯನ ಪ್ರಕಾರ ಉತ್ತಮವಾದಂಥ ಸೇವೆಯನ್ನು ಮಾಡಿದಂಥ ಜನಗಳನ್ನು ಸರ್ಕಾರ ಮೇಲ್ಮನೆಗೆ ನಾಮಕರಣ ಮಾಡುತ್ತದೆ ಅನ್ನುವಂಥ ಸತ್ಸಂಪ್ರದಾಯಕ್ಕೆ ಅದೊಂದು ನಿದರ್ಶನವಾಗಿತ್ತು. ಇತ್ತೀಚೆಗೆ ನಾವು ಅದನದನು ಹೇಗೆ ದುರುಪಯೋಗಪಡಿಸುತ್ತೇವೆ ಎಂಬುದು ಗೊತ್ತಿದೆ. ನಮ್ಮ ಕಾರ್ಯಕರ್ತರನ್ನೇ ತುಂಬುವ ಪ್ರಯತ್ನ ಮಾಡುತ್ತೇವೆ. ಅಲ್ಲಿ ಸಂವಿಧಾನದತ್ತವಾಗಿರತಕ್ಕಂಥ, ಸಮಾಜ ಸೇವೆ ಅನ್ನುವಂಥ ಒಂದೇ ಒಂದು ಪರಿವಿಡಿಯ ಕೆಳಗೆ ನಾವು ನಮಗೆ ಬೇಕಾಗಿರತಕ್ಕಂಥ ಜನಗಳನ್ನು ತುಂಬಿ ಮೇಲ್ಮನೆಯೂ ಕೂಡ ತನ್ನ ಘನತೆಯನ್ನು ಕಳೆದುಕೊಳ್ಳತಕ್ಕಂಥ ರೀತಿಯಲ್ಲಿ ನಾವೆಲ್ಲ ವರ್ತಿಸುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಡಾ: ಮೋದಿಯಂಥವರನ್ನು ನೇಮಕ ಮಾಡಿದಂಥ ಸರ್ಕಾರ ಮತ್ತು ಅವರು ಆ ಸಂದರ್ಭದಲ್ಲಿ ನಡೆದುಕೊಂಡಂಥ ರೀತಿ ನಮಗೆ ಮಾರ್ಗದರ್ಶನ ಎಂದು ನಾವು ಭಾವಿಸಿದ್ದೇವೆ. ಶ್ರೀಮತಿ ಶಾಂತಾದೇವಿ ಮಾಳವಾಡರವರು ನಮ್ಮ ಮಾಳವಾಡರ ದೊಡ್ಡ ರೀತಿಯಲ್ಲಿದ್ದಂಥವರಾಗಿದ್ದರೂ ಕೂಡ ಆ ನೆರಳಿನಲ್ಲಿ ಬೆಳೆದಂಥವರಲ್ಲ. ಶಾಂತಾದೇವಿಯವರು ಸ್ವತಃ ಕವಿಯಿತ್ರಿಯವರಾಗಿದ್ದರು; ಬರಹಗಾರರಾಗಿದ್ದರು. ಧಾರವಾಡದಲ್ಲಿ ಮಾಳವಾಡರವರ ಮನೆಯೆಂದರೆ ಅತಿಥ್ಯಕ್ಕೆ ಹೆಸರಾಗಿದ್ದಂಥವರು. ಒಂದು ತಮಾಷೆಯ ಪ್ರಸಂಗ ಅಂದರೆ ನಮ್ಮ ಬೀ.ಜಿ.ಯವರು ನಮ್ಮ ಜಿಲ್ಲೆಯವರು. ಬಹಳ ತಮಾಷೆಯಾಗಿ ಅದನ್ನು ಹೇಳುತ್ತಿದ್ದಂಥವರು. ಅವರು ಧಾರವಾಡದಲ್ಲಿ ಯಾವ್ಯಾವ ಸಂದರ್ಭದಲ್ಲಿ ಹೋಗುತ್ತಿದ್ದರು, ಆಗ ಮಾಳವಾಡರೇ ಅಧ್ಯಕ್ಷರಾಗಿರುತ್ತಿದ್ದರು. ಆಗ ಬೀಚಿಯವರು ಒಂದು ಸಲ ಒಂದು ಸಮಾರಂಭದಲ್ಲಿ ಮಾಮೂಲಿ ಅಧ್ಯಕ್ಷರಾದಂಥ ಮಾಳವಾಡರೇ ಎಂದು ಹೇಳಿ ಭಾಷಣವನ್ನು ಪ್ರಾರಂಭ ಮಾಡಿದರು. ಆದ್ದರಿಂದ, ಇನ್ನೊಂದು ಸಂದರ್ಭ ಬಂದಾಗ ಮಾಳವಾಡರವರು ಬೀಚಿಯವರು ನಮಗೆ ಯಾವಾಗಲೂ ಮಾಮೂಲಿ ಅಧ್ಯಕ್ಷತೆ ಎಂದು ಕರೆಯುತ್ತಾರೆ. ಆದ್ದರಿಂದ ಅಧ್ಯಕ್ಷರ ಸ್ಥಾನ ಬೇಡ ಎಂದು ಹೇಳಿ ಮೂಲೆಯಲ್ಲಿ ಕುರ್ಚಿ ಹಾಕಿಕೊಂಡು ಕುಳಿತರೆ ಮಾಮೂಲಿ ಅಧ್ಯಕ್ಷರಾಗಿದ್ದ ಮಾಳವಾಡರು, ಈಗ ಮೂಲೆ ಅಧ್ಯಕ್ಷರಾಗಿದ್ದಾರೆ ಎಂದು

ಹೇಳಿ ತಮಾಷೆಯನ್ನು ಮಾಡುತ್ತಿದ್ದರು. ಅವರೂ ದೊಡ್ಡ ಸಾಹಿತಿಗಳಾಗಿದ್ದರು. ಶಾಂತಾದೇವಿಯವರು ಮನೆ ಇವತ್ತು ನಮಗೆಲ್ಲರಿಗೂ ಕೂಡ ಅತ್ಯಂತ ಒಂದು ಪವಿತ್ರವಾದಂಥ ಸ್ಥಳ. ಮಾಳವಾಡರವರು ಶರಣ ಸಾಹಿತ್ಯದ ಬಗ್ಗೆ, ಕನ್ನಡ ಸಾಹಿತ್ಯದ ಬಗ್ಗೆ ಅವರು ಬರೆದಿರತಕ್ಕಂಥದ್ದರ ಜೊತೆಗೆ ಅವರೂ ಕೂಡ ತಮ್ಮದೇ ಆದಂಥ ವ್ಯಕ್ತಿತ್ವವನ್ನು ಬೆಳೆಸಿಕೊಂಡಂಥವರಾಗಿದ್ದರು. ಅವರಿಗೆ ರಾಜ್ಯ ಪ್ರಶಸ್ತಿ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೆ. ಜವರೇಗೌಡ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ದಾನ ಚಿಂತಾಮಣಿ ಪ್ರಶಸ್ತಿ ಇವೆಲ್ಲವೂ ಬಂದಿವೆ. ಡಾ: ನಂಜುಂಡಪ್ಪನವರ ಬಗ್ಗೆ ಈಗಾಗಲೇ ಅನೇಕರು ಹೇಳಿದ್ದಾರೆ. ನಾನು ಪ್ರಾಯಶಃ ಇದನ್ನೆಲ್ಲ ಜಾಸ್ತಿ ಹೇಳಿದರೆ, ಬಹಳ ಜನಗಳಿಗೆ ಏನೋ ಇದು ಎಳೆಯಬೇಕು ಅನ್ನುವಂಥ ಕುತಂತ್ರದಲ್ಲಿ ಈ ಮಾತುಗಳನ್ನು ಮಾತನಾಡುತ್ತಾರೆ ಎಂದು ಅಂದುಕೊಳ್ಳುತ್ತಿರಬಹುದು. ಆದರೆ, ಹಾಗೆ ಯಾರೂ ಅನ್ನಲಿಕ್ಕಿಲ್ಲವೆಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು : ಖಂಡಿತ ಇಲ್ಲ. ನಿಮ್ಮ ಭಾವನೆಯನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ...... ಅದು ಸತ್ಯವಾದಂತ ವಿಚಾರ. ನಾವೂ ಕೇಳಲಿಕ್ಕೆ ಸಂತೋಷಪಡುತ್ತಿದ್ದೇವೆ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಏನೆಲ್ಲಾ ನಿರ್ಣಯ ಆಗಬೇಕೋ ಆ ನಿರ್ಣಯ ಆಗೇ ಆಗುತ್ತದೆ. ಆದ್ದರಿಂದ, ಇಲ್ಲಿ ಎಲ್ಲರೂ ತಯಾರಾಗೇ ಬಂದಿದ್ದೇವೆ. ಮಾನ್ಯ ರಾಜ್ಯಪಾಲರ ಸೂಚನೆ ಮೇರೆಗೆ ನಿರ್ಣಯ ಮಾಡಬೇಕು ಎನ್ನುವಂಥದ್ದು ಇದೆ. ಆದರೆ, ನಮ್ಮನ್ನಗಲಿ ಹೋಗಿರತಕ್ಕಂಥ ಜನಗಳ ಒಳ್ಳೆಯತನವನ್ನು ನಾವು ಸ್ಮರಣೆ ಮಾಡುವುದರ ಮೂಲಕವಾಗಿ ಕನಿಷ್ಠಪಕ್ಷ ಅಂಥ ಒಂದು ಗೌರವವನ್ನು ನಾವು ಕೊಡಬೇಕು ಎನ್ನುವ ಕಾರಣಕ್ಕಾಗಿಯೇ ಆಗಲಿ ಅದನ್ನು ಎಳೆಯಬೇಕು, ಲಂಘಿಸಬೇಕು ಎನ್ನುತಕ್ಕಂಥದ್ದು ಇಲ್ಲ. ಇನ್ನೂ ಅನೇಕ ಹಿರಿಯರು ಮಾತನಾಡತಕ್ಕಂಥವರಿದ್ದಾರೆ. ಡಾ: ನಂಜುಂಡಪ್ಪನವರು ಬಹಳ ಉತ್ತಮವಾದಂಥ ಒಂದು ಕೃಷಿ ಮನೆತನದಿಂದ ಬಂದಂಥವರಾಗಿದ್ದರು. ಈ ಸಂದರ್ಭದಲ್ಲಿ ನಾನು ದಿವಂಗತ ದೇವರಾಜ ಅರಸುರವರನ್ನು ಸ್ಮರಣೆ ಮಾಡುತ್ತೇನೆ. ಐಎಎಸ್ ಅಲ್ಲದೇ ಇರತಕ್ಕಂಥ ಅಧಿಕಾರಿಗಳನ್ನು ಕಾರ್ಯದರ್ಶಿಗಳನ್ನಾಗಿ ತೆಗೆದುಕೊಳ್ಳತಕ್ಕಂಥದ್ದೇನಿತ್ತು, ಆ ಸಂಪ್ರದಾಯ ಪ್ರಾಯಶಃ ದೇವರಾಜ ಅರಸು ಮುರಿದು ಮಾಡಿರತಕ್ಕಂಥದ್ದು. ಹಿಂದೆ ನಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ಅವರನ್ನು ನೇಮಕ ಮಾಡತಕ್ಕಂಥದ್ದನ್ನು ಮಾಡಿದ್ದೇವೆ. ಬೇರೆ ಬೇರೆ ಸಂದರ್ಭದಲ್ಲಿ ಮಾಡಿರತಕ್ಕಂಥದ್ದು ಇದೆ. ಡಾ: ನಂಜುಂಡಪ್ಪನವರು ಐಎಎಸ್ ಆಗಿಲ್ಲ ಅನ್ನುವುದು ಮುಖ್ಯವಲ್ಲ. ಅವರು ಕೊಟ್ಟಂಥ ಆರ್ಥಿಕ ಚಿಂತನೆ ಕೊಡುಗೆಯನ್ನು ನಾವು ಯಾವಾಗಲೂ ಕೂಡ ಸ್ಮರಿಸಿರತಕ್ಕಂಥ ಜನ. ಜನತಾ ಮನೆಗಳನ್ನು ಕಟ್ಟಬೇಕೆನ್ನುವಂಥ ಮೂಲಭೂತ ವಿಚಾರಗಳನ್ನು ದೇವರಾಜ ಅರಸುರವರೇ ಹೇಳಿದಂಥ ಅನೇಕ ಹಿರಿಯರಲ್ಲಿ ಅವರೂ ಕೂಡ ಬಹಳ ಮುಖ್ಯಸ್ಥರಾಗಿ ಕೆಲಸ ಮಾಡಿದಂಥವರು. ಯೋಜನಾ ಆಯೋಗದಲ್ಲಿ ಅವರು ಮಾಡಿದಂಥ ಕೆಲಸ, ಕೇವಲ ಎರಡೇ ದಿವಸ ಆಗಿರಬಹುದು. ಆ ಮಾತು ಬೇರೆ. ಅವರು ರಾಜ್ಯಪಾಲರ ಸಲಹೆಗಾರರಾಗಿ ಕೂಡ ನೇಮಕಾತಿ ಹೊಂದಿದ್ದರು. ಕರ್ನಾಟಕ ವಿಶ್ವವಿದ್ಯಾನಿಲಯದ ನಂತರ ಇಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕುಲಪತಿಗಳಾದ ಬಳಿಕ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಿಗದಿತವಾದ ಸಮಯದಲ್ಲಿ ಪರೀಕ್ಷೆಗಳನ್ನು ನಡೆಸುತ್ತೇವೆ ಅನ್ನುವಂಥ ಎದೆಗಾರಿಕೆಯ ಮಾತನ್ನು ಹೇಳಿ, ಆ ರೀತಿಯಾಗಿ ಪರೀಕ್ಷೆಯನ್ನು ನಡೆಸಿದಂಥ ಒಬ್ಬರೇ ಕುಲಪತಿ ಇದ್ದರೆ ಅದು ಡಾ: ನಂಜುಂಡಪ್ಪನವರು. ಯಾರೂ ಅದಕ್ಕೆ ಒಪ್ಪಿರಲಿಲ್ಲ. ಇವತ್ತು

ನಮ್ಮ ಪರೀಕ್ಷೆ ನಡೆಯುತ್ತದೆಂದರೆ, ಅದು ಇನ್ನು ಮೂರು ತಿಂಗಳಿಗೆ ಆಗುತ್ತಿತ್ತು. ಇಪತ್ತು ನಾವು ಫಲಿತಾಂಶವನ್ನು ಪ್ರಕಟಣೆ ಮಾಡುತ್ತೇನೆಂದರೆ ಇನ್ನು ಯಾವಾಗಲೋ ಪರೀಕ್ಷೆ ಫಲಿತಾಂಶ ಪ್ರಕಟವಾಗುತ್ತಿತ್ತು. ಅವರು ಯಾವುದೇ ನಿಷ್ಠುರಿಕೆಗೂ ಹೆದರದೆ, ದಾಕ್ಷಿಣ್ಯಕ್ಕೊಳಗಾಗದೆ ತಾವೇನು ನಿರ್ಧಾರ ತೆಗೆದುಕೊಂಡಿದ್ದರೋ ಅದೇ ಪ್ರಕಟವಾಗಿ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ತಮ್ಮ ಉತ್ತಮವಾಗಿರತಕ್ಕಂಥ ಸೇವೆಯನ್ನು ಮಾಡಿದರು. ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಕೆಲಸವನ್ನು ಮಾಡುವಾಗ ಬಡವರ ಪರವಾಗಿ, ಮತ್ತು ಸಮಾಜದ ಕೆಲಸದ ವಿಚಾರದಲ್ಲಿ ಅವರು ಬಹಳ ಕಳಕಳಿಯನ್ನು ತೋರಿಸಿದವರಂಥವರಾಗಿದ್ದರು. ಸೇಂಟ್ ಜಾನ್ ಆಂಬ್ಯುಲೆನ್ಸ್ ವಿಚಾರದಲ್ಲಿ ಕೂಡ ಅವರು ಕೆಲಸ ಮಾಡಿರತಕ್ಕಂಥದ್ದನ್ನು ನಾವು ಕಂಡಿದ್ದೇವೆ. ಅದೆಲ್ಲದಕ್ಕಿಂತಲೂ ಹೆಚ್ಚಾಗಿ ಒಬ್ಬ ಆರ್ಥಿಕ ತಜ್ಞ ತನ್ನ ನೆಲದ ವಾಸನೆಯನ್ನು ಕಳೆದುಕೊಳ್ಳದೇ ಬದುಕತಕ್ಕಂಥದ್ದು ಬಹಳ ಕಷ್ಟ. ನಿಮಗೆಲ್ಲಾ ಗೊತ್ತಿದ್ದಂತೆ, ಅನೇಕ ಆರ್ಥಿಕ ತಜ್ಞರು ಯೋಜನಾ ಆಯೋಗದ ಭಾವನವನ್ನು ಸೇರಿದ ತಕ್ಷಣವೇ ಒಂದು ದಂತ ಗೋಪುರದಲ್ಲಿ ಸೇರಿಕೊಂಡು ಬಿಡುತ್ತಾರೆ. ಆ ದಂತ ಗೋಪುರದಲ್ಲಿ ಸೇರಿಕೊಂಡಿರತಕ್ಕಂಥವರಿಗೂ ಇವರಿಗೂ ಎಷ್ಟು ವ್ಯತ್ಯಾಸವೆಂದರೆ ಅದು ನಿಮಗೆಲ್ಲ ಗೊತ್ತಿರಬಹುದು, ಇಲ್ಲಿ ತಮಾಷೆಯಾಗಿ ಹೇಳತಕ್ಕಂಥ ಕಥೆ ಅದು. ನಮ್ಮ ಅನೇಕ ಆರ್ಥಿಕ ತಜ್ಞರು ದಂತ ಗೋಪುರದಲ್ಲಿ ಕುಳಿತುಕೊಂಡಾಗ, ಯೋಜನಾ ಆಯೋಗದಲ್ಲಿ ಕುಳಿತುಕೊಂಡಾಗ ಜನಸಾಮಾನ್ಯರಿಂದ ಎಷ್ಟು ದೂರ ಹೋಗುತ್ತಾರೆ ಎನ್ನುವುದಕ್ಕೆ ಬಹಳ ಜನರಿಗೆ ಅದು ಗೊತ್ತಿರುವಂಥ ಕಥೆಯಾದರೂ ಇದು ಅಪ್ರಸ್ತುತವೆಂದು ನಾನು ಭಾವಿಸುವುದಿಲ್ಲ. ಡಾ: ನಂಜುಂಡಪ್ಪನವರು ಅದಕ್ಕೆ ಹೊರತಾಗಿದ್ದರು ಅನ್ನುವುದನ್ನು ಹೇಳಲಿಕ್ಕಾಗಿಯೇ ಈ ಒಂದು ಸಣ್ಣ ಕಥೆಯನ್ನು ಮತ್ತೊಂದು ಸಲ ನಿಮಗೆ ಜ್ಞಾಪಕ ಬರಲಿ ಎಂದು ಹೇಳುತ್ತೇನೆ. ಹಿಂದೆ ನಾಗರಹೊಳೆಯ ಸಂದರ್ಭದಲ್ಲಿ ಬಹಳ ನದಿಗಳೆಲ್ಲ ತುಂಬಿ ಹರಿಯುತ್ತಿದ್ದವು. ಆ ಸಂದರ್ಭದಲ್ಲಿ ಮೃಗಗಳೆಲ್ಲ ದಾಟಿ ಹೋಗುವುದು ಹೇಗೆ? ಆಹಾರ ತೆಗೆದುಕೊಳ್ಳುವುದು ಹೇಗೆ? ಬೇಟೆಯಾಡುವುದು ಹೇಗೆ? ಎಂದು ಹೇಳಿ ಅವರೆಲ್ಲ ಕುಳಿತಾಗ, ಇಲ್ಲ, ಯೋಜನಾ ಆಯೋಗದವರಿಗೆ ಹೇಳಿ ನದಿಗೆ ಒಂದು ಸೇತುವೆಯನ್ನು ಕಟ್ಟಿಸಲಿಕ್ಕೆ ನಾವು ಮನವಿಯನ್ನು ಕೊಡಬೇಕೆಂದು ಹೇಳಿ ಮಾಡುತ್ತಾರೆ. ಆ ಮನವಿಯನ್ನು ಕೊಡಬೇಕಾದರೆ ಯಾರು ಕೊಡಬೇಕು? ಮತ್ತೆ ಆ ಅರಣ್ಯದ ರಾಜ ಅಂದರೆ ಸಿಂಹವೇ ಆದ್ದರಿಂದ ಸಿಂಹನನ್ನೇ ಕಳುಹಿಸಿ ಎಂದು ಹೇಳಿ ಸಿಂಹವನ್ನು ಕಳುಹಿಸಿಕೊಡುತ್ತಾರೆ. ಆದರೆ, ಆತ ವಾಪಸ್ಸು ಬರುತ್ತಾನೆ. ಬಂದು, ಇಲ್ಲ, ಆ ಆಯೋಗದವರು ನಮ್ಮ ಮಾತನ್ನು ಕೇಳಲಿಲ್ಲ. ನಮ್ಮ ಆದ್ಯತೆಗಳು ಬೇರೆ ಇದೆ, ಅರಣ್ಯದ ನದಿಗೆ ನಾವು ಸೇತುವೆಯನ್ನು ಕಟ್ಟಿಸಬೇಕಾದದ್ದು ನಮ್ಮ ಆದ್ಯತೆ ಅಲ್ಲ. ಈ ಸಲ ಅಲೋಕೇಷನ್ ಇಲ್ಲ. ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ನೋಡಿಕೊಳ್ಳೋಣವೆಂದು ಹೇಳಿದರೆಂದ ಹೇಳಿತು. ಅದಾದಮೇಲೆ ಆನೆ, ಒಂಟೆ, ಮತ್ತೊಂದು ಎಲ್ಲಾ ಮೃಗಗಳು ಪ್ರಯತ್ನ ಮಾಡಿದವು. ಯಾವ ಮೃಗಗಳಿಂದಲೂ ಕೂಡ ಅವರ ಬೇಡಿಕೆಗಳಿಗೆ ಮನ್ನಣೆ ಸಿಗಲಿಲ್ಲ. ಆ ಸಂದರ್ಭದಲ್ಲಿ ಒಂದು ಕತ್ತೆ ಬಹಳ ಧೈರ್ಯದಿಂದ ಎದ್ದುನಿಂತು ನಾನು ಒಂದು ಸಲ ಹೋಗಿ ಯೋಜನಾ ಆಯೋಗದ ಉಪಾಧ್ಯಕ್ಷರನ್ನು ಕಂಡು ಕೇಳಿಕೊಂಡು ಬರುತ್ತೇನೆಂದು ಹೇಳಿದ ಕೂಡಲೆ, ಆ ಕತ್ತೆಯ ಬಗ್ಗೆ ಎಲ್ಲರೂ ನಕ್ಕರು, ಹಾಸ್ಯ ಮಾಡಿದರು, ಸಿಂಹವೇ ತರಲಿಕ್ಕೆ ಸಾಧ್ಯವಾಗಿಲ್ಲವೆಂದರೆ ಈ ಕತ್ತೆ ಏನು ತರುತ್ತದೆ ಎಂದು ಹೇಳಿದ ಮೇಲೆ, ಆ ಕತ್ತೆ ಹೋಯಿತು. ವಾಪಸ್ ಬಂದಾಗ ಅದು ಹೇಸರವನ್ನು

ಹಾಕಿಕೊಳ್ಳುತ್ತಾ ಬಹಳ ಸಂತೋಷದಿಂದ ಬಂತು. ಬಂದಾಗ ಎಲ್ಲರೂ ಕೂಡ ಏನಾಯಿತು ಎಂದು ಕೇಳಿದರು. ಆಗ ಕತ್ತೆ ಇಲ್ಲಾ ನಾನು ಯೋಜನಾ ಆಯೋಗದವರನ್ನು ಒಪ್ಪಿಸಿದ್ದೇನೆ. ಒಂದು ಸೇತುವೆ ಅಲ್ಲ ಎರಡು ಸೇತುವೆ ನಮಗೆ ಸಿಕ್ಕಿದೆ ಎಂದು ಹೇಳಿತು. ಆಗ ಎಲ್ಲರೂ ಆಶ್ಚರ್ಯ ಚಕಿತರಾಗಿ, ಆ ರೀತಿಯಾಗಿ ಹೇಗೆ ಎರಡು ಸೇತುವೆ ತಂದಿರಿ ಎಂದು ಕೇಳಿದ್ದಕ್ಕೆ, ಆಗ ಕತ್ತೆ ಅಲ್ಲಿ ಇದ್ದಂಥವರೆಲ್ಲ ನನ್ನ ಸಹೋದರರು ಇದ್ದರು. ಆದುದರಿಂದ, ನನಗೆ ಎರಡು ಸೇತುವೆ ಸಿಕ್ಕಿತು ಎನ್ನತಕ್ಕಂಥ ಮಾತನ್ನು ಹೇಳಿತು. ಅಂಥ ಸಾಲಿಗೆ ಡಾ: ನಂಜುಂಡಪ್ಪನವರು ಸೇರಿದಂಥವರಲ್ಲ. ಅವರು ಈ ಜನದ ನೆಲಕ್ಕೆ ಹೊಂದಿಕೊಂಡಂಥವರು ಆಗಿದ್ದರು, ಆ ದೃಷ್ಟಿಯಿಂದ ಡಾ: ನಂಜುಂಡಪ್ಪನವರನ್ನು ಇವತ್ತು ಪಾರ್ಥಿವವಾಗಿ ಕಳೆದುಕೊಂಡಿರಬಹುದು, ಆದರೆ ಅದೇರೀತಿಯಾಗಿ ನಮ್ಮ ಮೈಸೂರು ಮಠ್‌ರವರು ಬಹಳ ತಮಾಷೆಯಾದ ಜನ, ಡೆಕ್ಕನ್ ಹೆರಾಲ್ಡ್‌ನಲ್ಲಿ, ಪ್ರಜಾವಾಣಿ ಯಲ್ಲಿ ಅವರು ಬರೆಯುತ್ತಿದ್ದಂಥ ಲೇಖನಗಳು, ಇತ್ತೀಚಿನ ದಿನಗಳಲ್ಲಿ "ಶಿವನ ಡಂಗುರ" ಎಂದು ಬರೆದಿರತಕ್ಕಂಥ ಆತ್ಮಕತೆ, ಆಮೇಲೆ ಅವರು ಲಂಕೇಶ್‌ರವರ ಜೊತೆಗಿದ್ದಂಥ ಸಂಪರ್ಕ, ರಾಮಚಂದ್ರಶರ್ಮರವರ ಜೊತೆಗಿದ್ದಂಥ ಸಂಪರ್ಕ, ಹೀಗೆ ಇವತ್ತು ಅನೇಕರು ನಮ್ಮನ್ನು ಬಿಟ್ಟು ಅಗಲಿದ್ದಾರೆ, ವಜ್ರಮುನಿಯವರಾಗಲಿ, ರಾಜಾರಾವ್‌ರವರಾಗಲಿ, ಅಗಲಿರತಕ್ಕಂಥ ಹಿರಿಯರು ನಾಡು ಸಾಂಸ್ಕೃತಿಕವಾಗಿ ಬಡತನಕ್ಕೆ ಒಳಗಾಗಿದೆ. ಆದರೆ ಸಾವು ನಿಶ್ಚಿತವಾಗಿರತಕ್ಕಂಥದ್ದು, ಯಾರಾದರೂ ಕೂಡ ಒಂದಲ್ಲ ಒಂದು ದಿವಸ ಇದಕ್ಕೆ ಒಳಗಾಗಲೇಬೇಕು. ನಮ್ಮ ಮನೆ ಬಾಗಿಲಿಗೆ ಸಾವು ತಟ್ಟುತ್ತದೆ ಎನ್ನುವುದು ನಿಶ್ಚಿತ, ಆ ಸಾವು ತಟ್ಟುವಂಥ ಸಂದರ್ಭದ ನಡುವೆ ನಾವು ನಾಲ್ಕು ಮಂದಿಯ ನಾಲಿಗೆಯಲ್ಲಿ ಉಳಿಯುವಂಥ ರೀತಿಯ ಬದುಕನ್ನು ಅದರ ಇತಿಮಿತಿಗಳಲ್ಲಿ ಬದುಕಬೇಕು. ಎಲ್ಲರೂ ಕೂಡ ನಂಜುಂಡಪ್ಪನವರಾಗಲಿಕ್ಕೆ ಆಗುವುದಿಲ್ಲ, ಎಲ್ಲರೂ ಕೂಡ ಕೆ.ಆರ್. ನಾರಾಯಣ ಆಗಲಿಕ್ಕೆ ಆಗುವುದಿಲ್ಲ. ಆದರೆ ಉಪದ್ರವಿಗಳೆನಿಸಿಕೊಂಡು, ಒಬ್ಬ ದುಷ್ಟ ಹೋದ ಎಂದು ಜನಗಳ ಬಾಯಲ್ಲಿ ಬರಲಾರದ ರೀತಿಯಲ್ಲಿ ಬದುಕಿದಂಥ ಇವರೆಲ್ಲರೂ ಕೂಡ ತಮ್ಮ ಸಾರ್ವಜನಿಕ ಬದುಕಿನಲ್ಲಿ, ಉತ್ತಮ ಸೇವೆಯನ್ನು ಮಾಡಿದ್ದಾರೆ. ಸಿ.ಜಿ. ಕೃಷ್ಣಸ್ವಾಮಿಯವರ ಬಗ್ಗೆ ಕೂಡ ತಾವು ಸೂಚಿಸಿರುವುದು ಅತ್ಯಂತ ಮುಖ್ಯ. ಅವರ ಜೊತೆಗೆ ನಾನೂ ಇದ್ದೆ. ಕೇರಳದಲ್ಲಿರತಕ್ಕಂಥ ಕೋಕನಟ್ ಡೆವಲಪ್‌ಮೆಂಟ್ ಬೋರ್ಡ್‌ಗೆ ಜಾರ್ಜ್ ಥಾಮಸ್ ಎನ್ನತಕ್ಕಂಥವರು ಅಧ್ಯಕ್ಷರಾಗಿ ಬಂದರು. ತಮಗೆಲ್ಲರಿಗೂ ಗೊತ್ತಿದ್ದಂತೆ ದೇವೇಂದ್ರ ಶರ್ಮ ಎನ್ನುವವರು ಅತ್ಯುತ್ತಮವಾಗಿರತಕ್ಕಂಥ ಒಬ್ಬ ಡಬ್ಲ್ಯುಟಿಒ ವಿರುದ್ಧವಾಗಿ ಹೋರಾಟ ಮಾಡಿರತಕ್ಕಂಥವರು. ಅವರು ಸಹೋದರನೇ ರಾಜೇಂದ್ರ ಸಿಂಗ್, ಅವರೇ ರಾಜಸ್ತಾನದಲ್ಲಿ ಮಳೆಕೊಯ್ಲಿನ ಬಗ್ಗೆ ಯೋಜನೆ ಮಾಡಿದಂಥವರು. ಅವರು ಹೌಸ್ ಆಫ್ ಕಾಮನ್ಸ್‌ನ ಜನಗಳನ್ನು ಉದ್ದೇಶಿಸಿ ದೇವೆಂದ್ರ ಶರ್ಮರವರು ಮಾತನಾಡಿದ್ದಾರೆಂದರೆ ಹೆಮ್ಮೆ ಬರುತ್ತದೆ. ಟೋನಿ ಬ್ಲೇಯರ್ ಹಾಗೂ ಇವರ ನಡುವೆ ನಡೆದಿರತಕ್ಕಂಥ ಸಂವಾದ ಈಗಾಗಲೇ ಪ್ರಕಟಿತವಾಗಿರುವುದು ಬಂದಿದೆ. ಡಬ್ಲ್ಯುಟಿಒ ಮೂಲಕ ನಮ್ಮ ಕೃಷಿಗೆ ಹೆಚ್ಚು ಹೊಡೆತ ಬೀಳುತ್ತದೆ ಎನ್ನುವ ವಿಚಾರವಾಗಿ ಮಾತನಾಡುವಾಗ, ನಾವು ಹಾಗೂ ಸಿ.ಜಿ. ಕೃಷ್ಣಸ್ವಾಮಿಗಳವರು ಎರಡು ದಿವಸಗಳ ಕಾಲ ಆ ಕಾರ್ಯಾಗಾರದಲ್ಲಿ ಇದ್ದೆವು. ನಂತರದಲ್ಲಿ ಸಿರಿಗೆರೆ ಮಠದ ಒಂದು ಸಾಕ್ಷ್ಯಚಿತ್ರವನ್ನು ಮಾಡುತ್ತೇವೆಂದು ಅಲ್ಲಿದ್ದಂಥ ಸಂದರ್ಭದಲ್ಲಿ ಅವರು ಹೃದಯಘಾತಕ್ಕೆ ಒಳಗಾದರು. ಅವರು ಅತ್ಯುತ್ತಮ ರಂಗತಜ್ಞ, ಸಾಮಾಜಿಕ ಕೆಲಸಕಾರ್ಯಗಳು, ಎಡಪಂಥೀಯ ಒಲವಿನಿಂದ

ಪ್ರಾರಂಭವಾಗಿ ಮಠಮಾನ್ಯಗಳ ಜೊತೆಗೂ ಸಂಪರ್ಕವಿತ್ತು, ಶರಣ ಸಂಪ್ರದಾಯಕ್ಕೆ ಬಂದಂಥವರು, ಅವರ ಜೀವನದಲ್ಲಿ ಒಂದು ಉದ್ದೇಶ ಈಡೇರಲಿಲ್ಲ, ಅಲ್ಲ ಪ್ರಭುವಿನ ಮೇಲೆ ಒಂದು ಉತ್ತಮವಾದ ನಾಟಕವನ್ನು ಬರೆಯಬೇಕೆಂಬ ಹಾಗೂ ಅದನ್ನು ನಿರ್ದೇಶಿಸಬೇಕೆಂದು ಇತ್ತು, ಅದು ಆಗಲಿಲ್ಲ, ಆ ಎಲ್ಲರ ಪರವಾಗಿ ತಾವು ಇವತ್ತೇನು ಉತ್ತಮವಾಗಿರತಕ್ಕಂಥ ಸಂತಾಪ ಸೂಚನೆಯನ್ನು ಈ ಸದನದ ಮುಂದೆ ಮಂಡಿಸಿದ್ದೀರಿ, ನಾವು ಎಲ್ಲರೂ ಇಡೀ ಸದನ ಒಕ್ಕೊರಲಿನಿಂದ ನೀವು ಸೂಚಿಸಿದ ಸಂತಾಪ ಸೂಚನೆಗೆ ಸಹಮತವನ್ನು ವ್ಯಕ್ತಮಾಡುತ್ತಾ, ಅಗಲಿದ ಹಿರಿತ ಜೀವಿಗಳ ಆತ್ಮಕ್ಕೆ ಶಾಂತಿಯಾಗಲಿ ಎಂದು ನಾನು ಪ್ರಾರ್ಥಿಸಿ, ಅದಕ್ಕೆ ತಾವು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ನಾನು ನಮಸ್ಕರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಇವತ್ತೇನು 24 ಜನ .... ಆಗಬಹುದು... ನನ್ನ ಅಭ್ಯಂತರ ಏನೂ ಇಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಈಗ 1–30 ಆಯಿತು, ಮಧ್ಯಾಹ್ನದ ಬೋಜನ ಮಾಡಿ ಮುಂದುವರಿಸಬಹುದು.

ಅಧ್ಯಕ್ಷರು : ಅವರು ಗಂಭೀರವಾಗಿ ಮಾತನಾಡುತ್ತಿದ್ದಾರೆ, ಸುಮ್ಮನೆ ಕುಳಿತುಕೊಳ್ಳಿ...

ಶ್ರೀ ಹೆಚ್.ಡಿ. ಬಸವರಾಜ್ : ಅವರು ಸಂತಾಪ ಸೂಚನೆಯ ಬಗ್ಗೆ ಮಾತನಾಡುತ್ತಿದ್ದಾರೆ, ಟೈಂ ಆಯಿತು ಎಂದು ಮುಂದಕ್ಕೆ ಹಾಕಿ ಎಂದರೆ ಹೇಗೆ? ನಮಗೆ ಊಟ ಮುಖ್ಯನಾ? ಮೊದಲು ನಾವು ಅಗಲಿದ ನಾಯಕನ ಬಗ್ಗೆ ಸ್ಮರಣೆ ಮಾಡೋಣ, ಊಟದ ಟೈಂ ಸ್ವಲ್ಪ ಮುಂದಕ್ಕೆ ಹಾಕಿದರು ಪರವಾಗಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖರಾದವರ ಬಗ್ಗೆ ಕಳೆದ ಅಧಿವೇಶನದಿಂದ ಈ ಅಧಿವೇಶನ ಸೇರುವ ಮಧ್ಯೆ 24 ಜನ ಈ ನಾಡಿನ ಗಣ್ಯರು ತೀರಿ ಹೋಗಿದ್ದಾರೆ, ನಿಜವಾಗಲು ಅವರ ಬಗ್ಗೆ ಈ ಸದನ ಒಂದು ದಿವಸ ಮಾತನಾಡಬೇಕಾಗಿತ್ತು, ಇಡೀ ಒಂದು ದಿವಸ ಮಾತನಾಡಿದರೂ ಸಾಲದು, ಅಂಥವರು ಇವತ್ತಿನ ಸಂತಾಪ ಸೂಚನೆಯ ಕೆಳಗಡೆ ಇದ್ದಾರೆ. ನೋವಿನ ಸಂಗತಿ ಏನೆಂದರೆ, ನಾವು ಕಾನೂನುಬದ್ಧವಾಗಿ ಮಧ್ಯೆ ಒಂದು ಸಲ ಅಧಿವೇಶನ ಸೇರಿದ್ದರೆ ಇದರಲ್ಲಿ ಕೆಲವರ ಬಗ್ಗೆ ಏನಾದರೂ ಒಂದೆರಡು ಹೆಚ್ಚಿನ ಮಾತುಗಳನ್ನು ಆಡಬಹುದಾಗಿತ್ತು. ತಾಂತ್ರಿಕವಾಗಿ ನಾವು ಇಲ್ಲಿ ಬರುವುದು, ನಾವು ಒಂದು ಅಬ್ಯುಚರಿ ಪಾಸ್ ಮಾಡಿದೆವು ಎನ್ನುವುದು, ಏನೋ ಆಡಬೇಕಲ್ಲ ಎಂದು ಆಡುವುದಲ್ಲ. ಇಷ್ಟು ಜನ ನಾಡಿಗೋಸ್ಕರ ತ್ಯಾಗ ಮಾಡಿದವರು ಇದ್ದಾರೆ, ಅನೇಕರ ಒಡನಾಟಗಳನ್ನು ನಾವು ಕೂಡ ಅನುಭವಿಸಿದ್ದೇವೆ. ನಮಗೆಲ್ಲ ನೋವು ಇರುವಂಥದ್ದು ಇದೆ. ಅದರಲ್ಲಿ ಬಹಳ ದೊಡ್ಡವರಾದ ನಾರಾಯಣ್‌ರಂಥವರು, ಅವರನ್ನು ಬಿಟ್ಟರೆ ಈ ರಾಜ್ಯಕ್ಕೆ, ನಂಜುಂಡಪ್ಪನವರು ಮಾಡಿದ ಸೇವೆಯನ್ನು ಮೋದಿಯವರು ಮಾಡಿದ ಸೇವೆಯನ್ನು, ನಾಗೇಗೌಡರವರು ಮಾಡಿದ ಸೇವೆಯನ್ನು, ನಾವು ಯಾವತ್ತಾದರೂ ಮರೆತರೆ ಬಹುಶಃ ನಾವು ಕರ್ನಾಟಕದ ಮನುಷ್ಯರು ಎಂದು ಹೇಳಿಕೊಳ್ಳುವುದಕ್ಕೆ ಲಾಯಕ್ ಆಗುವುದಿಲ್ಲ. ಅದರ ಜೊತೆ ರಾಜಾರಾಮ್‌ರವರು, ಇಲ್ಲಿ ಕುಳಿತುಕೊಂಡು ನಮ್ಮ ಜೊತೆ ಸಿಗರೇಟು ಸೇದಿಕೊಂಡು ಮಾತನಾಡುತ್ತಿದ್ದರೆ, ಇಡೀ ಪತ್ರಿಕಾರಂಗವೇ ನಮ್ಮ ಜೊತೆ ಇದೆ ಏನೋ ಎಂದು ನಮಗೆ ಅನ್ನಿಸುವುದು, ಅವರು ಸಿಟಿ ಕೇಬಲ್‌ಗೆ ಸೇರಿದ ಮೇಲೆ ಮಾಡಿದ ಕೆಲಸವೂ

ಕೂಡ ನಾವು ಎಲ್ಲಾ ಶ್ಲಾಘಿಸಲೇಬೇಕಾಗುತ್ತದೆ. ಹೀಗಿರುವಾಗ, ಸೈಯದ್‌ರವರು, ಮತ್ತೆ ನಮ್ಮ ವಾಟಾಳ್‌ರವರ ಸ್ನೇಹಿತರಾದ ಶ್ರೀ ನಾರಾಯಣ ಕುಮಾರ್‌ರವರು, ಅವರು ಇವರ ಜೊತೆಗೆ ಸೇರಿದ್ದು, ಆಮೇಲೆ ಇವರ ಕೈಯಲ್ಲಿ ಜಗಳ ಆಡಿಕೊಂಡು ಹೋಗಿದ್ದು ಇದೆಲ್ಲಾ ನಾವು ಇವತ್ತು ಆಡಬೇಕಾಗಿತ್ತು. ಹೀಗಿರುವಾಗ, ಧಿಡೀರ್ ಎಂದು ಇವತ್ತು ಒಂದೇ ಸಲ ಇಷ್ಟು ಜನರ ಬಗ್ಗೆ ಸಂತಾಪ ಸೂಚನೆ ತಂದು, ಅದು ಇಂಥ ಒಂದು ಕ್ಲಿಷ್ಟ ಸಮಯದಲ್ಲಿ ಬೇಗ ಮುಗಿದರೆ ಸಾಕು ಎನ್ನುವಂಥ ಭಾವನೆ ಇರುವಂಥ ಸಂದರ್ಭದಲ್ಲಿ ನಿಜವಾಗಲೂ ಇದಕ್ಕೆ ಕಾಲದ ಕೊರತೆ ಇದೆ ಎಂದು ಭಾವಿಸುತ್ತೇನೆ. ಮಾನ್ಯ ಚೆನ್ನಬಸವಯ್ಯನವರು ನಮ್ಮ ಜಿಲ್ಲೆಯವರು, ನಮ್ಮ ಜಿಲ್ಲೆಯಿಂದ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ತಿಗೆ ಆಯ್ಕೆಯಾಗಿದ್ದವರು. ನನಗೆ ಬಂಧು, ಅವರು ಕರ್ನಾಟಕದ ಶಿಕ್ಷಕರಿಗೆ ಹಾಗೂ ಕಾರ್ಮಿಕ ರಂಗದಲ್ಲಿ ಕೂಡ ಅವರು ಇದ್ದವರು, ಕೊಡಗಿನಿಂದ ಹಿಡಿದು ತುಮಕೂರು ವರೆಗೆ ಎಲ್ಲಾ ಜಿಲ್ಲೆಗಳಲ್ಲೂ ರಾಜಕಾರಣಿ ಮಾಡಿದಂಥ ಹಿರಿಮೆ ಅವರಿಗೆ ಇತ್ತು. ನಾಲ್ಕು ಅಥವಾ ಎಂಟು ಜಿಲ್ಲೆಗಳನ್ನು ಅವರು ಪ್ರತಿನಿಧಿಸಿದ್ದರು. ಮೊದಲ ಎರಡನೇ ಅವಧಿಯಲ್ಲಿ ಮಂಗಳೂರು ಕೊಡಗು–ಮೈಸೂರು ಭಾಗದಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದರು, ಆಮೇಲೆ ನಮ್ಮ ಕಡೆಗೆ ಬಂದರು, ಮಣ್ಣು ಮುಕ್ಕಿದರು, ಮತ್ತೊಂದು ಸಲ ಗೆದ್ದರು. ನಾನು ಅವರಿಗೆ ತಮಾಷೆ ಮಾಡುತ್ತಿದ್ದೆ, ಕರ್ನಾಟಕದಲ್ಲಿ ಎಲ್ಲಿ ಬೇಕಾದರೂ ನಿಲ್ಲಬಹುದು ಎಂದರೆ ಚೆನ್ನಬಸವಯ್ಯನವರಿಗೆ ಮಾತ್ರ ಸಾಧ್ಯ, ನಮ್ಮ ಕೈಯಲ್ಲಿ ಆಗಲ್ಲವೇನೊ ಎಂದು ತಮಾಷೆ ಮಾಡುತ್ತಿದ್ದೆ. ಮೈಸೂರನ್ನು ಪ್ರತಿನಿಧಿಸುತ್ತಿದ್ದಂಥವರು ಧಿಡೀರ್ ಎಂದು ಈ ಕಡೆ ಬಂದರು. ನಮಗೆ ಅಲ್ಲಿಯವರೆಗೆ ಅವರು ತುಮಕೂರು ಜಿಲ್ಲೆಯವರು ಎನ್ನುವ ಭಾವನೆ ಇರಲಿಲ್ಲ. ಆತ ಹೋರಾಟ ಮಾಡಿದ್ದು, ಶಿಕ್ಷಕರಿಗೆ ಹೈದರಾಬಾದ್ ಶ್ರೇಣಿಯಲ್ಲಿ ಸಂಬಳ ಕೊಡಿಸಬೇಕೆಂದು ಮಾಡಿದ್ದು, ಸನ್ಮಾನ್ಯ ದೇವರಾಜ್ ಅರಸುರವರ, ಕಾರಿನ ಮುಂದೆ ಮಲಗಿದ್ದು, ನಂತರ ನಿಂತುಕೊಂಡು ಮ್ಯಾನೇಜ್‌ಮೆಂಟ್‌ನವರು ಚೆಕ್ ಮೂಲಕವೇ ಅವರಿಗೆ ಸಂಬಳ ಕೊಡಬೇಕು, ಇಲ್ಲಾಂದ್ರೆ ಶೋಷಣೆ ಮಾಡುತ್ತಾರೆ ಎಂದು ಹೇಳಿ ಆ ಶೋಷಣೆಯನ್ನು ತಪ್ಪಿಸಿದ್ದು, ಇಂಥ ಹೋರಾಟವನ್ನು ಮಾಡಿದರು ಇವತ್ತು ನಮ್ಮಗಳ ಮಧ್ಯೆ ಇಲ್ಲ. ಇವತ್ತು ಅವರು ಮಾಡಿದಂಥ ಅನೇಕ ಹೋರಾಟದ ವಿಷಯಗಳಿವೆ. ಮಾನ್ಯ ಹೊರಟ್ಟಿಯವರು ಮಂತ್ರಿಗಳಾಗಿದ್ದಾರೆ, ಕುಳಿತುಕೊಂಡು ಮಾತುಕತೆ ಮಾಡಿ, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಏನೇನು ಕೆಲಸ ಆಗಬೇಕೆಂದು ಚೆನ್ನಬಸವಯ್ಯನವರು ನಾವು ಎಲ್ಲಾ ನಿಂತುಕೊಂಡು ಒಂದು ದಿವಸ ಹೋರಾಟ ಮಾಡಿದ್ದೆವು, ಅದನ್ನ ಕೂಡ ಈಡೇರಿಸಲಿಕ್ಕೆ ಈ ಸರ್ಕಾರಕ್ಕೆ ಆಗಿಲ್ಲ. ಚೆನ್ನಬಸವಯ್ಯನವರನ್ನು ನಾವು ಇವತ್ತು ಸ್ಮರಿಸುತ್ತಿದ್ದೇವೆ, ಎಲ್ಲಾದರೂ ಒಂದು ಕಡೆ ಇಂಥವರು ನಮ್ಮ ಮಧ್ಯೆ ಬರುತ್ತಾರಾ ಎಂದರೆ, ಮುಂಬರುವ ದಿನಗಳಲ್ಲಿ ಇಂಥವರು ಬರುತ್ತಾರಾ ಎಂದರೆ ಅದು ಯಾವುದೂ ಕಾಣುತ್ತಿಲ್ಲ. ಇನ್ನು ಡಾ: ತಂಗಾರವರು, ಅವರು ಹಾಗೂ ನಾವು ಜೊತೆಯಲ್ಲಿ ವಿದ್ಯುಚ್ಛಕ್ತಿ ಸಮಿತಿಯಲ್ಲಿ ಕೆಲಸ ಮಾಡುತ್ತಿರುವಾಗ ಅವರು ಎಷ್ಟು ನಿಷ್ಠೂರವಾಗಿ ವರ್ತಿಸುವವರು ಎಂದು ನಾವು ಎಲ್ಲಾ ನೋಡಿದವರು. ನಾನು ಅವರಿಗೆ ಬಹಳ ರೇಗಿಸುತ್ತಿದ್ದೆ, ಏನ್ರೀ ಇಲ್ಲೊ ಡಾಕ್ಟರ್, ಪ್ರೊಫೆಸರ್ ಆಡಿದಂಗೆ ಆಡುತ್ತೀರಿ ಎಂದು ರೇಗಿಸುತ್ತಿದ್ದೆ. ಡಾ: ನಾಗೇಗೌಡರು, ಮಂಡ್ಯ, ತುಮಕೂರು ಜಿಲ್ಲೆ ಅಲ್ಲಿ ಬೆಳೆದಂಥ ಜಾನಪದ ಕ್ಷೇತ್ರ, ಬಹುಶಃ ತಿನಂಶ್ರೀಕಂಠಯ್ಯನವರಿಂದ ಆರಂಭವಾದ ಜಾನಪದ ಕ್ಷೇತ್ರ ಶಂಕರನಾರಾಯಣ್‌ರವರಿಗೆ ಬಂದಿದ್ದರೆ ಆ ಮಧ್ಯೆ ನಾಗೇಗೌಡರವರು ಇದ್ದು ಹೋದರು ಎನ್ನುವುದು ಬಹಳ ಮಹತ್ವವಾದುದು.

ಜಾನಪದಕ್ಕೆ ಇನ್ನೊಂದು ಹೆಸರಾದರು. ನಮ್ಮ ಜಿಲ್ಲೆಯಲ್ಲಿ ಇವತ್ತು ಬಯಲುರಂಗಮಂದಿರಗಳನ್ನು ಕಟ್ಟಿ ನಾಗೇಗೌಡರವರು ಜಾನಪದ ಮೇಳ ಮಾಡಿಸಿದರು, ದಕ್ಷಿಣ ಈ ಭಾಗದ ಬಯಲುನಾಟಕಗಳನ್ನು ಕರಾವಳಿಯ ಯಕ್ಷಗಾನಗಳಿಗೆ ಸರಿಸಮಾನವಾಗಿ ಬೆಳೆಸಿದಂಥವರು. ನಾವೆಲ್ಲ ನೋಡುತ್ತಿದ್ದೆವು. ನಾನು ಓದುವುದಕ್ಕೆ ಶುರು ಮಾಡಿದಾಗ ಅವರ "ಪ್ರವಾಸಿ ಕಂಡ ಇಂಡಿಯಾ" ಎನ್ನುವ ಪುಸ್ತಕವು ಸೇರಿದಂತೆ ಒಟ್ಟಿಗೆ 5 ಪುಸ್ತಕಗಳನ್ನು ಓದಿದೆ. ಡಾ: ನಾಗೇಗೌಡರವರು ಎಲ್ಲೆಲ್ಲಿಂದ ಈ ದೇಶಕ್ಕೆ ಬಂದಂಥ ಪ್ರವಾಸಿಗರು ಇಂಡಿಯಾ ದೇಶದ ಬಗ್ಗೆ ಏನೇನು ಮಾಡಿ ಹೋಗಿದ್ದಾರೆ ಎಂದು ಒಬ್ಬ ಐಎಎಸ್ ಅಧಿಕಾರಿಯಾಗಿ ಬರೆದಂತಹ ಪುಸ್ತಕಗಳನ್ನು ಓದಿ ನಾನು ಅವರು ಇಷ್ಟು ಮಾಡಲಿಕ್ಕೆ ಸಾಧ್ಯವೆ ಎಂದು ದಂಗುಬಡಿದು ಹೋಗಿದ್ದೆ. ಇಷ್ಟು ಹೊತ್ತಿಗೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದವರು ಪಬ್ಲಿಷ್ ಮಾಡಿದಾಗ ನಾನು ಅವರಿಗೆ ಕಾಗದ ಬರೆದೆ, ನೀವು ಏನಾದರೂ ಬಾರಿ ಒಳ್ಳೆಯ ಕೆಲಸ ಮಾಡಿದ್ದರೆ ನಾಗೇಗೌಡರವರು ಬರೆದಂತ ಕೃತಿಗಳನ್ನು ಇವತ್ತು ಕನ್ನಡಕ್ಕಡ ತಂದು ನಮಗೆಲ್ಲ ಈ ದೇಶಕ್ಕೆ ಬಂದ ಪ್ರವಾಸಿಗರು ಏನು ಮಾತನಾಡಿದ್ದಾರೆಂದು ಅರ್ಥ ಮಾಡಿಕೊಳ್ಳುವ ಸ್ಥಿತಿ ನಿರ್ಮಾಣ ಮಾಡಿದಿರಿ ಎಂದು ಪತ್ರ ಬರೆದೆ. ಅವರು ಎಲ್ಲಾ ಕ್ಷೇತ್ರದಲ್ಲಿ ಪರಿಚಯ ಇದ್ದಂಥವರು, ಕಲೆಯಲ್ಲಿ, ಆಡಳಿತದಲ್ಲಿ, ಸಾಹಿತ್ಯದಲ್ಲಿ, ಹೀಗೆ ಎಲ್ಲಾ ಕ್ಷೇತ್ರದಲ್ಲಿ ಪರಿಚಯ ಇದ್ದಂಥವರು, ಇಂಥವರು ಇವತ್ತು ನಮ್ಮನ್ನು ಅಗಲಿದ್ದಾರೆ. ಇನ್ನು ಡಾ: ಮೋದಿಯವರನ್ನು 'ನಡೆದಾಡುತ್ತಿರುವ ಕಣ್ಣಿನ ಆಸ್ಪತ್ರೆ' ಎಂದು ನಾವು ಅವರನ್ನು ಕಾಣುತ್ತಿದ್ದೆವು. ಕಣ್ಣಿನ ಆಸ್ಪತ್ರೆ ಕ್ಯಾಟರ್ಯಾಕ್ಟ್ ಎಂದರೆ ಮೋದಿ ಒಬ್ಬರೇ ಮಾಡುತ್ತಾರೆ ಎನ್ನುವ ಭಾವನೆ ಇದ್ದವರು ನಾವು. ಆನಂತರ, ನಮ್ಮ ರಾಜ್ಯಕ್ಕೆ ಡ್ಯಾನಿಡಾ ಮತ್ತು ಬೇರೆ ಬೇರೆ ಸ್ಕೀಂಗಳು ಬಂದವು. ಈ ಸಂದರ್ಭದಲ್ಲಿ ತುಮಕೂರು ಮತ್ತು ಇನ್ನು ಎರಡು-ಮೂರು ಜಿಲ್ಲೆಗಳನ್ನು ಪೈಲೆಟ್ ಜಿಲ್ಲೆಗಳೆಂದು ಮಾಡಿಕೊಂಡು ಈ ಪ್ರಾಜೆಕ್ಟ್‌ಗಳನ್ನು ಆರಂಭ ಮಾಡಿದ್ದರು. ಮತ್ತೆ ಒಂದು ದಿವಸದಲ್ಲಿ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಸುಮಾರು 200 ರಿಂದ 600 ಆಪರೇಷನ್‌ಗಳನ್ನು ಡಾ: ಮೋದಿರವರು ಮಾಡುತ್ತಿದ್ದರು. ಮತ್ತೆ ಇದಕ್ಕೆ ಅವರು ಏನನ್ನು ಸಹ ನಿರೀಕ್ಷೆ ಮಾಡುತ್ತಿರಲಿಲ್ಲ. ಈ ಸದನಕ್ಕೆ, ಶಾಸಕಾಂಗಕ್ಕೆ ಶ್ರೇಯಸ್ಸು ಏನೆಂದರೆ, ಅಂಥವರನ್ನು ತೆಗೆದುಕೊಂಡು ಹೋಗಿ ವಿಧಾನಪರಿಷತ್‌ಗೆ ನಾಮಕರಣ ಮಾಡಿದಂಥ ಹಿರಿಮೆ ನಮಗೆ ಇದೆ. ಆದ್ದರಿಂದ, ಇಂಥವರನ್ನು ನಾವು ಸ್ಮರಿಸಬೇಕು. ಮತ್ತೆ ಡಾ: ಡಿ.ಎಂ. ನಂಜುಂಡಪ್ಪನವರ ಬಗ್ಗೆ ಈಗಾಗಲೇ ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದ್ದಾರೆ. ಶ್ರೀಯುತರು ಈ ನಾಡಿಗೆ ಸಗಣಿ ಮತ್ತು ಗಂಜಲದ ಮತಹಪ್ಪ ಏನೆಂಬುದನ್ನು ಹೇಳಿದ್ದಾರೆ. ಸಗಣಿ ಮನೆಯಲ್ಲಿದ್ದರೆ ಕ್ಯಾನ್ಸರ್ ಬರುವುದಿಲ್ಲವೆಂದು ಡಾ: ನಂಜುಂಡಪ್ಪನವರು ಬೋಧನೆ ಮಾಡಿದಂಥವರು. ರೂರಲ್ ಎಕಾನಮಿ ಬಗ್ಗೆ ಇವರು ಹೈದರಾಬಾದ್‌ನಲ್ಲಿ ಮಾಡಿದಂಥ ಭಾಷಣವನ್ನು ಕೇಳಿದ ಮೇಲೆ ಬಹುಶಃ ಇಂಥ ಎಕಾನಮಿಸ್ಟ್‌ಗಳು ಇವರ ಮುಂದೆ ಹುಟ್ಟುವುದಿಲ್ಲವೆಂದು ನಾವು ತಿಳಿದುಕೊಂಡೆವು. ಇಂಥ ಒಬ್ಬ ಅರ್ಥಶಾಸ್ತ್ರಜ್ಞ ಕೊನೆಗಳಿಗೆಯವರಿಗೂ ಎಲ್ಲಾ ಕ್ಷೇತ್ರಗಳಲ್ಲಿ ಮತ್ತು ನಮ್ಮ ರಾಜ್ಯದ ಆಡಳಿತದಲ್ಲಿದ್ದರು. ಸನ್ಮಾನ್ಯ ಸುತ್ತೂರು ಸ್ವಾಮಿರವರು ನಡೆಸತಕ್ಕಂಥ ಆಡಳಿತ ತರಬೇತಿ ಸಂಸ್ಥೆಯನ್ನು ನನ್ನದು ಎಂದು ತಿಳಿದುಕೊಂಡು, ಕರ್ನಾಟಕ ರಾಜ್ಯದ ಮಕ್ಕಳಿಗೆ ಐ.ಎ.ಎಸ್. ಪರೀಕ್ಷೆಯ ತರಬೇತಿಯನ್ನು ಉಚಿತವಾಗಿ ಬೋಧನೆ ಮಾಡುತ್ತಿದ್ದರು. ಅದೊಂದು ಅಕಾಡೆಮಿಯನ್ನು ಸ್ವಂತದ್ದೆಂದು ಬೆಂಗಳೂರಿನಲ್ಲಿ ಬೆಳೆಸಿದರು. ನಾವು ಅವರ ಹತ್ತಿರ ಹೋಗಿ ಇಲ್ಲಿಗೆ ಹುಡುಗರನ್ನು ಕಳುಹಿಸಿ ಕೊಡುತ್ತೇವೆ, ತಾವು ಅವರಿಗೆ

ತರಬೇತಿ ನೀಡಿ ಏನಾದರೂ ಮಾಡಿ ಐ.ಎ.ಎಸ್. ಅಧಿಕಾರಿಗಳನ್ನಾಗಿ ಕೊಡಿ ಎಂದು ಹೇಳಿದ್ದಕ್ಕೆ ಅವರು ಈ ಮಾತನ್ನು ಕೇಳಿ ನಗುತ್ತಿದ್ದರು. ನನ್ನ ಜೊತೆ ಅವರು ಯಾವುದೋ ಮಾತನ್ನು ಹೇಳುವಂಥ ಸಂದರ್ಭದಲ್ಲಿ ಅವರು ಹೇಳಿದಂಥ ಒಂದು ಮಾತು ಇವತ್ತೂ ಕೂಡ ನನ್ನ ಸ್ಮೃತಿಯಲ್ಲಿದೆ. ಅದೇನೆಂದರೆ, ರಾಷ್ಟ್ರದಲ್ಲಿ ಬ್ಯಾಂಕ್‌ಗಳಲ್ಲಿ ಬಹುಶಃ ಮಧ್ಯಮ ವರ್ಗದವರು ಮತ್ತು ಬಡವರು ಮಾತ್ರ ಹಣ ಇಟ್ಟಿರುತ್ತಾರೆ. ಆದರೆ, ಈ ಹಣವನ್ನು ಇಡೀ ಶ್ರೀಮಂತರು ಮತ್ತು ಕೈಗಾರಿಕೋದ್ಯಮಿಗಳು ತಿಂದು ಚೆನ್ನಾಗಿ ಆಗುತ್ತಿದ್ದಾರೆ. ಆದ್ದರಿಂದ ನಾವೇ ಈ ರಾಷ್ಟ್ರವನ್ನು ಕಟ್ಟಿರುವುದು ಎಂದು ಅವರು ಮೊದಲಸಾರಿ ಹೇಳಿದಾಗ ನನಗೆ ನಿಜವಾಗಿಯೂ ಕೂಡ ಜಾಗೃತಿ ಆಯಿತು. ಇದು ನಿಜವಾಗಿಯೂ ಕೂಡ ಸತ್ಯ. ಇವತ್ತಿನದಿವಸ ಡಿಪಾಜಿಟ್‌ಗಳನ್ನು ಇಟ್ಟಿರತಕ್ಕಂಥವರು ಯಾರ್‍ಯಾರು ಎಂದರೆ, ಗ್ರಾಮೀಣ ಪ್ರದೇಶದ ಜನರು ಮತ್ತು ಪೆನ್‌ಷನರ್ಸ್ ಹಾಗೂ ಬಡವರು. ಈ ಸತ್ಯವನ್ನು ಮನವರಿಕೆ ಮಾಡಿಕೊಡುವುದಕ್ಕೆ ಆವತ್ತಿನದಿವಸ ನಮಗೆ ಡಾ: ನಂಜುಂಡಪ್ಪನವರು ಬೇಕಾಗಿತ್ತು, ಇವತ್ತಿನದಿವಸ ಉಳ್ಳವರು ಯಾರು ಕೂಡ ಬ್ಯಾಂಕ್‌ನಲ್ಲಿ ದುಡ್ಡು ಇಟ್ಟಿಲ್ಲ. ನಮ್ಮ ದುಡ್ಡನ್ನು ಅವರು ತೆಗೆದುಕೊಂಡು ಬೆಳೆದುಕೊಂಡಿದ್ದಾರೆ. ಹಳ್ಳಿ ಜನ ಬ್ಯಾಂಕ್‌ನಲ್ಲಿ 3.5, 5:00 ಪರ್ಸೆಂಟ್ ಬಡ್ಡಿಗೆ ಹಣ ಇಟ್ಟುಕೊಂಡು ಸಾಯುತ್ತಿದ್ದೇವೆ. ನಾವೇ ಕೊಟ್ಟಂಥ ಹಣದಿಂದ ಮತ್ತೆ ನಾವೇ ಸಾಲ ತೆಗೆದುಕೊಂಡು ಅದಕ್ಕೆ 14 ಪರ್ಸೆಂಟ್ ಬಡ್ಡಿಯನ್ನು ಕೊಡುತ್ತಿದ್ದೇವೆಂದು ಈ ಅರ್ಥಶಾಸ್ತ್ರಜ್ಞವನ್ನು ಬಿಡಿಸಿ ಹೇಳಿದಂಥ ಡಾ. ನಂಜುಂಡಪ್ಪನವರು ನಮ್ಮನ್ನೆಲ್ಲಾ ಬಿಟ್ಟು ಅಗಲಿ ಹೋಗಿದ್ದಾರೆ. ಇವತ್ತಿನದಿವಸ ಬಹುಶಃ ಕರ್ನಾಟಕ ರಾಜ್ಯ ಬರಿದಾಗಿದೆ. ಇದರಲ್ಲಿ ಎರಡು ಮಾತಿಲ್ಲ. ಇನ್ನೊಬ್ಬ ನಂಜುಂಡಪ್ಪ, ಇನ್ನೊಬ್ಬ ಡಾ: ಮೋದಿ, ಇನ್ನೊಬ್ಬ ಡಾ: ನಾಗೇಗೌಡರು ಹುಟ್ಟುತ್ತಾರೆಯೇ ಎನ್ನತಕ್ಕಂಥದರ ಬಗ್ಗೆ ಪರೀಕ್ಷೆ ಅಥವಾ ಯೋಚನೆ ಮಾಡತಕ್ಕಂಥ ಕಾಲಕ್ಕೆ ನಾವು ಬಂದಿದ್ದೇವೆ. ಇವತ್ತಿನದಿವಸ ರಾಜಕಾರಣ ಮಾಡತಕ್ಕಂಥವರು ಹುಟ್ಟುತ್ತಾರೆ. ಇಲ್ಲಿಂದ ಮುಂದಕ್ಕೆ ಬಹಳ ಸ್ಪೀಡ್ ಆಗಿ ರಾಜಕಾರಣ ಮಾಡುವವರು ಹುಟ್ಟುತ್ತಾರೆ. ಆದರೆ, ಕಲೆಗೋಸ್ಕರ ಅಥವಾ ರಾಜ್ಯಕ್ಕೋಸ್ಕರ ಸಾಧನೆ ಮಾಡುವವರು ಹುಟ್ಟಬೇಕಾಗುತ್ತದೆ. ಡಾ: ನಂಜುಂಡಪ್ಪನವರ ವರದಿಯನ್ನು ಇವತ್ತು ಕುಳಿತುಕೊಂಡು ಏನಾದರು ಓದಿದರೆ ಅದರಲ್ಲಿ ಅವರು ಹಿಂದುಳಿದ ವರ್ಗಗಳ ಬಗ್ಗೆ ಏನು ವ್ಯಾಖ್ಯಾನ ಕೊಟ್ಟಿದ್ದಾರೆಂಬುದು ಮತ್ತು ಹಿಂದುಳಿದ ಪ್ರದೇಶಗಳೆಂದು ಏನು ಗುರುತಿಸಿದ್ದಾರೆಯೋ ಇಂಥ ಒಂದು ಕೆಲಸವನ್ನು ಬಹುಶಃ ಈ ರಾಜ್ಯದಲ್ಲಿ ಯಾರು ಮಾಡಿಲ್ಲ. ಡಾ: ನಂಜುಂಡಪ್ಪನವರು ತಮ್ಮ ವರದಿಯಲ್ಲಿ ಚಿಕ್ಕನಾಯಕನಹಳ್ಳಿಯನ್ನು ಸೇರಿಸುತ್ತಾರೆ ಎನ್ನತಕ್ಕಂಥ ಕಲ್ಪನೆ ಕೂಡ ನಮಗೆ ಇರಲಿಲ್ಲ. ಡಾ: ನಂಜುಂಡಪ್ಪನವರ ವರದಿಯಲ್ಲಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕು, ಪಾವಗಡ ತಾಲ್ಲೂಕು ಮತ್ತು ಚಿಕ್ಕನಾಯಕನ ಹಳ್ಳಿ ಮಧುಗಿರಿ ಸೇರಿದೆ ಎಂದು ಕೇಳಿದಾಗ ಇದರ ಬಗ್ಗೆ ಎಷ್ಟು ಆಳವಾಗಿ ಅಧ್ಯಯನವನ್ನು ಈ ಮನುಷ್ಯ ಮಾಡಿದ್ದರು ಎಂಬುದು ತಿಳಿಯುತ್ತದೆ. ಅಂದರೆ, ಇಲ್ಲಿ ಕೈಗಾರಿಕೆ ಇದೆಯೋ ಅಥವಾ ಇಲ್ಲವೋ ಎಂಬುವುದರಿಂದ ಹಿಡಿದು ಬೇಸಾಯದವರೆಗೆ ಅಧ್ಯಯನ ಮಾಡಿದ್ದಾರೆ. ನನಗೆ ಇರತಕ್ಕಂಥ ನೋವು ಏನೆಂದರೆ, ಡಾ: ನರಸಿಂಹಯ್ಯನವರು ತೀರಿ ಹೋಗಿದ್ದ ದಿವಸ ಒಂದು ಮಾತನ್ನು ನಾನು ಇಲ್ಲಿ ಹೇಳಿದ್ದೆ. ಅದೇನೆಂದರೆ, ಆ ದಿವಸ ರಜಾ ಕೊಡಬೇಡಿ. ರಜಾ ಕೊಟ್ಟರೆ ಮುಂದೆ ಒಂದು ಸಂಪ್ರದಾಯವನ್ನು ಸೃಷ್ಟಿಮಾಡಿದಂತೆ ಆಗುತ್ತದೆ. ಹಾಗೂ ಮತ್ತೆ ಈ ರೀತಿಯಾದ ಕಾಲ ಬರುತ್ತದೆ ಎಂದು ಹೇಳಿದ್ದೆ. ಕರ್ನಾಟಕ ಶಾಸನ ಸಭೆಗೆ ಅವತ್ತಿನದಿವಸ ರಜಾ ಕೊಟ್ಟು ಏನು ಗೌರವವನ್ನು ಅರ್ಪಿಸಿದೆವು ಅದೇ ರೀತಿಯಾಗಿ ಶಾಸನ

ಸಭೆಗೆ ಒಂದು ವಾರದವರೆಗೆ ರಜಾ ಕೊಡಬಹುದಾದಂಥವರು ಇತ್ತೀಚಿನ ದಿನಗಳಲ್ಲಿ ತೀರಿಕೊಂಡಿದ್ದಾರೆ. ಡಾ: ನಂಜುಂಡಪ್ಪನವರ ಹೆಸರಿನಲ್ಲಿ, ಡಾ: ಮೋದಿರವರ ಹೆಸರಿನಲ್ಲಿ, ಡಾ: ನಾಗೇಗೌಡರವರ ಹೆಸರಿನಲ್ಲಿ ನಾವೇನಾದರು ಮಾಡಲೇಬೇಕಾಗಿದೆ. ಆಗಮಾತ್ರ ನಿಜವಾದ ಸಂತಾಪ ಸೂಚನೆ ಈ ಸದನದಲ್ಲಿ ಆದಂತಾಗುತ್ತದೆ. ಡಾ: ನಂಜುಂಡಪ್ಪನವರ ಹೆಸರಿನಲ್ಲಿ ಒಂದು ಅಕಾಡೆಮಿ ಅಥವಾ ಒಂದು ಸಂಸ್ಥೆ ಆರಂಬವಾಗಬೇಕಾಗಿತ್ತು. ಹಾಗೆಯೇ ಇಷ್ಟು ಹೊತ್ತಿಗೆ ಡಾ: ನಾಗೇಗೌಡರ ಹೆಸರಿನಲ್ಲಿ ಅವಾರ್ಡ್ ಅನೌನ್ಸ್ ಮಾಡಿರಬೇಕಾಗಿತ್ತು. ಆದರೆ, ನಾವು ಏನು ಮಾಡಲಿಲ್ಲ. ಮತ್ತೆ ಇವೆಲ್ಲವನ್ನು ನಾವು ಬಹಳ ಮೆಕ್ಯಾನಿಕಲ್ ಆಗಿ ತೆಗೆದುಕೊಳ್ಳುತ್ತಿದ್ದೇವೆ; ಮತ್ತೆ ಭಾವನೆಗಳನ್ನು ವ್ಯವಹಾರಿಕವಾಗಿ ಮಾಡಿಕೊಂಡುಬಿಟ್ಟಿದ್ದೇವೆ. ಅದೇನೆಂದರೆ, ಇಲ್ಲೊಂದು ಸಂತಾಪ ಸೂಚನೆ ತರಬೇಕು, ಇದರ ಬಗ್ಗೆ ನಾಲ್ಕು ಪಕ್ಷದವರು ನಿಂತುಕೊಂಡು ಮಾತನಾಡಿದರೆ ನಮ್ಮ ಜವಾಬ್ದಾರಿ ಮುಗಿದು ಹೋಯಿತೆಂದು ತಿಳಿದುಕೊಂಡಿರಬೇಕು. ನಾಳೆದಿವಸ ಬರತಕ್ಕಂಥ ಮಕ್ಕಳಿಗೆ ಇವರು ಯಾರು ಎಂಬುದು ಗೊತ್ತಾಗುವುದಿಲ್ಲ. ಇವತ್ತಿನದಿವಸ ಅಶೋಕ ಚಕ್ರವರ್ತಿ ಯಾರೆಂಬುದನ್ನು ನಾವು ಅರ್ಧ ಗಂಟೆ ಕುಳಿತು ಮಕ್ಕಳಿಗೆ ಹೇಳತಕ್ಕಂಥ ಪರಿಸ್ಥಿತಿ ಬಂದಿದೆ. ಅಂದರೆ, ಅಶೋಕ ಚಕ್ರವರ್ತಿ ಎಂಬುವವನು ಈ ರೀತಿಯಾಗಿದ್ದ ಎಂದು ಹೇಳಬೇಕಾಗುತ್ತದೆ. ಇನ್ನು ಸ್ವಲ್ಪದಿವಸ ಹೋದರೆ ಗಾಂಧೀಜಿ ಯಾರೆಂಬುದನ್ನು ಮರೆತು ಹೋಗುತ್ತಾರೆ. ಇಂಥದ್ದರಲ್ಲಿ ಇವರನ್ನು ಯಾರು ಸ್ಮರಿಸುತ್ತಾರೆ? ಇವರುಗಳು ಕರ್ನಾಟಕ ರಾಜ್ಯಕ್ಕೆ ಮಾಡಿರತಕ್ಕಂಥ ಸೇವೆಯನ್ನು ನಾವು ನಿಜವಾಗಿಯು ಸ್ಮರಿಸಲೇಬೇಕು. ಆದರೆ, ದುರಂತವೆಂದರೆ, ಇವತ್ತು ಈ ಸಂತಾಸ ಸೂಚನೆಗಳು ಬಂದು ನಮ್ಮೆಲ್ಲರ ಬಾಯಿ ಕಟ್ಟಿ ಹಾಕುತ್ತಿವೆ. ಬಹಳ ಮಾತನಾಡಬೇಕೆಂದು ಇದ್ದರೂ ಕೂಡ ಇವತ್ತಿನ ಸ್ಥಿತಿಯಲ್ಲಿ ಇದರ ಬಗ್ಗೆಯೇ ಕಾಲ ಕಳೆಯುತ್ತಿದ್ದಾರೆ ಎಂಬುದಾದರೆ ಈಗಾಗಲೇ ಇದರ ಬಗ್ಗೆ ಸನ್ಮಾನ್ಯ ಪ್ರಕಾಶ್‌ರವರು ಹೇಳಿದಂಥ ಮಾತನ್ನು ನಾನೂ ಸಹ ಈ ಸಂದರ್ಭದಲ್ಲಿ ಅನುಮೋದಿಸುತ್ತೇನೆ. ನಾವು ಇಲ್ಲಿ ಹೆಚ್ಚು ಮಾತನಾಡುವುದಕ್ಕೆ ಹೋದರೆ ಅದಕ್ಕೆ ಇನ್ನೊಂದು ಅರ್ಥ ಬರುವ ರೀತಿಯಲ್ಲಿ ನಾವು ನಿಂತುಕೊಂಡಿದ್ದೇವೆ. ಆದರೂ ಕೂಡ ನಾನು ಕೇಳುವುದೇನೆಂದರೆ, ಮೃತರ ಗೌರವಾರ್ಥ, ಈ ಶಾಸನಸಭೆಯನ್ನು ಮುಂದಕ್ಕೆ ಹಾಕಬೇಕಾಗಿತ್ತು. ಈಗಾಗಲೇ ಡಾ: ನರಸಿಂಹಯ್ಯನವರಿಗೆ ತಾವು ಏನು ಗೌರವವನ್ನು ತೋರಿಸಿದ್ದೀರಿ ಕನಿಷ್ಟಪಕ್ಷ ಆ ಗೌರವವನ್ನು ಡಾ: ನಂಜುಂಡಪ್ಪನವರಿಗೆ ಮತ್ತು ಡಾ: ಮೋದಿಯವರಿಗೆ ನಾವು ತೋರಿಸಬೇಕಾಗಿತ್ತೆಂದು ಸನ್ಮಾನ್ಯ ಪ್ರಕಾಶ್‌ರವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಇವತ್ತು ಮಾಡದೆ, ಮೊದಲೇ ಇದಕ್ಕೆಂದು ಒಂದು ದಿವಸ ಆಯ್ಕೆ ಮಾಡಿಕೊಂಡು ಈ ಕೆಲಸವನ್ನು ನಾವು ಮಾಡಬೇಕಾಗಿತ್ತು, ಯಾವುದೇ ಒಂದು ತಾಂತ್ರಿಕ ಕಾರಣದಿಂದ ಅಸೆಂಬ್ಲಿಯನ್ನು ಮುಂದಕ್ಕೆ ಹಾಕಿ ಎಂದು ಮಾತನಾಡುವುದಕ್ಕೆ ನಾನು ಎದ್ದುನಿಂತುಕೊಂಡಿಲ್ಲ. ಆದರೆ, ಇದು ನಮಗೆಲ್ಲಾ ಗೊತ್ತಿತ್ತು. ಒಂದು ದಿವಸ ಶಾಸನ ಸಭೆಯನ್ನು ಕರೆದು ಮೃತರ ಸ್ಮರಣೆಗೋಸ್ಕರ ಮಾತನಾಡಿ ಇವರಿಗೆ ಗೌರವ ನೀಡುವುದಕ್ಕೋಸ್ಕರ ಶಾಸನ ಸಭೆಯ ಅಧಿವೇಶನವನ್ನು ಒಂದು ದಿವಸ ಮುಂದಕ್ಕೆ ಹಾಕಿದ್ದೇವೆ ಎಂದಿದ್ದರೆ ತಾರತಮ್ಯ ಆಗುತ್ತಿರಲಿಲ್ಲವೆಂದು ನಾನು ಭಾವಿಸುತ್ತೇನೆ. ಒಂದು ಕಡೆ ನಾವ್ಯಾರು ನರಸಿಂಹಯ್ಯನವರ ವಿರೋಧಿಗಳಲ್ಲ. ಆದರೆ, ಇಡೀ ಗ್ರಾಮೀಣ ಬದುಕು ನನ್ನದೆಂದು ಜೀವನ ಪರ್ಯಂತ ಗ್ರಾಮೀಣದ ಬದುಕಿನ ಸೊಗಡಿಗಾಗಿ ಸೇವೆ ಸಲ್ಲಿಸಿದವರನ್ನು ನಾವು ಬಹಳ ತಾಂತ್ರಿಕವಾಗಿ ನೆನೆಯುತ್ತಿದ್ದೇವೆಂದು ನೊಂದು ಈ ಮಾತನ್ನು ಹೇಳುತ್ತಿದ್ದೇನೆ.ಆದ್ದರಿಂದ, ಡಾ: ಸಂಜುಂಡಪ್ಪನವರ ಹೆಸರಿನಲ್ಲಿ ಮತ್ತು ಡಾ: ಮೋದಿಯವರ ಹೆಸರಿನಲ್ಲಿ ಹಾಗೂ ಡಾ: ನಾಗೇಗೌಡರ ಹೆಸರಿನಲ್ಲಿ ರಾಜ್ಯ ಸರ್ಕಾರ ಏನಾದರು ಮಾಡಬೇಕು. ಮತ್ತೆ ಹೋರಾಟ

ಮಾಡಿರತಕ್ಕಂಥವರ ಹೆಸರಿನಲ್ಲಿ ಕೂಡ ಮಾಡಬೇಕಾಗುತ್ತದೆ. ಮಾನ್ಯ ಚೆನ್ನಬಸವಯ್ಯನವರು ಕೂಡ ಕಡಿಮೆ ಹೋರಾಟ ಏನು ಮಾಡಿಲ್ಲ. ಇವತ್ತಿನದಿವಸ ಶಿಕ್ಷಕರಿಗೆ ಮ್ಯಾನೇಜ್‌ಮೆಂಟ್‌ನಲ್ಲಿ ಶೋಷಣೆ ಆಗುತ್ತಿದ್ದುದನ್ನು ಮಾನ್ಯ ಎಸ್.ಚನ್ನಬಸವಯ್ಯನವರೇ ಅದನ್ನು ತಪ್ಪಿಸಿದವರು. ಇದರಲ್ಲಿ ನಾವ್ಯಾರು ಸ್ವಲ್ಪವೂ ಕೂಡ ಪಾಲುದಾರರು ಅಲ್ಲ. ಸರ್ಕಾರ ನೀಡಿದಂಥ ಚೆಕ್‌ಅನ್ನು ಅಕೌಂಟ್‌ಗೆ ಹಾಕಿ ಕೊನೆಗೆ ಶಿಕ್ಷಕರಿಗೆ ಕೊಡಬೇಕಾಗಿರತಕ್ಕಂಥ ಹಣದಲ್ಲಿ 10 ರಿಂದ 30 ಪರ್ಸೆಂಟ್‌ನಷ್ಟು ಹಿಡಿದುಕೊಂಡು ಕೊಡತಕ್ಕಂಥ ಒಂದು ಶೋಷಣೆ ಏನು ಇತ್ತು ಇದರ ಬಗ್ಗೆ ಎಸ್. ಚೆನ್ನಬಸವಯ್ಯನವರು ಹೋರಾಟ ಮಾಡದಿದ್ದರೆ ಈ ರೀತಿಯಾದ ಶೋಷಣೆ ರಾಜ್ಯದಲ್ಲಿ ತಪ್ಪುತ್ತಿರಲಿಲ್ಲ. ಆದ್ದರಿಂದ, ಅಂಥವರನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕಾದದ್ದು ಉತ್ತಮವೆಂದು ಹೇಳುತ್ತಾ, ತಾವೇನು ನನಗೆ ಮಾತನಾಡಲು ಕರೆದಿದ್ದೀರಿ, ಅದಕ್ಕೋಸ್ಕರ ತಮಗೆ ವಂದಿಸಿ ನನ್ನ ಹಾಗೂ ನನ್ನ ಪಕ್ಷದ ವತಿಯಿಂದ ಎಲ್ಲರಿಗೂ ಸಂತಾಪವನ್ನು ಸೂಚಿಸಿ ಅವರ ಕುಟುಂಬ ವರ್ಗದವರಿಗೆ ಮತ್ತು ಅವರ ಅನುಯಾಯಿಗಳಿಗೆ ಇದನ್ನು ರೂಢಿಸಿಕೊಂಡು ಮತ್ತು ಬೆಳೆ ಬೆಳಸಿಕೊಂಡು ಹೋಗುವಂಥ ಶಕ್ತಿಯನ್ನು ರಾಜ್ಯ ಹಾಗೂ ಭಗವಂತ ಕೊಡಲೆಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಾರಿಗೆ ಮತ್ತು ಜಲಸಂಪನ್ಮೂಲ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಮಂಡಿಸಿದಂಥ ಈ ಸಂತಾಪ ಸೂಚನೆಗೆ ನಾನೂ ಕೂಡ ಬೆಂಬಲಿಸುತ್ತಾ, ಇವತ್ತಿನ ದಿವಸ ಅನೇಕ ಗಣ್ಯ ವ್ಯಕ್ತಿಗಳನ್ನು ನಮ್ಮಿಂದ ಅಗಲಿ ಹೋಗಿದ್ದಾರೆ. ಬಹುಶಃ ನಮ್ಮ ಸದನದ ಇತ್ತೀಚಿನ ಅಬ್ಯುಚರಿ ರೆಫರೆನ್ಸ್‌ನಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಗಣ್ಯ ವ್ಯಕ್ತಿಗಳನ್ನು ನಾವು ಕಳೆದುಕೊಂಡಿದ್ದೇವೆ. ಇದರಲ್ಲಿ ಈ ರಾಷ್ಟ್ರದ ಪ್ರಥಮ ಪ್ರಜೆ ಮತ್ತು ಮಾಜಿ ರಾಷ್ಟ್ರಪತಿಗಳಾದಂಥ ಶ್ರೀ ಕೆ.ಆರ್. ನಾರಾಯಣನ್‌ರವರು ನಮ್ಮಿಂದ ಅಗಲಿ ಹೋಗಿದ್ದಾರೆ. ಅವರು ಅತ್ಯಂತ ಮೃದು ಸ್ವಭಾವದವರು ಮತ್ತು ಪ್ರಾಮಾಣಿಕ ಹಾಗೂ ಒಬ್ಬ ದಕ್ಷ ಆಡಳಿತಗಾರರಾಗಿದ್ದರು. ಅತ್ಯಂತ ಬಡತನದಿಂದ ಮೇಲೆ ಬಂದಂಥ ವ್ಯಕ್ತಿಯಾಗಿದ್ದರು. ಹಿಂದೆ ವಿದ್ಯಾಭ್ಯಾಸ ಮಾಡತಕ್ಕಂಥ ಒಂದು ಕಷ್ಟದ ಪರಿಸ್ಥಿತಿ ಇದ್ದಂಥ ಸಮಯದಲ್ಲಿ ಅವರು ವಿದ್ಯಾಭ್ಯಾಸವನ್ನು ಮಾಡಿದರು. ಅವರು ಗ್ರಾಜ್ಯುಯೇಷನ್ ಮುಗಿಸಿ ಹೊರ ದೇಶಕ್ಕೂ ಸಹ ಹೋಗಿ ವಿದ್ಯಾಭ್ಯಾಸವನ್ನು ಮಾಡಿ ಪುನಃ ಇಲ್ಲಿಗೆ ಬಂದು ವಿಶೇಷವಾಗಿ ಅವರು ಈ ಒಂದು ಜರ್ನಲಿಸ್ಟ್ ಫೀಲ್ಡ್‌ನಲ್ಲಿ ಹೆಚ್ಚಿನ ಕಾಲ ಕಳೆದರು. ಬಹುಶಃ ಪರಿಶಿಷ್ಟ ಜಾತಿ ಮತ್ತು ಪಂಗಡದಲ್ಲಿನ ಜನರು ಈ ಒಂದು ಪ್ರೊಫೆಷನ್‌ಗೆ ಬರತಕ್ಕಂಥದ್ದು ಬಹಳ ಕಡಿಮೆ. ಆದರೆ, ಇತ್ತೀಚೆಗೆ ವಿಶ್ವವಿದ್ಯಾಲಯಗಳಲ್ಲಿ ವಿಶೇಷವಾದಂಥ ತರಬೇತಿ ಕೊಡುವುದರಿಂದ ಕೆಲವು ಜನ ಈಗ ಮುಂದೆ ಬಂದಿದ್ದಾರೆ. ಆದರೆ, ಅದರ ಕಾಲದಲ್ಲಿ ಒಬ್ಬ ರಿಪೋರ್ಟರ್ ಆಗತಕ್ಕಂಥದ್ದಾಗಲಿ ಅಥವಾ ಒಬ್ಬ ಸಬ್ ಎಡಿಟರ್ ಆಗತಕ್ಕಂಥದ್ದು ಬಹಳ ವಿರಳ. ಅಂಥ ಒಬ್ಬ ಮಹಾನ್ ನಾಯಕ ನಮ್ಮಿಂದ ಆಗಲಿ ಹೋಗಿದ್ದಾರೆ. ಅವರು ತಮ್ಮ ಜೀವನದಲ್ಲಿ ಎತ್ತರ ಸ್ಥಾನಕ್ಕೆ ಏರಿದ್ದರು. ತಮ್ಮ ಕಾಲ ಮೇಲೆ ತಾವು ನಿಂತುಕೊಂಡು ಆ ಒಂದು ಸ್ಥಾನಕ್ಕೆ ಹೋಗಿದ್ದರು. ನಾವು ಅನೇಕ ಮುಖಂಡರನ್ನು ಮತ್ತು ವಿಶೇಷವಾಗಿ ಅನೇಕ ತಜ್ಞರನ್ನು ನೋಡುತ್ತೇವೆ. ಇವರೆಲ್ಲರಿಗೂ ಯಾರಾದರೊಬ್ಬರು ಬೆನ್ನ ಹಿಂದು ಇದ್ದು ಸಹಕರಿಸತಕ್ಕಂಥದ್ದು ಪ್ರೋತ್ಸಾಹ ನೀಡತಕ್ಕಂಥದ್ದನ್ನು ಮಾಡಿರುವುದನ್ನು ನಾವು ಕೇಳಿದ್ದೇವೆ. ಆದರೆ ಮಾನ್ಯ ಕೆ.ಆರ್. ನಾರಾಯಣನ್‌ರವರು ತಮ್ಮ ಕಾಲಮೇಲೆ ತಾವು ನಿಂತುಕೊಂಡು ಸ್ವಾಭಿಮಾನದಿಂದ ಬದುಕಿ ಮಾನ್ಯ

ಜವಹರಲಾಲ್ ನೆಹರು ಯೂನಿವರ್ಸಿಟಿಯ ಉಪ ಕುಲಪತಿಗಳಾಗಿ ಮತ್ತು ವಿಶೇಷವಾಗಿ ಪಂಡಿತ ಜವಹರಲಾಲ್ ನೆಹರುಜಿಯವರಿಗೆ ಚಿರಪರಿಚಿತರಾಗಿ ತಮ್ಮದೇ ಆದ ಛಾಪನ್ನು ಅಂದಿನ ಮುಖಂಡರ ಮೇಲೆ ಅವರು ಹಾಕಿದ್ದರು. ಅವರ ಪ್ರಭಾವ ಮತ್ತು ಪ್ರಜ್ಞೆ ವಿಶೇಷವಾಗಿ ಅವರ ವಿದ್ಯಾಭ್ಯಾಸದ ಒಂದು ಶೈಲಿಯನ್ನು ನೋಡಿ ಅವರಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿತ್ತು. ಮುಂದೆ ಅವರು ಕೂಡ ರಾಜಕೀಯದಲ್ಲಿ ಪ್ರವೇಶ ಮಾಡತಕ್ಕಂಥದ್ದು ಆಯಿತು. ಈ ಹಿಂದೆ ಅವರು ಅನೇಕ ರಾಜ್ಯಗಳ ವಿದೇಶಾಂಗದ ಅಂದರೆ, ಎಂಬಾನ ಆಗಿ ಕೆಲಸ ಮಾಡತಕ್ಕಂಥದ್ದರಲ್ಲಿ ರಷ್ಯಾ ಅಮೇರಿಕಾ, ಚೈನಾದಲ್ಲಿ ಎಲ್ಲಾ ರಾಜ್ಯಗಳಲ್ಲಿ ಕೂಡ ವಿದೇಶಾಂಗದ ಸೇವೆಯಲ್ಲಿ ತಮ್ಮ ಕೆಲಸವನ್ನು ನಿರಂತರವಾಗಿ ವಹಿಸಿ ಆ ಒಂದು ಮಾಹಿತಿಯನ್ನು ಕೂಡ ವಿಶೇಷವಾಗಿ ಫಾರಿನ್ ಅಫೇರ್ಸ್‌ನಲ್ಲಿ ಹೆಚ್ಚಿನ ಆಸಕ್ತಿಯನ್ನು ಇಟ್ಟುಕೊಂಡು ಕೆಲಸವನ್ನು ಮಾಡಿದ್ದರು. ನಾನು ಅವರನ್ನು ವೈಯಕ್ತಿಕವಾಗಿ ಬಲ್ಲೆ. ಅಂದರೆ ವಿಶೇಷವಾಗಿ 1980 ರಲ್ಲಿ ಅವರಿಗೆ ನೇರವಾಗಿ ಪರಿಚಿತನಾಗಿದ್ದೆ. ಅವರು ಪಾರ್ಲಿಮೆಂಟಿನ ಸದಸ್ಯರಾಗಿದ್ದಾಗ, ಮಂತ್ರಿಗಳಾಗಿದ್ದಾಗ ಉಪರಾಷ್ಟ್ರಪತಿಗಳು ಮತ್ತು ರಾಷ್ಟ್ರಪತಿಗಳಾಗಿದ್ದಾಗ ಕೂಡ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸತಕ್ಕಂಥ ಅವಕಾಶ ನನಗೆ ಸಿಕ್ಕಿತ್ತು. ಆದರೆ ಅವರು ಯಾವಾಗಲು ಕೂಡ ಬಡವರ ಬಗ್ಗೆ ಚಿಂತನೆ ಮಾಡತಕ್ಕಂಥ ವ್ಯಕ್ತಿಯಾಗಿದ್ದರು. ಅವರು ಮಾತನ್ನು ಜಾಸ್ತಿ ಆಡುತ್ತಿರಲಿಲ್ಲ. ಯಾವರೀತಿಯಾಗಿ ಅನೇಕ ಮುಖಂಡರು ಈ ಬಡವರ ಬಗ್ಗೆ ಮತ್ತು weaker sections ಬಗ್ಗೆ ಬಹಳ volatile ಆಗಿ ಅಥವಾ vociferous ಆಗಿ ಪ್ರತಿಪಾದನೆಯನ್ನು ಮಾಡಿರತಕ್ಕಂಥದ್ದನ್ನು ನಾವು ನೋಡುತ್ತೇವೆ. ಆದರೆ ಅವರು ಸೂಕ್ಷ್ಮವಾಗಿ ತಮ್ಮ ಕೆಲಸವನ್ನು ಮಾಡಿರತಕ್ಕಂಥದ್ದನ್ನು ಮಾಡಿರುತ್ತಾರೆ. ವಿಶೇಷವಾಗಿ ಸಂವಿಧಾನದಲ್ಲಿ ರಿಸರ್ವೇಷನ್ ಪ್ರೊಮೋಷನ್‌ನಲ್ಲಿ ಮತ್ತು ಇನ್ನಿತರ ವಿಚಾರಗಳನ್ನು ತರತಕ್ಕಂಥದ್ದರಲ್ಲಿ ಅವರ ಹೆಚ್ಚಿನ ಕೈವಾಡ ಕೂಡ ಇತ್ತು. ಯಾವುದೇ ಒಂದು ಕಾನೂನು ಬಾಹಿತರವಾದಂಥ ವಿಷಯಗಳು ಇದ್ದರೆ ಅದನ್ನು ರಾಷ್ಟ್ರಪತಿಗಳಾಗಿ ಅವರು ಪುನಃ ಮಂಡಿಸತಕ್ಕಂಥದ್ದು ಮತ್ತು ಅದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಕಳುಹಿಸಿ ಎಂದು ಹೇಳಿ ಅವರು ಅನೇಕ ಸಾರಿ ರಾಷ್ಟ್ರಪತಿ ಭವನದಿಂದ ತಿರುಗಿ ಕಳುಹಿಸಿರುವಂಥ ಉದಾಹರಣೆಗಳು ಕೂಡ ಇವೆ. ಅಂದರೆ ಅವರಿಗೆ ಯಾವುದೇ ವಿಷಯ ಹೋದರೂ ಅವರು ಕಣ್ಣುಮುಚ್ಚಿ ಸಹಿ ಮಾಡತಕ್ಕಂಥ ವ್ಯಕ್ತಿಗಳು ಆಗಿರಲಿಲ್ಲ. ಪ್ರತಿಯೊಂದನ್ನೂ ಕೂಡ ಅವರು ಪರಿಶೀಲನೆ ಮಾಡಿ ಅದರ ಸಾಧಕಬಾಧಕಗಳನ್ನು ನೋಡಿ ಇದು ಸರಿಯೋ ತಪ್ಪೋ ಎನ್ನತಕ್ಕಂಥದ್ದನ್ನು ನೋಡಿ ತಿಳಿದುಕೊಂಡು ರುಜುವನ್ನು ಹಾಕಿ ಅವರು ಬಹಳ ಜವಾಬ್ದಾರಿಯಿಂದ ಕೆಲಸವನ್ನು ಮಾಡುತ್ತಿದ್ದರು. ಅಂತಹ ಒಂದು ಮೃದು ವ್ಯಕ್ತಿ ಇದ್ದರೂ ಕೂಡ ಧೈರ್ಯಶಾಲಿ ಎಂದು ಹೇಳಿ ನಾವು ಹೇಳಬಹುದು. ಬಹುಶಃ ಅವರಿಗೆ ಧೈರ್ಯ ಇಲ್ಲದೆ ಹೋಗಿದ್ದರೆ ಅನೇಕ ವಿಷಯಗಳಲ್ಲಿ ಅವರು ತಮ್ಮದೇ ಆದ ವಿಚಾರಗಳನ್ನು ಹೇಳುತ್ತಿರಲಿಲ್ಲ. ಈ ಜ್ಯುಡಿಷಿಯರಿಯಲ್ಲಿ ಕೂಡ ರಿಸರ್ವೇಶನ್ ಇರಬೇಕೆಂದು ಕೂಡ ಪ್ರತಿಪಾದನೆ ಮಾಡಿದಂಥ ವ್ಯಕ್ತಿ. ಕೆಲವು ಸಲ ಅರ್ಹತೆ ಇರತಕ್ಕಂಥ ಅಭ್ಯರ್ಥಿಗಲ ಕೊರತೆ ಇದೆ. ಅದಕ್ಕಾಗಿ ಅದನ್ನು ಎಲ್ಲಾ ಕಡೆ ನಾವು ಕೊಡುವುದಕ್ಕಾಗುವುದಿಲ್ಲ ಎನ್ನತಕ್ಕಂಥ ಅನಿಸಿಕೆ ಮುಖ್ಯ ನ್ಯಾಯಾಧೀಶರವರಲ್ಲ ಇದ್ದರು ಕೂಡ, ಅವರು ಅನೇಕ ಸಾರಿ ಪ್ರತಿಪಾದನೆ ಮಾಡಿದ್ದಾರೆ, ನೀವು ಅವರಿಗೆ ಅವಕಾಶವನ್ನು ಮಾಡಿಕೊಟ್ಟಾಗ ಮಾತ್ರ ತಮ್ಮ ಪ್ರತಿಭೆಯನ್ನು ಅವರು ತೋರಿಸಬಹುದು, ಆದರೆ ಅವರಿಗೆ ಅವಕಾಶ ಇಲ್ಲದಿದ್ದಾಗ ಅವರು ಕೆಳಗಿನಿಂದ ಮೇಲಿನವರೆಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಪ್ರತಿಯೊಂದು ಹಂತದಲ್ಲಿಯೂ ಕೂಡ ನ್ಯಾಯಾಂಗದಲ್ಲಿ ಕೆಲವೊಂದು

ಸ್ಥಳಗಳನ್ನು ಕಾಯ್ದಿಡಬೇಕು ಎನ್ನತಕ್ಕಂಥದ್ದರ ಬಗ್ಗೆ ಅವರು ತಮ್ಮದೇ ಆದಂಥ ವಾದವನ್ನು ಮಂಡಿಸಿದಂಥ ಒಬ್ಬ ಮಹಾನ್ ವ್ಯಕ್ತಿ. ಸಾಮಾಜಿಕ ನ್ಯಾಯಕ್ಕೆ ಬದ್ಧವಾದಂಥ ಒಬ್ಬ ಅಧ್ಯಕ್ಷರು. ಆ ಒಬ್ಬ ರಾಷ್ಟ್ರಪತಿಗಳು ಸಾಮಾಜಿಕ ನ್ಯಾಯಕ್ಕೋಸ್ಕರ ಸಂವಿಧಾನದಲ್ಲಿ ಅನೇಕ ತಿದ್ದುಪಡಿಗಳನ್ನು ಕೂಡ ಅವರು ಹೆಚ್ಚಿನ ಆಸಕ್ತಿಯನ್ನು ವಹಿಸಿ ಪ್ರೋತ್ಸಾಹ ನೀಡಿದಂಥ ಒಬ್ಬ ಧೀಮಂತ ನಾಯಕ ಎಂದು ನಾನು ಹೇಳಬಹುದು. ಬಹಳ ಜನ ಅವರು ವಿಶೇಷವಾಗಿ ಉಪರಾಷ್ಟ್ರಪತಿ ಮತ್ತು ರಾಷ್ಟ್ರಪತಿಗಳು ಇದ್ದಾಗ ಇವರು ಬಹಳ ಮೈಲ್ಡ್, ಇವರಿಂದ ಏನು ಆಗುತ್ತದೆ ಎನ್ನತಕ್ಕಂಥ ಮಾತನ್ನು ಕೆಲವು ಜನ ಆಡಿದ್ದರೂ ಕೂಡ ಅವರು ಅಧಿಕಾರ ಸಿಕ್ಕಾಗ ಅದನ್ನು ತೋರಿಸಿಕೊಟ್ಟಂಥ, ಅಂದರೆ ಯಾವುದೇ ಒಂದು ಸ್ಥಾನದಲ್ಲಿ ಹೋದಾಗ ಆ ಸ್ಥಾನದ ಸದುಪಯೋಗವನ್ನು ಹೇಗೆ ಪಡಿಸಿಕೊಳ್ಳಬೇಕು ಎನ್ನತಕ್ಕಂಥ ಕೆಲಸವನ್ನು ಅವರು ಮಾಡಿ ತೋರಿಸಿದ್ದಾರೆ. ಅಂತಹ ಒಬ್ಬ ಧೀಮಂತ ನಾಯಕ ನಮ್ಮಿಂದ ಅಗಲಿ ಹೋಗಿದ್ದಾರೆ ಅವರಿಗೆ ಇಡೀ ಸದನ ಇವತ್ತು ಸಂತಾಪವನ್ನು ವ್ಯಕ್ತಪಡಿಸುತ್ತಿದೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣ) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅವರ ಅಗಲಿಕೆಯಿಂದ ಇಡೀ ಬಡ ಸಮಾಜ ತಬ್ಬಲಿಯಾಗಿದೆ ಮತ್ತು ವಿಶೇಷವಾಗಿ ಅವರ ಕುಟುಂಬಕ್ಕೆ ಕೂಡ ತುಂಬಾ ಲುಕ್ಸಾನು ಆಗಿದೆ. ಅವರ ಕುಟುಂಬದ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಭಗವಂತ ಅವರಿಗೆ ಕೊಡಲಿ ಎಂದು ಹೇಳುವುದಕ್ಕೆ ನಾನು ಈ ಸಂದರ್ಭದಲ್ಲಿ ಇಚ್ಛೆಯನ್ನು ಪಡುತ್ತೇನೆ. ಎರಡನೆಯದಾಗಿ ಶ್ರೀ ಪಿ.ಎಂ. ಸಯೀದ್‌ರವರು, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಕೂಡ ಇವರ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದಾರೆ. ಪಿ.ಎಂ. ಸಯೀದ್‌ರವರು ನನಗೆ ವೈಯಕ್ತಿಕವಾಗಿ ಪರಿಚಯದ ಒಬ್ಬ ವ್ಯಕ್ತಿ. ನಮಗಿಂತ ಒಂದು ಪಿರಿಯಡ್ ಮುಂಚೆ ಅವರು ಲೋಕಸಭಾ ಸದಸ್ಯರಾಗಿದ್ದರು. 1967ರಿಂದ ಸತತವಾಗಿ ಅವರು 11 ಸಲ ಆರಿಸಿ ಬಂದಂಥ ಒಬ್ಬ ವ್ಯಕ್ತಿ. ಕರ್ನಾಟಕದವರು ಅವರು ಹತ್ತಿರ ಯಾರೇ ಹೋದರು ಕನ್ನಡದಲ್ಲಿಯೇ ಮಾತನಾಡತಕ್ಕಂಥವರು. ಅವರು ಒಂದು ದಿವಸ ಕೂಡ ತಪ್ಪಿಯೂ ಕೂಡ ಉರ್ದು ಭಾಷೆಯನ್ನಾಗಲಿ ಇಂಗ್ಲೀಷ್ ಭಾಷೆಯನ್ನಾಗಲಿ ಉಪಯೋಗ ಮಾಡುತ್ತಿರಲಿಲ್ಲ. ಯಾರಾದರೂ ಹೋಗಿ ಅವರನ್ನು ಭೇಟಿಯಾದಾಗ ನೀವು ಚೆನ್ನಾಗಿ ಇದ್ದೀರಾ ಯಾವಾಗ ಬಂದಿರಿ ಎಂದು ಕೇಳುತ್ತಿದ್ದರು. ಅವರ ವಿದ್ಯಾಭ್ಯಾಸ ಕೂಡ ಮಂಗಳೂರಿನ ಕಾಲೇಜಿನಲ್ಲಿ ಆಗಿತ್ತು. ಮೈಸೂರಿನಲ್ಲಿ ಕೂಡ ಅವರು ವಿದ್ಯಾಭ್ಯಾಸವನ್ನು ಮಾಡಿದ್ದರು. ಹೀಗೆ ಪಿ.ಎಂ.ಸಯೀದ್‌ರವರು ಹೆಚ್ಚು ಕಡಿಮೆ ಕರ್ನಾಟಕದವರೆ ಎಂದರೂ ಕೂಡ ಅತಿಶಯೋಕ್ತಿಯಾಗಲಾರದು. ನಾನು ಬಹಳ ಹೆಮ್ಮೆಯಿಂದ ಹೇಳುತ್ತಿದ್ದೇನೆ. ನಾನು ಕರ್ನಾಟಕದವನೆ ಮತ್ತು ಕರ್ನಾಟಕದ ಜನ ನನಗೆ ಒಳ್ಳೆಯ ಆತ್ಮೀಯರಾಗಿ ನೋಡಬೇಕು ಎನ್ನತಕ್ಕಂಥ ಒಂದು ಭಾವನೆಯನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ಮೊನ್ನೆ ನಡೆದಂಥ ಚುನಾವಣೆಯಲ್ಲಿ ಅವರಿಗೆ ಪ್ರಥಮ ಬಾರಿಗೆ ಸೋಲಾಯಿತು. ಸುಮಾರು 11 ಸಲ ಗೆದ್ದಮೇಲೆ ಒಂದು ಸಾರಿ ಸೋಲಾಯಿತು. ಆದರೆ ಆ ಸೋಲು ಸೋಲಲ್ಲಾ ಎಂದು ಹೇಳಿ ಮಾನ್ಯ ಕಾಂಗ್ರೆಸ್ ಪಕ್ಷದ ಮಹಾನ್ ನಾಯಕಿ ಶ್ರೀಮತಿ ಸೋನಿಯಾಗಾಂಧಿಯವರು ಅವರನ್ನು ಕರೆದು ಸೋತರು ಕೂಡ ರಾಜ್ಯಸಭಾ ಮೆಂಬರರನ್ನಾಗಿ ಮಾಡಿ ಪುನಃ ಅವರನ್ನು ಪವರ್ ಮಿನಿಸ್ಟರ್‌ನ್ನಾಗಿ ಮಾಡಿದರು. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಪಕ್ಷಕ್ಕೆ, ರಾಷ್ಟ್ರಕ್ಕೆ ಒಬ್ಬ ಲಾಯಲ್ ಇರತಕ್ಕಂಥ ಮುಖಂಡ. ಅಂತಹ ಒಬ್ಬ

ಮುಖಂಡ ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ. ಮತ್ತು ಎಲ್ಲರ ಜೊತೆಯಲ್ಲಿ ನಕ್ಕು ಲವಲವಿಕೆಯಿಂದ ಇರತಕ್ಕಂಥ ಒಬ್ಬ ಸಯೀದ್ ಸಾಹೇಬರು ನಮ್ಮಿಂದ ಅಗಲಿದ್ದಾರೆ. ಅವರ ಅಗಲಿಕೆಯಿಂದ ಕೂಡ ನಮಗೆ ವೈಯಕ್ತಿಕವಾದಂಥ ಒಂದು ದುಃಖವಾಗಿದೆ. ಜೊತೆಜೊತೆಯಲ್ಲಿ ಆ ದುಃಖವನ್ನು ಹಂಚಿ, ಅವರ ಮತಕ್ಷೇತ್ರದವರಿಗೆ ಅಷ್ಟೇ ಅಲ್ಲ, ರಾಷ್ಟ್ರದಲ್ಲಿರತಕ್ಕಂಥ ಪ್ರತಿಯೊಬ್ಬ ನಾಗರೀಕನಿಗೂ ಕೂಡ ಈ ಮಾತು ಅನ್ವಯಿಸುತ್ತದೆ ಎನ್ನತಕ್ಕಂತ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಮೂರನೆಯದಾಗಿ ಶ್ರೀ ಬಿ.ಎಸ್, ಪಾಟೀಲ್‌ರು. ಇವರು ನಮ್ಮ ಜೊತೆಯಲ್ಲಿ ಸುಮಾರು 3--4 ಟರ್ಮ್ ಶಾಸಕರಾಗಿದ್ದರು. ಅವರು ವಿಶೇಷವಾಗಿ ಬಿಜಾಪುರ ಜಿಲ್ಲೆಯಲ್ಲಿ ತಮ್ಮದೇ ಆದ ಛಾಪನ್ನು ಇಟ್ಟುಕೊಂಡಂಥ ವ್ಯಕ್ತಿ. ಅವರು ಯಾವಾಗಲು ಕೂಡ ಹಳ್ಳಿಯ ಜೀವನವನ್ನ ಬಯಸಿ ಅವರು ಹಳ್ಳಿಯಲ್ಲಿಯೇ ವಾಸ ಮಾಡತಕ್ಕಂಥವರು. ಸುಮಾರು ಅವರು 6 ಸಲ ಶಾಸಕರಾದರೂ ಕೂಡ ಬೆಂಗಳೂರಿನಲ್ಲಿ ಅವರು ಉಳಿದುಕೊಂಡಿರುವುದಿಲ್ಲ. ಅವರು ಬೆಂಗಳೂರಿನಲ್ಲಿ ಮನೆಯನ್ನು ಮಾಡಲಿಲ್ಲ. ಇವತ್ತು ನಾವೆಲ್ಲ ನೋಡುತ್ತೇವೆ, ಒಂದು ಸಲ ಶಾಸಕರಾಗಿ ಆರಿಸಿ ಬಂದರೆ ಖಾಯಂ ಆಗಿ ಇಲ್ಲಿಯೇ ವಾಸ ಮಾಡತಕ್ಕಂಥ ಅನೇಕ ಶಾಸಕರನ್ನು ನಾವು ನೋಡುತ್ತಿದ್ದೇವೆ. ಆದರೆ ಅವರು 6 ಸಲ ಆರಿಸಿ ಬಂದರೂ ಕೂಡ ಒಂದು ಅಸೆಂಬ್ಲಿ ಮುಗಿದ ಮೇಲೆ ಒಂದು ರಾತ್ರಿ ಕೂಡ ಅವರು ಇಲ್ಲಿ ಇರುತ್ತಿರಲಿಲ್ಲ. ಬಸ್ಸನ್ನು ಹತ್ತಿ ನೇರವಾಗಿ ಅವರು ತಮ್ಮ ಹಳ್ಳಿಗೆ ಹೋಗತಕ್ಕಂಥ ಕೆಲಸವನ್ನು ಮಾಡುತ್ತಿದ್ದರು. ಹಳ್ಳಿಯ ಭಾಗದಲ್ಲಿರತಕ್ಕಂತಹ ರೈತಾಪಿ ಜನರ ಜೊತೆಯಲ್ಲಿ ಅವರ ಸಂಪರ್ಕ ಬಹಳ ಚೆನ್ನಾಗಿತ್ತು. ಒಂದು ಸಾರಿ ಚುನಾವಣೆಯಲ್ಲಿ ನಾವು ಹಾಗೂ ಶ್ರೀಮಾನ್ ಧರ್ಮಸಿಂಗ್‌ಜೀಯವರು ಮತ್ತು ಅನೇಕ ಮುಖಂಡರು ಅವರ ಮನೆಗೆ ಹೋಗಿದ್ದೆವು. ಅವರು ಮನೆಯಲ್ಲಿರುವಂತಹ ಫೋಟೋವನ್ನು ನೋಡಿದಾಗ ಅಲ್ಲಿ ಎಲ್ಲಾ ಪಾರ್ಟಿಯ ಚಿಹ್ನೆಗಳು ಆ ಫೋಟೋದಲ್ಲಿತ್ತು. ಅದೇನೆಂದರೆ ಅವರು ಮೊದಲು ಕಾಂಗ್ರೆಸ್‌ಗೆ ಹೋಗಿ ಗೆದ್ದಿದ್ದರು. ಚಿಹ್ನೆ ಎತ್ತಿನ ಗುರುತು ಜೋಡಿ ಎತ್ತು, ಅದು ಆದಮೇಲೆ ಪುನಃ ಆಕಳುಕರು, ಅನಂತರ ಅವರು ಜನತಾ ಪಾರ್ಟಿಯ ಸಿಂಬಲ್‌ನಿಂದ ಗೆದ್ದಿದ್ದರು. ಇವೆಲ್ಲಾ ಗುರುತಿನ ಚಿಹ್ನೆಯ ಫೋಟೋಗಳಿದ್ದವು. ನೇಗಿಲುಹೊತ್ತ ರೈತ ಇದನ್ನೆಲ್ಲ ನೋಡಿದ ಮೇಲೆ ಅಲ್ಲಿ ಪ್ರತಿಯೊಂದು ಪಾರ್ಟಿಯಿಂದ ಗೆದ್ದು ಬಂದಿರುವ ಫೋಟೋಗಳಿದ್ದವು. ನಾವು ಅವರಿಗೆ ಹೇಳಿದೆ, ನೀವು ಪ್ರತಿಯೊಂದು ಪಾರ್ಟಿಯಿಂದ ಸ್ಪರ್ಧಿಸಿರುವ ಬಗ್ಗೆ ಫೋಟೋವನ್ನು ನೋಡುವುದಕ್ಕೆ ಹತ್ತಿದ್ದೇನೆ ಎಂದು, ಅದಕ್ಕೆ ಅವರು ಇಲ್ಲಾ ಸಾರ್, ಅವರು ನನಗೆ ಟಿಕೇಟನ್ನು ಕೊಡಲಿಲ್ಲ ಅಂದರು. ಅದಕ್ಕೆ ನಮ್ಮ ಎಲ್ಲಾ ಕಾರ್ಯಕರ್ತರು ನೀವು ಜನತಾ ಪಾರ್ಟಿಯಿಂದ ನಿಂತುಕೊಳ್ಳಿ ಎಂದು ಹೇಳಿದರು. ಅದಕ್ಕಾಗಿ ನಿಂತುಕೊಂಡೆ ಗೆದ್ದೆ. ಅಂದರೆ ಅವರು ಯಾವುದೇ ಪಕ್ಷಕ್ಕೆ ಹೋದರೂ ಕೂಡ ಅಲ್ಲಿನ ಜನಸಮುದಾಯ, ರೈತರು, ಅಲ್ಲಿಯ ರೈತಾಪಿ ಜನರು ಅವರ ಬೆಂಬಲಕ್ಕೆ ನಿಲ್ಲತಕ್ಕಂತಹವರಾಗಿದ್ದರು. ಏಕೆಂದರೆ, ಅವರ ಸರಳ ಜೀವನ, ಮತ್ತು ವಿಶೇಷವಾಗಿ ಹಳ್ಳಿಯ ಜನರ ಅಭಿವೃದ್ಧಿಯ ಬಗ್ಗೆ ಅವರು ಚಿಂತನೆ ಮಾಡತಕ್ಕಂತಹ ಒಬ್ಬ ಮುಖಂಡರಾಗಿದ್ದರು. ನಾವು ಕೂಡ ಅದನ್ನು ತಿಳಿದುಕೊಂಡೆ ಹೋದ ಸಲ ಕಳೆದ 5 ವರ್ಷದ ಹಿಂದೆ ಅವರನ್ನು ಕಾಂಗ್ರೆಸ್ ಪಕ್ಷದಿಂದ ಚುನಾವಣೆಗೆ ನಿಲ್ಲಿಸಿದ್ದೆವು. ಆದರೆ ಕಾರಣಾಂತರದಿಂದ ಅವರು 25 ಸಾವಿರ ಮತಗಳಲ್ಲಿ ಪರಾಭವಗೊಂಡರು. ಅದೇನೇ ಇರಲಿ, ಇಂತಹ ಒಬ್ಬ ವಿಶೇಷವಾಗಿ ವ್ಯಕ್ತಿತ್ವ ಇರತಕ್ಕಂತಹ ವ್ಯಕ್ತಿ, ಸ್ವಲ್ಪಕಾಲ ಅವರು ಮೇಜರ್ ಇರಿಗೇಷನ್

ಮಂತ್ರಿಗಳು ಕೂಡ ಆಗಿದ್ದರು. ಇಂತಹ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಇನ್ನು ಪಿ.ಪಿ. ಹೆಗರೆ ಇವರನ್ನು ನಾನು ವೈಯಕ್ತಿಕವಾಗಿ ಬಲ್ಲೆ. ಪಿ.ಪಿ. ಹೆಗರೆ ಎಂದರೆ ಮಿಲ್ಟ್ರಿಮ್ಯಾನ್ ಇವರು ನಮ್ಮ ಚಿಕ್ಕೋಡಿ ಭಾಗದವರಾಗಿದ್ದಾರೆ. ಅವರು ವಿಶೇಷವಾಗಿ ನಮ್ಮ ಪ್ರಕಾಶ್ ಹುಕ್ಕೇರಿಯವರ ಮತಕ್ಷೇತ್ರವಾದ ಸದಲಗದವರಾಗಿದ್ದಾರೆ. ಆ ಭಾಗದಿಂದ ಬರತಕ್ಕವರಾಗಿದ್ದಾರೆ. ಇವರು ಬಹಳ ಸರಳವಾದ ವ್ಯಕ್ತಿಯಾಗಿದ್ದಾರೆ. ಸಜ್ಜನ ಮತ್ತು ಅವರು ಯಾರಿಗೆ ಒಂದು ಮಾತನ್ನು ಕೊಟ್ಟರೆ, ಆ ಮಾತನ್ನು ಎಂದೂ ಕೂಡ ತಪ್ಪದೆ, ಆ ಮಾತಿನ ಪ್ರಕಾರ ನಡೆಯತಕ್ಕಂತಹ ಒಬ್ಬ ವ್ಯಕ್ತಿಯಾಗಿದ್ದರು. ಇವರು ಕೂಡ ಅವರ ಸರಳ ಸ್ವಭಾವವನ್ನು ನೋಡಿಯೇ ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್‌ನ್ನು ಮಾಡಿದ್ದರು. ಅಂತಹ ಒಬ್ಬ ವ್ಯಕ್ತಿ ಎಕ್ಸ್‌ಮಿಲ್ಟ್ರಿಮ್ಯಾನ್, ಅವರು ಮಿಲಿಟರಿಯಲ್ಲೂ ಕೂಡ ಕೆಲಸವನ್ನು ಮಾಡಿದ್ದರು. ಅವರು ಸುಮಾರು 92 ಅಥವಾ 93ನೇ ವಯಸ್ಸಿಗೆ ಅವರು ನಮ್ಮಿಂದ ಅಗಲಿ ಹೋಗಿದ್ದಾರೆ. ಅವರು ಹುಟ್ಟಿದ್ದು 1913 ರಲ್ಲಿ ಅಂದರೆ ಹೆಚ್ಚು ಕಡಿಮೆ 90--92 ವರ್ಷಗಳು, ನಾನು ಮೊನ್ನೆ ನಮ್ಮ ಚುನಾವಣೆಯ ಪ್ರಚಾರಕ್ಕೆ ಹೋದಾಗ ನಾನು ಟೆಲಿಫೋನ್‌ನಲ್ಲಿ ಮಾತನಾಡಿದೆ. ಅವರಿಗೆ ಸ್ವಲ್ಪ ಕಿವಿ ಕೇಳುತ್ತಿರಲಿಲ್ಲ. ನಾನು ನೀವು ಏತಕ್ಕಾಗಿ ಜೋರಾಗಿ ಮಾತನಾಡುತ್ತಿಲ್ಲ ಎಂದೆ, ಅದಕ್ಕೆ ಅವರು ಇಲ್ಲಾ ನನಗೆ ವಯಸ್ಸು ಆಗಿದೆ, ನನ್ನ ಎಲ್ಲಾ ಸ್ಪೇರ್ ಪಾರ್ಟ್ಸ್ ವೀಕಾಗಿದೆ, ಅದಕ್ಕಾಗಿ ನಾನು ಹೆಚ್ಚು ಜೋರು ಧ್ವನಿಯಿಂದ ಮಾತನಾಡುವುದಕ್ಕಾಗುವುದಿಲ್ಲ. ಎಂದು ಹೇಳಿದರು. ಅವರು ಯಾವಾಗಲೂ ಕೂಡ ನನ್ನನ್ನು ಭೇಟಿಯಾದಾಗ ನನ್ನನ್ನು ಜೈಭೀಮ ಎಂದು ಕರೆಯುತ್ತಿದ್ದರು. ನಾವು ಯಾರನ್ನಾದರೂ ಭೇಟಿಯಾದಾಗ ಯವ ರೀತಿಯಾಗಿ ನಮಸ್ಕಾರ ಎಂದು ಹೇಳುತ್ತೇವೆ ಅದೇ ರೀತಿ ಅವರು, ಯಾವಾಗಲೂ ನನ್ನನ್ನು ಭೇಟಿಯದಾಗ ಜೈಭೀಮಾ ಎಂದು ಹೇಳಿ ನಿಂತುಬಿಡುತ್ತಿದ್ದರು. ಅವರು ಅಷ್ಟೊಂದು ಧೈರ್ಯಶಾಲಿ ಮತ್ತು ಆ ಧೈರ್ಯವನ್ನು ಇಟ್ಟುಕೊಂಡು ಇಲ್ಲಿ ಅನೇಕ ಶಕ್ತಿಗಳ ವಿರುದ್ಧ ಹೋರಾಟ ಮಾಡತಕ್ಕಂಥದ್ದನ್ನು ಕೂಡ ಮಾಡಿದ್ದಾರೆ. ಅವರು ನಮ್ಮ ಜೊತೆಯಲ್ಲಿ ಎರಡು ಸಲ ಶಾಸಕರಾಗಿದ್ದರು, ಮತ್ತು ನಾವು ವಿರೋಧಪಕ್ಷದಲ್ಲಿದ್ದಾಗ ಅವರು ಮಂತ್ರಿಗಳು ಕೂಡ ಆಗಿದ್ದರು. ಹೀಗೆ ಒಬ್ಬ ಧೀಮಂತ ನಾಯಕನನ್ನು ದಲಿತ ಸಮಾಜ ಕಳೆದುಕೊಂಡಿದೆ ಎಂದರೆ ಇದು ಅತಿಶಯೋಕ್ತಿಯಾಗುವುದಿಲ್ಲವೆಂದು ನಾನು ಭಾವಿಸುತ್ತೇನೆ.

ಇನ್ನು ಶ್ರೀಮಾನ್ ವಿ. ಕೃಷ್ಣರಾವ್ ಅವರು ನಮ್ಮ ಪಕ್ಷದ ಅಧ್ಯಕ್ಷರಾಗಿದ್ದರು. ಅವರು 3--4 ಸಲ ಪಾರ್ಲಿಮೆಂಟ್ ಸದಸ್ಯರಾಗಿದ್ದರು. ಅವರು ವಿಶೇಷವಾಗಿ ಗೌರಿಬಿದನೂರು ಪಂಚಾಯಿತಿ ಅಧ್ಯಕ್ಷ ಸ್ಥಾನದಿಂದ ಹಿಡಿದುಕೊಂಡು, ಟಿಡಿಬಿ. ಪ್ರೆಸಿಡೆಂಟ್‌ರಿಂದ ಹಿಡಿದುಕೊಂಡು, ಅವರು ಶಾಸಕರಾಗಿ, ಪಾರ್ಲಿಮೆಂಟ್ ಸದಸ್ಯರಾಗಿ ಕೊನೆಗೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದಾರೆ. ಅಂತಹ ಒಬ್ಬ ಸರಳಜೀವಿ ಇವತ್ತು ನಮ್ಮಿಂದ ಅಗಲಿದ್ದಾರೆ. ವಿಶೇಷವಾಗಿ ವಿ. ಕೃಷ್ಣರಾವ್, ಯಾವಾಗಲೂ ಕೂಡ, ಅವರ ಹತ್ತಿರ ಯಾರೇ ಹೋದರೂ ಕೂಡ ಈ ಕೆಲಸ ಆಗುವುದಿಲ್ಲ ಎಂದು ಕೂಡ ಹೇಳುತ್ತಿರಲಿಲ್ಲ. ಅವರಿಗೆ ಯಾವುದೇ ಕೆಲಸವನ್ನು ಹೇಳಿದರೂ ಕೂಡ ಅವರು ಮಾಡುತ್ತೇನೆ ಎಂದು ಹೇಳತಕ್ಕಂತಹ ವ್ಯಕ್ತಿಯಾಗಿದ್ದರು. ಅವರು ಒಬ್ಬ ಅತ್ಯಂತ ಸರಳಜೀವಿ ಅವರು ನಮ್ಮಿಂದ ಅಗಲಿದ್ದಾರೆ.

ಇನ್ನು ಶ್ರೀ ಜಿ. ನಾರಾಯಣಕುಮಾರ್‌ರವರ ಬಗ್ಗೆ ಹೇಳುವುದಾದರೆ, ಇವರಿಗೆ ಕನ್ನಡ ಚಳುವಳಿಯಲ್ಲಿ ಅಗ್ರಸ್ಥಾನ ಮತ್ತು ಅಗ್ರಗಣ್ಯ ವ್ಯಕ್ತಿಯಾಗಿ ಇವರು ಮುಂಚೂಣಿಯಲ್ಲಿರತಕ್ಕಂತಹ ವರಾಗಿದ್ದಾರೆ. ಇವರು ಕೂಡ ತಮಗೆ ಗೊತ್ತಿರುವ ಹಾಗೆ ಈ ಮನೆಯ ಶಾಸಕರಾಗಿದ್ದರು, ಮತ್ತೆ ಇತ್ತೀಚೆಗೆ ನಮ್ಮ ಮಾನ್ಯ ವಾಟಾಳ್ ನಾಗರಾಜ್‌ರವರೊಡನೆ ಬಹಳ ಸಂಪರ್ಕವನ್ನಿಟ್ಟುಕೊಂಡಿದ್ದರು. ಆದರೆ ಕೊನೆಗೆ ಏನಾಯಿತು ಗೊತ್ತಾಗಲಿಲ್ಲ. ಅವರಿಬ್ಬರು ಬೇರೆ ಬೇರೆಯಾದ ಮೇಲೆ ಪುನಃ ಅವರೇ ಒಂದು ರೀತಿಯಲ್ಲಿ ತನ್ನ ಚಳುವಳಿಯನ್ನು ಇಟ್ಟುಕೊಂಡು ಮುಂದುವರಿದಿದ್ದರು. ಅಂತಹ ಒಬ್ಬ ಚಳುವಳಿಗಾರ ಇವತ್ತು ನಮ್ಮ ಮಧ್ಯದಲ್ಲಿ ಇಲ್ಲ. ಅವರು ಕೂಡ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಿಂದ ಬಂದವರಾಗಿದ್ದರು. ಅಂತಹ ಒಬ್ಬ ವ್ಯಕ್ತಿಯನ್ನು ಇವತ್ತು ನಾವು ನೋಡುತ್ತಿಲ್ಲ. ಶ್ರೀ ಶಂಕರ್ ಎಸ್. ಕರನಿಂಗ್ ಇವರು ತಮಗೆ ಗೊತ್ತಿರುವ ಹಾಗೆ ಗೋಕಾಕ್ ತಾಲ್ಲೂಕಿನವರು. ಇವರು ನಮ್ಮ ಜೊತೆಯಲ್ಲಿ 1978ರಲ್ಲಿ ಶಾಸಕರಾಗಿದ್ದರು, 1983ರಲ್ಲಿಯೂ ಕೂಡ ಇದ್ದರು. ಅವರು ಎಸ್.ಟಿ. ಕ್ಷೇತ್ರದಿಂದ ಆರಿಸಿ ಬಂದಿದ್ದರು. ಅವರು ಟ್ರೇಡ್ ಯೂನಿಯನ್‌ನ ಲೀಡರ್ ಕೂಡ ಆಗಿದ್ದರು. ಅಲ್ಲಿ ಗೋಕಾಕ್ ಟೆಕ್ಸ್‌ಟೈಲ್ಸ್ ಮಿಲ್ ಏನು ಇದೆ, ಅದರ ಅಧ್ಯಕ್ಷರು ಕೂಡ ಆಗಿದ್ದರು. ಅವರು ಬಹಳ ಸರಳವಾದ ವ್ಯಕ್ತಿಯಾಗಿದ್ದರು. ಅವರು ವಿಶೇಷವಾಗಿ ಬಡವರ ಜೊತೆಯಲ್ಲಿದ್ದು ಅವರ ಸೇವೆಯನ್ನು ಮುಂದುವರಿಸಿಕೊಂಡು ಬಂದಂತಹ ಒಬ್ಬ ವ್ಯಕ್ತಿಯಾಗಿದ್ದರು. ಅದರ ಜೊತೆಯಲ್ಲಿ ಬೆಳಗಾಂ ಜಿಲ್ಲೆಯ ಇನ್ನೊಬ್ಬರು ಶ್ರೀ ಬಾಬುರಾವ್ ಅಣ್ಣಪ್ಪ ಬೋಳಶೆಟ್ಟಿ ಅವರು ನಮಗೆ ಬಹುಶಃ ಎಂಎಲ್‌ಸಿಯಾದ ಮೇಲೆ ಪರಿಚಯವಾದವರು. ಅವರು 1972ರಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಆದರೆ ಈ ಹಿಂದೆ ಅವರು 1957ರಲ್ಲಿ ಶಾಸಕರಾಗಿದ್ದರು ಎಂದು ನಮಗೆ ಗೊತ್ತಿತ್ತು. ಅವರು ಕೂಡ ಒಬ್ಬ ಒಳ್ಳೆಯ ಮುಂದಾಳತ್ವವನ್ನು ವಹಿಸಿಕೊಳ್ಳುವಂತಹ ವ್ಯಕ್ತಿಯಾಗಿದ್ದರು. ಅವರು ವಿಶೇಷವಾಗಿ ಬೆಳಗಾಂ ಜಿಲ್ಲೆಯಲ್ಲಿ ತನ್ನದೆ ಆದಂತಹ ಪ್ರಭಾವವನ್ನು ಅಂದಿನ ಕಾಲದಲ್ಲಿ ಇಟ್ಟುಕೊಂಡು ಬಂದವರಾಗಿದ್ದರು. ಇದರ ಜೊತೆಯಲ್ಲಿ ಶ್ರೀಮಾನ್ ಕೆ.ಎಂ.ಪುಟ್ಟುರವರು ಇವರು ಕೂಡ ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು. ಇವರು ಮಂಡ್ಯ ಜಿಲ್ಲೆಯಿಂದ ಆರಿಸಿ ಬಂದಿದ್ದರು. ಅವರು ವಿಶೇಷವಾಗಿ ಈ ಸಹಕಾರ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಮತ್ತು ಕೆಲಸವನ್ನು ಮಾಡಿರುವಂತಹ ವ್ಯಕ್ತಿಯಾಗಿದ್ದರು ಮತ್ತು ಶ್ರೀ ಯು.ಕೆ. ಶಾಮಣ್ಣ ಇವರು ಕೂಡ ನಮ್ಮ ಪಕ್ಷದ ಒಬ್ಬ ಶಾಸಕರಾಗಿ ಕೆಲಸ ಮಾಡಿದವರಾಗಿದ್ದಾರೆ. ಇವರು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಕ್ಷೇತ್ರದವರಾಗಿದ್ದಾರೆ. ಇವರು ಒಳ್ಳೆಯ ಮಾತುಗಾರರಾಗಿದ್ದರು. ವಿಶೇಷವಾಗಿ ಹೇಳುವುದಾದರೆ, ಈ ಚಿಕ್ಕಮಗಳೂರು, ಶಿವಮೊಗ್ಗ ಈ ಭಾಗದಲ್ಲಿ ಒಳ್ಳೆಯ ಆರೇಟರ್ ಇದ್ದಾರೆ. ಶ್ರೀ ಈಶ್ವರಪ್ಪ, ಶ್ರೀ ಯಡಿಯೂರಪ್ಪ, ಶ್ರೀ ಬಂಗಾರಪ್ಪ, ಶ್ರೀ ಕಾಗೋಡು ತಿಮ್ಮಪ್ಪನವರಿಂದ ಹಿಡಿದು ನಮ್ಮ ತೀರ್ಥಹಳ್ಳಿ ಶಾಸಕರಾದ ಶ್ರೀ ಆರಗ ಜ್ಞಾನೇಂದ್ರರವರು ಕೂಡ ಬಂದವರಿದ್ದಾರೆ. ಅವರು ಯಾವ ಬೀಜವನ್ನು ಬಿತ್ತಿದ್ದಾರೋ ಗೊತ್ತಿಲ್ಲ. ಈ ಭಾಗದಲ್ಲಿ ಮಾತ್ರ ಪ್ರಭಾವಶಾಲಿಗಳ ಜೊತೆಯಲ್ಲಿಯೇ ಕೂಡ ಇದೆ. ಆ ಒಂದು ಆರೇಟರಿ ಇರತಕ್ಕಂತಹ ಜನರ ಪೈಕಿ ಇವರು ಕೂಡ ಒಬ್ಬರಾಗಿದ್ದಾರೆ. ಅಂತಹ ಒಬ್ಬ ನಾಯಕರು ಇವತ್ತು ನಮ್ಮಿಂದ ಅಗಲಿ ಹೋಗಿದ್ದಾರೆ. ಇತ್ತೀಚೆಗೆ ಬಳ್ಳಾರಿ ಜಿಲ್ಲೆಯ ಶ್ರೀ ಭೀಮಸೇನೆ ಕೊಂಡಯ್ಯ ಇವರು ಕೂಡ ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು. ಅವರ ಒಂದು ದುರ್ಮರಣ ಅಲ್ಲಿ ಯಾವ ಕಾರಣಕ್ಕಾಗಿ ಆಯಿತು ಎಂಬುದು ಈಗಾಗಲೇ ಬಹಿರಂಗಪಟ್ಟಿದೆ, ಏನು ಈ ಒಂದು ಮರ್ಡರ್ ಆಯಿತು, ಅದನ್ನು ಯಾರು ಮಾಡಿಸಿದ್ದಾರೆ ಎನ್ನುವುದು ಕೂಡ

ಗೊತ್ತಾಗಿದೆ. ಬಹುಶಃ ನಮ್ಮ ಎಂ.ಪಿ. ಪ್ರಕಾಶ್ ಸಾಹೇಬರು ಕೂಡ ಅಲ್ಲಿಗೆ ಹೋಗಿದ್ದರು. ಯಾರು ಮರ್ಡರ್ ಮಾಡಿಸಿದ್ದರು ಎಂಬುದು ಎಲ್ಲರಿಗೂ ಕೂಡ ಈಗಾಗಲೇ ಗೊತ್ತಾಗಿದೆ. ಸಂಬಂಧಪಟ್ಟವರನ್ನು ಕೂಡ ಅರೆಸ್ಟ್ ಮಾಡಿದ್ದಾರೆ. ಇದರೊಂದಿಗೆ ಶ್ರೀ ಸಿ.ಪಿ. ಮುದುಕಲ್ ಕಟ್ಟಿ ಅವರು ನಮ್ಮ ಧಾರವಾಡ ಜಿಲ್ಲೆಯವರು. ಪ್ರಪ್ರಥಮವಾಗಿ ಅವರನ್ನು ಬೈ ಎಲೆಕ್ಷನ್‌ಗೆ ನಿಲ್ಲಿಸಿದ್ದೆವು. ಅದಕ್ಕಿಂತ ಮುಂಚೆ ಅವರು ಆ ತಾಲ್ಲೂಕ್ ಬೋರ್ಡಿನ ಅಧ್ಯಕ್ಷರೂ ಕೂಡ ಆಗಿದ್ದರು. ಮಾನ್ಯ ಗುಂಡೂರಾಯರ ಕಾಲದಲ್ಲಿ ಬೈ ಎಲೆಕ್ಷನ್ ಬಂದಿತ್ತು. ಆ ಬೈ ಎಲೆಕ್ಷನ್ ಬಂದಾಗ ಇವರನ್ನು ಎಲ್ಲರೂ ಸೇರಿ ಚುನಾವಣೆಗೆ ನಿಲ್ಲಿಸಬೇಕೆಂದು ಕೇಳಿಕೊಂಡೆವು. ಹಾಗಾಗಿ ಅವರನ್ನು ಆ ಎಲೆಕ್ಷನ್‌ಗೆ ನಿಲ್ಲಿಸಿ, ನಾವೆಲ್ಲರೂ ಅಲ್ಲಿ ಹೋಗಿ ಕೆಲಸವನ್ನು ಮಾಡಿದ್ದೆವು. ಆ ಬಾರಿ ಆ ಬೈ ಎಲೆಕ್ಷನ್‌ನಲ್ಲಿ ಗೆದ್ದರು, ಮತ್ತೆ ಒಂದು ಚುನಾವಣೆಯಲ್ಲಿಯೂ ಕೂಡ ಅವರು ಆರಿಸಿ ಬಂದರು. ಹೀಗೆ ಆರು ಮತ್ತು ಏಳನೆ ವಿಧಾನಸಭೆಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ, ಅವರು ಒಬ್ಬ ರೈತ ಕುಟುಂಬದಲ್ಲಿ ಜನಿಸಿದ್ದು ಅತ್ಯಂತ ಸರಳ ಜೀವಿಗಳು, ದಕ್ಷ ಹಾಗೂ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯರವರು ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು ಮತ್ತು ವಿಶೇಷವಾಗಿ ಈ ಕಮಿಟಿಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸುತ್ತಿದ್ದರು. ಬೇಲೂರು ಮತಕ್ಷೇತ್ರದಿಂದ ಆರಿಸಿ ಬಂದಂತಹ ವ್ಯಕ್ತಿ. ಅವರು ನನಗೆ ತಿಳಿದಮಟ್ಟಿಗೆ ಆ ಜಿಲ್ಲೆಯವರಲ್ಲ, ಆದರೂ ಕೂಡ ಆ ಜಿಲ್ಲೆಯಿಂದ ಸುಮಾರು ಮೂರು ನಾಲ್ಕು ಸಾರಿ ಆರಿಸಿ ಬರತಕ್ಕಂಥ ಅವಕಾಶ ಅವರಿಗೆ ಸಿಕ್ಕಿತ್ತು. ಹೀಗೆ ಅವಕಾಶಗಳು ದೊರೆತ ನಂತರವೂ ಕೂಡ ಅನೇಕ ಸೋಷಿಯಲ್ ವೆಲ್‌ಫೇರ್ ಕಮಿಟಿಗಳು, ಬ್ಯಾಕ್‌ವರ್ಡ್ ಕ್ಲಾಸ್ ಕಮಿಟಿಗಳಲ್ಲಿ ಆಸಕ್ತಿ ವಹಿಸಿ ಕೆಲಸ ಮಾಡಿದ್ದರು ಮತ್ತೆ ಆ ಇಲಾಖೆಯಲ್ಲಿ ಇರತಕ್ಕಂತಹ ಲೋಪದೋಷಗಳನ್ನು ಎತ್ತಿ ಹಿಡಿದು ಕೇಳತಕ್ಕಂಥ ಸದಸ್ಯರಾಗಿದ್ದರು. ಅವರು ಅನೇಕ ಸಾರಿ ಚೇರ್ಮನ್ ಆಗಿ ಕೂಡ ಕೆಲಸವನ್ನು ಮಾಡಿದ್ದಾರೆ. ಅಂಥ ಒಬ್ಬ ಹಿರಿಯ ನಾಯಕರನ್ನು ನಾವು ಕಳೆದುಕೊಂಡಿದ್ದೇವೆ, ಇವತ್ತು ಯಾವ ಜನರಿಂದ ವಿಶೇಷವಾಗಿ ಅವರು ಪ್ರತಿನಿಧಿಸುತ್ತಿದ್ದರು. ಆ ಜನರೂ ಕೂಡ ಇವತ್ತು ಅವರ ಸೇವೆಯಿಂದ ವಂಚಿತರಾಗಿದ್ದಾರೆಂದು ನನಗೆ ಬಹಳ ದುಃಖವಾಗುತ್ತಿದೆ.

ಶ್ರೀ ಎಸ್. ಚನ್ನಬಸವಯ್ಯನವರು ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ಇವರೂ ಆ ಕಾಲದಲ್ಲಿ ಐ.ಟಿ.ಐ. ನಲ್ಲಿ ಕೆಲಸ ಮಾಡುತ್ತಿದ್ದರು. ಇವರನ್ನು ಮಾನ್ಯ ದೇವರಾಜ ಅರಸ್‌ರವರು ಗುರುತಿಸಿದ್ದರು. ಆಗ ಪದವೀಧರರ ಕ್ಷೇತ್ರದಿಂದ ಹಾಗೂ ಶಿಕ್ಷಕರ ಕ್ಷೇತ್ರದಿಂದ, ಕಾಂಗ್ರೆಸ್ ಪಕ್ಷದಿಂದ ಆರಿಸಿ ಬರುವುದು ಬಹಳ ಕಷ್ಟವಾಗಿತ್ತು. ಆಗ ಸರ್ವೀಸ್‌ನಲ್ಲಿದ್ದಂತಹವರಿಗೆ ವಿಶೇಷವಾಗಿ ಇವರಿಂದ ರಾಜೀನಾಮೆ ಕೊಡಿಸಿ ತುಮಕೂರು ಭಾಗದಲ್ಲಿ ನಿಲ್ಲಿಸಿ 1976ರಲ್ಲಿ ಇವರು ಆರಿಸಿ ಬಂದರು. ಆಗ ದೇವರಾಜು ಅರಸು ಅವರು ಆಸಕ್ತಿ ವಹಿಸಿ ಇವರಿಗೆ ಹಾಗೂ ಶ್ರೀ ಸಿ.ಆರ್. ರೆಡ್ಡಿಯವರಿಗೆ ಇಬ್ಬರಿಗೂ ಕೂಡ ವಿಶೇಷವಾಗಿ ರಾಜೀನಾಮೆ ಕೊಡಿಸಿ, ಚುನಾವಣೆಗೆ ನಿಲ್ಲಿಸಿ, ಗೆಲ್ಲಿಸಿದ್ದರು. ಅವರು ಪ್ರಥಮಬಾರಿಗೆ ಅವರು ಆರಿಸಿ ಬಂದಿದ್ದರು. ನಾವು ಶಾಸಕರಾಗಿ ಬಂದ ಮೇಲೆ ಅವರು ವಿಧಾನ ಪರಿಷತ್ತಿನ ಸದಸ್ಯರಾಗಿ ಬಂದಂತಹ ವ್ಯಕ್ತಿಗಳು. ಚನ್ನಬಸವಯ್ಯನವರು ಅನೇಕ ಸಂಘಸಂಸ್ಥೆಗಳನ್ನು ಸಹ ಕಟ್ಟಿದ್ದಾರೆ. ಹೀಗೆ ಅವರು ತಮ್ಮದೇ ಆದಂತಹ ರೀತಿಯಲ್ಲಿ ಸೇವೆಯನ್ನು ಸಲ್ಲಿಸಿದ್ದಾರೆ.

ಡಾ: ಎಂ.ಆರ್. ತಂಗಾ ಅವರನ್ನು ಕಳೆದುಕೊಂಡು ಇವತ್ತು ನಮ್ಮ ಭಾಗ ತಬ್ಬಲಿಯಾಗಿದೆ. ಅವರು ಯಾವುದೇ ಪಕ್ಷದಲ್ಲಿರಲಿ, ಇವತ್ತು ಬಿ.ಜೆ.ಪಿ.ಯಲ್ಲಿದ್ದರೂ ಕೂಡ ಅವರು ಸಾಮಾನ್ಯ ಜನರ

ಜೊತೆಯಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ನಡೆದುಕೊಂಡು ಹೋಗುವ ಒಬ್ಬ ಒಳ್ಳೆಯ ಡಾಕ್ಟರ್. ಯಾರಿಗೆ ನೋವಾದರೂ ಕೂಡ ಆ ನೋವು ತಮ್ಮದು ಎನ್ನುವ ರೀತಿಯಲ್ಲಿ ಅರ್ಥ ಮಾಡಿಕೊಂಡು ಕೆಲಸ ಮಾಡುವಂತಹ ಒಬ್ಬ ನಾಯಕರಾಗಿದ್ದರು, ವಿಶೇಷವಾಗಿ ಒಬ್ಬ ಡಾಕ್ಟರ್‌ಗೆ ಏನು ಗುಣಗಳು ಬೇಕು a kind heartedness ಇರುತ್ತದೆಯೋ ಅವರು ರಾಜಕೀಯದಲ್ಲಿದ್ದರೂ ಕೂಡ ಆ ಒಳ್ಳೆಯ ಗುಣವನ್ನು ಹೊಂದಿದ್ದರು. ಅಂಥಾ ಒಬ್ಬ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಬಹುಶಃ ಆ ಭಾಗಕ್ಕೆ ಇಂತಹ ನಾಯಕರು ದೊರೆಯುವರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ ವಿಶೇಷವಾಗಿ ಈ ನಮ್ಮ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳಲ್ಲಿ ಒಬ್ಬ ಜೈನ ಸಮಾಜದಿಂದ ಒಬ್ಬ ವ್ಯಕ್ತಿ ಗೆದ್ದು ಬರುವುದು ಬಹಳ ಕಷ್ಟ. ಏಕೆಂದರೆ ಓಟುಗಳು ಬಹಳ ಕಡಿಮೆ, ಜಾತಿಯಾಧಾರದ ಮೇಲೆ ಹೋದರೆ ಯಾರೂ ಓಟು ಕೊಡಲಿಕ್ಕೆ ಸಾಧ್ಯವಿಲ್ಲ ಅಥವಾ ತೆಗೆದುಕೊಂಡು ಆರಿಸಿ ಬರಲಿಕ್ಕೂ ಸಹ ಸಾಧ್ಯವಿಲ್ಲ. ಆದರೆ ಅವರ ನಡವಳಿಕೆಯಿಂದ ಅವರ ಗುಣಗಳಿಂದ, ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಅವರನ್ನು ಆ ಭಾಗದ ಜನ ಮೆಚ್ಚಿ ಅವರನ್ನು ಮೂರು ಬಾರಿ ಆರಿಸಿದ್ದಾರೆ. ಅಂಥಾ ಒಬ್ಬ ಧೀಮಂತ ನಾಯಕರು, ಡಾಕ್ಟರು ನಮ್ಮ ಭಾಗದಿಂದ ಆಗಿಹೋಗಿದ್ದಾರೆ. ಅವರದೂ ಕೂಡ ಪ್ರಿಮೆಚ್ಯೂರ್ ಡೆತ್, ಇದರಲ್ಲಿ ಯಾವುದೇ ಸಂಶಯವೂ ಇಲ್ಲ, ಅವರಿಗೆ ಇನ್ನೂ ಬದುಕತಕ್ಕಂಥ ವಯಸ್ಸಿತ್ತು. ಕ್ಯಾನ್ಸರ್ ರೋಗದಿಂದ ಅವರು ಬಳಲುತ್ತಿದ್ದಾಗ ಈ ಘಟನೆ ಸಂಭವಿಸಿ ಅವರು ನಮ್ಮಿಂದ ಅಗಲಿಹೋಗಿದ್ದಾರೆ.

ಡಾ. ಹೆಚ್.ಎಲ್. ನಾಗೇಗೌಡರ ಬಗ್ಗೆ ಅನೇಕ ಜನ ಮಾತನಾಡಿದ್ದಾರೆ. ನಾವೂ ಸಹ ಚುನಾವಣೆಯ ಸಂದರ್ಭದಲ್ಲಿ ಆ ಕಡೆ ಹೋದಾಗ ಅವರ ಜನಪದ ಸಾಹಿತ್ಯ ಅಕಾಡೆಮಿಗೆ ಹೋಗಿ ನಾವೆಲ್ಲರೂ ಅಲ್ಲೇ ಊಟ ಮಾಡಿಕೊಂಡು ಮುಂದಕ್ಕೆ ಹೋದೆವು. ಆ ಸಂದರ್ಭದಲ್ಲಿ ಅವರು ಆ ಸಂಸ್ಥೆಗೆ ಇನ್ನೂ ಹೆಚ್ಚಿನ ಶಕ್ತಿಯನ್ನು ಕೊಡಬೇಕೆಂದು, ಈ ಬಗ್ಗೆ ಅನೇಕ ಸಾರಿ ಮನವಿಗಳನ್ನು ಸರ್ಕಾರದ ಮುಂದೆ ಇಟ್ಟಿದ್ದರೂ ಕೂಡ ಸರ್ಕಾರ ಅದನ್ನು ಮನ್ನಿಸುತ್ತಿಲ್ಲ. ಎಲ್ಲೆಲ್ಲಿ ನಮಗೆ ಸಿಬ್ಬಂದಿಯ ಅವಶ್ಯಕತೆ ಇದೆ ಆ ಸೌಲಭ್ಯ ಕೂಡ ನಮಗೆ ಸಿಕ್ಕಿಲ್ಲ. ಹಾಗಾಗಿ ದಯವಿಟ್ಟು ಇದನ್ನು ಉಳಿಸಿ ಬೆಳೆಸಬೇಕು ಎಂದು ಅವರು ಈ ಬಗ್ಗೆ ಮನವಿಗಳನ್ನು ಮಾಡಿಕೊಂಡಿದ್ದಾರೆ. ಅವರ ನೆನಪನ್ನು ಮಾಡಿಕೊಳ್ಳಬೇಕಾದರೆ ಅವರ ಸಂಸ್ಥೆಯನ್ನು ಉಳಿಸುವುದು ಬಹಳ ಮುಖ್ಯ. ಹಾಗಾಗಿ ಸರ್ಕಾರ ಈ ಕಡೆ ಗಮನ ಕೊಡುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಅವರು ವಿಶೇಷವಾಗಿ ಲೇಬರ್ ಕಮೀಷನರ್ ಆಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಅನೇಕ ಸಾರಿ ಅವರು ಕಾಂಪ್ರಮೈಸ್ ಮಾಡುವುದೇ ಜಾಸ್ತಿ, ಕನ್ಸಿಲೇಷನ್ ಮಾಡುವುದು, ಕರೆಯುವುದು, ಕಾಂಪ್ರಮೈಸ್ ಮಾಡುವುದು, ಲೇಬರ್ ಹಾಗೂ ಮ್ಯಾನೇಜ್ಮೆಂಟ್‌ಗೆ ಒಳ್ಳೆಯ ರಿಲೇಷನ್ ಇರಬೇಕೆಂದು ಅವರು ಅನೇಕ ಸಾರಿ ಪ್ರಯತ್ನವನ್ನು ಮಾಡಿದ್ದಾರೆ. ಏಕೆಂದರೆ ನಾವು 1968 ರಲ್ಲಿ ಎಂ.ಎಸ್.ಎಂ.ಎಲ್. ಎಜುಕೇಷನ್ ಮಾಡಿದಾಗ, ನನಗೆ ಕಾಂತಾರವರನ್ನು, ನಮೋಶಿಯವರನ್ನು ಕರೆಸಿ ಒಂದು ಕಡೆ ಸೇರಿಸಿ ನೀವು ಲೇಬರ್ ಯೂನಿಯನ್‌ನವರೇ ಕಚ್ಚಾಟ ಮಾಡಿದರೆ ಆ ಲೇಬರ್ ಪ್ರಾಬ್ಲಮ್ ಹೇಗೆ ಪರಿಹಾರ ಮಾಡುವಿರಿ ಎಂದು ಹೇಳಿ, ಸಾಕಷ್ಟು ಪ್ರಯತ್ನವನ್ನು ಮಾಡಿ ಒಂದು ವೇಜ್‌ಬೋರ್ಡ್ ಅನ್ನು ಫಿಕ್ಸ್ ಮಾಡಿ ಆ ಒಂದು ಕೆಲಸವನ್ನು ಮಾಡಿದ್ದರು. ಅಂಥ ಒಬ್ಬ ಸಾಹಿತಿಯೂ ಹೌದು, ಆಡಳಿತಗಾರರೂ ಹೌದು, ಒಬ್ಬ ಒಳ್ಳೆಯ ವ್ಯಕ್ತಿ ಇವತ್ತು ನಮ್ಮಿಂದ ದೂರವಾಗಿದ್ದಾರೆ. ಅವರ ಕನ್ನಡ ಸಾಹಿತ್ಯ ಅಕಾಡೆಮಿ,

ಹಂಪಿ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ, ಪಂಪ ಪ್ರಶಸ್ತಿ ಇವೆಲ್ಲವೂ ಕೂಡ ಅವರಿಗೆ ದೊರೆತಿದೆ. ಆದರೆ ಇವೆಲ್ಲಕ್ಕಿಂತ ಮುಖ್ಯವಾದುದೇನೆಂದರೆ ಅವರು ಕಟ್ಟಿದಂತಹ ಸಂಸ್ಥೆಯನ್ನು ಉಳಿಸಿಕೊಂಡು ಹೋಗುವುದು ಬಹಳ ಮುಖ್ಯ, ಅದರ ಕಡೆಗೆ ನಾವೆಲ್ಲರೂ ಕೂಡ ಗಮನವನ್ನು ಕೊಡಬೇಕಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಚ್ಛಿಸುತ್ತೇನೆ.

ಡಾ: ಎಂ.ಸಿ. ಮೋದಿಯವರು, ಇವತ್ತು ಅಧ್ಯಕ್ಷರೆ ಏನಾಗಿದೆಯೆಂದರೆ, ಸಾಕಷ್ಟು ಜನ ನಮಗೆ ಪರಿಚಯವಿರುವುದರಿಂದ ಅವರ ಬಗ್ಗೆ ಹೇಳಬೇಕಾದ ಪರಿಸ್ಥಿತಿ ಬಂದಿದೆ, ಡಾ: ಎಂ.ಸಿ. ಮೋದಿಯವರು ಪರ್ಸನಲಿ ನನಗೆ ಗೊತ್ತು. ಇವರನ್ನು ಗುಲ್ಬರ್ಗಾ ಜಿಲ್ಲೆಗೆ ಕರೆದುಕೊಂಡು ಹೋಗಿ ನಾನು ಅನೇಕ ಕ್ಯಾಂಪ್‌ಗಳನ್ನು ಮಾಡಿಸಿದ್ದೇನೆ. ಅದರಲ್ಲೂ ವಿಶೇಷವಾಗಿ 1972–73, 1973–74 ಈ ಪೀರಿಯೆಡ್‌ನಲ್ಲಿ ನಮ್ಮ ಗುಲ್ಬರ್ಗಾ, ಮಹಾರಾಷ್ಟ್ರದಲ್ಲಿ ಸೊಲ್ಲಾಪುರ, ಕೊಲ್ಲಾಪುರ, ಉದ್ಗೀರ್, ಉಸ್ಮಾನಬಾದ್ ಈ ಭಾಗಗಳಲ್ಲಿ ಹೆಚ್ಚಿನ ಆಪರೇಷನ್ಸ್ ಮಾಡಿ ಅವರು ಯಶಸ್ವಿಯಾದರು. ಆಗಲೇ ನಮ್ಮ ಡೆಪ್ಯುಟಿ ಚೀಫ್ ಮಿನಿಸ್ಟರ್ ಶ್ರೀ ಎಂ.ಪಿ. ಪ್ರಕಾಶ್‌ರವರು ಹೇಳುತ್ತಿದ್ದಂತೆ ಗಿನ್ನಿಸ್ ದಾಖಲೆ ಮಾಡುವಷ್ಟು ಅವರು ದಾಖಲೆಯನ್ನು ಮಾಡಿದ್ದಾರೆ. ಮೋದಿಯವರು ಬರೇ ಕ್ಯಾಟರಾಕ್ಟ್ ತೆಗೆದು ಬಿಟ್ಟುಬಿಡುತ್ತಾರೆ, ಬಾಕಿ ಚಿಕಿತ್ಸೆಯನ್ನೇನು ಮಾಡುವುದಿಲ್ಲ. ಪೋಸ್ಟ್ ಆಪರೇಷನ್‌ನಲ್ಲಿ ಇಂಟರೆಸ್ಟ್ ತೆಗೆದುಕೊಳ್ಳುವುದಿಲ್ಲ. ಹೀಗೆಲ್ಲಾ ಕೆಲವರು ರೆಗ್ಯುಲರ್ ಪ್ರಾಕ್ಟೀಸ್ ಮಾಡುವವರು, ಫೀಸ್ ಹೆಚ್ಚಿಗೆ ತೆಗೆದುಕೊಳ್ಳುವವರು ಈ ರೀತಿ ಆಪಾದನೆಯನ್ನು ಮಾಡುತ್ತಿದ್ದರು. ಏಕೆಂದರೆ ಡಾ: ಮೋದಿಯವರು ಹಳ್ಳಿ ಹಳ್ಳಿಗಳಿಗೆ ಹೋಗಿ ಅಲ್ಲೇ ಇದ್ದು, ಶಾಲೆಗಳಲ್ಲಿ ಕ್ಯಾಂಪ್ ಮಾಡಿ, ಅನೇಕ ಜನರಿಂದ, ಎನ್.ಜಿ.ಓಸ್‌ನಿಂದ ಹಣ ಸಂಗ್ರಹಿಸಿ ಅವರಿಗೆ ಊಟ ಹಾಕಿಸಿ ಚಿಕಿತ್ಸೆಯನ್ನು ನೀಡುತ್ತಿದ್ದರು. ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ಮಾಡುತ್ತಿದ್ದರು. ಕಣ್ಣಿನ ಡಾಕ್ಟರ್‌ಗಳ ಆದಿಯಾಗಿ ಇದನ್ನು ಸಹಿಸದ ಅನೇಕ ಜನರು ಟೀಕೆ ಟಿಪ್ಪಣಿಯನ್ನೂ ಸಹ ಮಾಡುತ್ತಿದ್ದರು. ಇಂತವೆಲ್ಲ ಆಗಿ ಡಾಕ್ಟರ್ ಎಂ.ಸಿ. ಮೋದಿಯವರು ಜನರಿಗೆ ಮತ್ತು ವಿಶೇಷವಾಗಿ ಬಡವರಿಗೆ ಮಾಡಿದಂತಹ ಸೇವೆಯನ್ನು ನಾವ್ಯಾರೂ ಕೂಡ ಮರೆಯುವಂತಿಲ್ಲ ದಾವಣಗೆರೆ ಭಾಗದಿಂದ ಬಂದಂತಹ ಒಳ್ಳೆಯ ಡಾಕ್ಟರ್ ಇವತ್ತು ವಿಶ್ವದಲ್ಲಿಯೇ ಗಿನ್ನೀಸ್ ದಾಖಲೆ ಮಾಡಿ ತನ್ನದೇ ಅದಂತಹ ಹೆಸರನ್ನು ಇಟ್ಟಂತಹ ವ್ಯಕ್ತಿ. ಅವರಿಗೆ ನಿಜವಾಗಿಯು ನಾವೆಲ್ಲರೂ ಕೂಡ ನಮನವನ್ನು ಸಲ್ಲಿಸುತ್ತೇವೆ. ಆಮೇಲೆ ಶ್ರೀಮತಿ ಶಾಂತಾದೇವಿ ಮಾಳವಾಡ ಇವರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈಗಾಗಲೇ ನಮ್ಮ ಮಾನ್ಯ ಎಂ. ಪಿ. ಪ್ರಕಾಶ್‌ರವರು ಕೊಟ್ಟಿದ್ದಾರೆ. ಪುನಃ ನಾನು ಆ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆಮೇಲೆ ಡಾ: ಎಲ್.ಆರ್. ಹೆಗಡೆಯವರು ಆಮೇಲೆ ಡಾ: ಡಿ ಎಂ ನಂಜುಂಡಪ್ಪನವರು, ಅವರು ನನಗೆ ಟೀಚರ್ ಆಗಿದ್ದರು. ನನ್ನದು ಮೇಜರ್ ಎಕನಾಮಿಕ್ಸ್, ಅವರು ಆಗ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಆಗಿದ್ದರು. ಆದರೆ ಇಲ್ಲಿ ನಮ್ಮ ಹಿಂದುಳಿದಂತಹ ಭಾಗಕ್ಕೆ ಲಿಬರಲ್ ಆಗಿ ದುಡ್ಡು ಕೊಡಿ ಎಂದು ಹೇಳಿ ಸಾಕಷ್ಟು ಅಧ್ಯಯನ ಮಾಡಿ ನಮಗೆ ಒಳ್ಳೆಯ ರಿಪೋರ್ಟ್ ಕೊಟ್ಟಿದ್ದಾರೆ. ಅದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಅಂದರೆ ಹಿಂದುಳಿದಂತಹ ತಾಲ್ಲೂಕುಗಳು ಎಷ್ಟು? ಮೋಸ್ಟ್ ಬ್ಯಾಕ್‌ವರ್ಡ್ ತಾಲ್ಲೂಕುಗಳು ಎಷ್ಟು ಮತ್ತು ಇದ್ದಿದ್ದರಲ್ಲಿಯೇ ಉತ್ತಮವಾದಂತಹ ತಾಲ್ಲೂಕುಗಳು ಯಾವುವು ಎಂಬುದು ಕೂಡ ಇತ್ತು. 1976 ರಲ್ಲಿ ನಾನು ಮೊದಲನೇ ಸಲ ಮಂತ್ರಿಯಾಗಿದ್ದಾಗ ಅವರು ಇಲ್ಲಿ ಪ್ಲಾನಿಂಗ್ ಸೆಕ್ರೆಟರಿಯಾಗಿದ್ದರು. ನಾನು ಅವರಿಗೆ ಆಗ ನೆನಪು ಮಾಡಿದೆ. ತಾವು

ನಮಗೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಇದ್ದಿರಿ. ನನ್ನದು ಎಕಾನಮಿಕ್ಸ್ ಮೇಜರ್ ಸಬ್ಜೆಕ್ಟ್ ಇತ್ತು. ತಾವು ಎಕನಾಮಿಕ್ಸ್ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಇದ್ದುದರಿಂದ ನನಗೆ ಎರಡು ಸಾರಿ 59–59 ಮಾರ್ಕ್ಸ್ ಕೊಟ್ಟಿರಿ. ಇನ್ನೊಂದು ಮಾರ್ಕ್ಸ್ ಕೊಟ್ಟಿದ್ದರೆ ನನಗೆ 60 ಮಾರ್ಕ್ಸ್ ಬರುತ್ತಿತ್ತು. ನಾನು ಫಸ್ಟ್ ಕ್ಲಾಸ್ ಬರುತ್ತಿದ್ದೆ ಅಂದಾಗ ಅವರು ನಗುತ್ತಿದ್ದರು. ಇಲ್ಲಾ ನನಗೇನು ಅಂತಹ ಪ್ರಿಜುಡ್ಯೂಸ್ ಇರುವುದಿಲ್ಲ. ಅದು ಏನೋ ಆಗಿರಬಹುದು ಎಂದು ಹೇಳಿ ಹೇಳಿದರು. ನಾನು ಏಕೆ ಈ ಮಾತು ಹೇಳುತ್ತೇನೆಂದರೆ ಆ ಕಾಲದಲ್ಲಿ ಶಿಕ್ಷಕರು ಇದ್ದಂತಹವರನ್ನು ನಾನೇ ಗುರುತಿಸಿಕೊಂಡೆ. ಆಮೇಲೆ ನಾನು ಎಕನಾಮಿಕ್ಸ್ ಮೇಜರ್‌ನಲ್ಲಿ ಓದಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಗುವುದೆಲ್ಲಾ ಒಳ್ಳೆಯದ್ದಕ್ಕೆ. 60 ಮಾರ್ಕ್ಸ್ ಕೊಟ್ಟಿದ್ದರೆ ಬೇರೆ ಯಾವುದಾದರೂ ಕಡೆ ಹೋಗುತ್ತಿದ್ದಿರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏಕೆಂದರೆ ನಾನು ಏನು ಹೇಳುತ್ತಿದ್ದೇನೆಂದರೆ, ಏನೇ ಇದ್ದರೂ ಅವರು ಗ್ರ್ಯಾಂಟ್ ರಿಲೀಜ್ ಮಾಡುವುದರಲ್ಲಿ, ಮಾರ್ಕ್ಸ್ ಕೊಡುವುದರಲ್ಲಿ ಮಾತ್ರ ಮೇಜರ್ ಇದ್ದರು. ಏನೇ ಇರಲಿ ಒಂದು ಒಳ್ಳೆಯ ಮತ್ತು ಚೆನ್ನಾಗಿ ವಿದ್ಯಾಭ್ಯಾಸ ಮಾಡತಕ್ಕಂಥ ವಿದ್ಯಾರ್ಥಿಗಳಿಗೆ ಎನ್‌ಕ್ರೇಜ್ ಮಾಡತಕ್ಕಂಥ ಒಬ್ಬ ವ್ಯಕ್ತಿ. ಮತ್ತು ತನ್ನದೇ ಆದಂತಹ ಛಾಪನ್ನು ಆರ್ಥಿಕ ಇಲಾಖೆಯಲ್ಲಿಯೇ ಆಗಲಿ, ಅಥವಾ ಒಂದು ಅರ್ಥಶಾಸ್ತ್ರದ ಮೇಲೆಯೇ ಆಗಲಿ ತನ್ನ ಒಂದು ಹಿಡಿತವನ್ನು ಇಟ್ಟುಕೊಂಡಂತಹ ಒಬ್ಬ ಎಕಾನಮಿಸ್ಟ್. ಅಂತಹವರು ಬಹಳ ಕಡಿಮೆ. ಅವರಿಗೆ ಪ್ರಥಮವಾಗಿ ಗುರುತಿಸಿದ್ದೇ ದೇವರಾಜ ಅರಸುರವರು. ಅವರು ವಿಧಾನ ಸೌಧಕ್ಕೆ ಬಂದಿದ್ದರು. ಅವರು ಹೇಳಿದರು ಇಂತಹ ಒಳ್ಳೆಯ ಅರ್ಥ ಶಾಸ್ತ್ರಜ್ಞ ಬೇಕು, ಅವರ ಉಪಯೋಗವನ್ನು ನಾವು ಮಾಡಿಕೊಳ್ಳಬೇಕು ಎಂದು. ಮಧ್ಯೆದಲ್ಲಿ ಸ್ವಲ್ಪ ಬೇಜಾರು ಬಂದು ಪುನಃ ಅವರು ವೈಸ್ ಚಾನ್ಸಲರ್ ಆಗಿ ಹೋದರು. ಪುನಃ ಅವರು ಅಲ್ಲಿಗೆ ಹೋದರೂ ಕೂಡ ಅವರ ಪೀರಿಯಡ್ ಮುಗಿದ ಮೇಲೆ ಪುನಃ ಇಲ್ಲಿಗೆ ಕರೆಸಿಕೊಂಡು ಅವರನ್ನು ಮುಂದುವರಿಸಿಕೊಂಡು ಹೋಗಲಾಯಿತು. ಅಂದರೆ ಇಂತಹ ಅನೇಕ ನಾಯಕರು ನಮಗೆ ಹತ್ತಿರವಿದ್ದಾಗ ಗೊತ್ತಾಗುವುದಿಲ್ಲ. ಅವರು ಹೋದ ಮೇಲೆಯೇ ನಮಗೆ ಗೊತ್ತಾಗುವುದು. ಅವರು ಎಷ್ಟು ಕಷ್ಟಪಟ್ಟು ರಿಪೋರ್ಟ್‌ಗಳನ್ನು ತಯಾರು ಮಾಡುತ್ತಿದ್ದರು? ಅವರು ಎಷ್ಟು ಕಷ್ಟಪಟ್ಟು ಚೆನ್ನಾಗಿ ಮಾರ್ಗದರ್ಶನ ಮಾಡುತ್ತಿದ್ದರು ಸರ್ಕಾರಕ್ಕೆ ಆಗಲಿ, ಇವರಿಗೆ ಆಗಲಿ ಅವರದ್ದೇ ಆದ ಸಲಹೆಗಳನ್ನು ಕೊಡತಕ್ಕಂಥಾದ್ದು ಕೂಡ ಇತ್ತು. ಇಂತಹ ಒಬ್ಬ ನಾಯಕರು ಇವತ್ತು ನಮ್ಮ ಮಧ್ಯೆದಲ್ಲಿ ಇಲ್ಲ. ಇಂತಹ ಅರ್ಥಶಾಸ್ತ್ರಜ್ಞ ನಮ್ಮ ಮಧ್ಯೆದಲ್ಲಿ ಇಲ್ಲ. ಇವತ್ತು ನಾವು ಅವರನ್ನು ಕಳೆದುಕೊಂಡಿದ್ದೇವೆ. ನಿಜವಾಗಿಯು ಅವರ ಆತ್ಮಕ್ಕೆ ಶಾಂತಿ ಸಿಗಬೇಕು ಎನ್ನತಕ್ಕಂಥ ಇಚ್ಛೆ ನಮಗೆಲ್ಲರಿಗೂ ಇದ್ದರೆ ಅವರು ಕೊಟ್ಟಂತಹ ರಿಪೋರ್ಟ್‌ನ್ನು ಇನ್‌ಟೋಟೋ ನಾವು ಇಂಪ್ಲಿಮೆಂಟ್ ಮಾಡಬೇಕು. ಆಗಲೇ ಅವರ ಹೆಸರು ಅಜರಾಮರವಾಗಿ ಉಳಿಯುತ್ತದೆ. ಬೇರೆ ಏನೂ ಬೇಕಾಗಿಲ್ಲ. ಅವರ ಹೆಸರಿನಲ್ಲಿ ನೀವು ವಿಶ್ವವಿದ್ಯಾನಿಲಯ ಮಾಡಿ, ಅದು ಮಾಡಿ, ಇದು ಮಾಡಿ ಎಂದು ಹೇಳುವುದಕ್ಕಿಂತಲೂ ಅವರು ಕೊಟ್ಟ ವರದಿಯನ್ನು ಚಾಚು ತಪ್ಪದೇ ಇನ್‌ಟೋಟೋ ನಾವು ಇಂಪ್ಲಿಮೆಂಟ್ ಮಾಡಿದರೆ ಖಂಡಿತವಾಗಿ ಇಡೀ ಕರ್ನಾಟಕ ರಾಜ್ಯಕ್ಕೆ ಅನುಕೂಲವಾಗುತ್ತದೆ, ಅವರ ವರದಿಯಲ್ಲಿ ಕೇವಲ ಹೈದ್ರಾಬಾದ್ ಕರ್ನಾಟಕ ಎಂದು ಇಲ್ಲ. ಬಾಂಬೇ ಕರ್ನಾಟಕ ಎಂದು ಇಲ್ಲ. ಅಥವಾ ಓಲ್ಡ್ ಮೈಸೂರು ಎನ್ನತಕ್ಕಂಥಾದ್ದು ಇಲ್ಲ. ಯಾವ

ಯಾವ ತಾಲ್ಲೂಕುಗಳು ಆರ್ಥಿಕವಾಗಿ ಹಿಂದುಳಿದಿವೆ, ಅಂತಹ ಎಲ್ಲಾ ತಾಲ್ಲೂಕುಗಳಿಗೆ ಸಹಾಯ ಮಾಡಬೇಕು ಎಂದು ಹೇಳಿ ಕೆಲವು ಪ್ಯಾರಾಮೀಟರ್ಸ್‌ನ್ನು ಇಟ್ಟುಕೊಂಡು ಆ ಒಂದು ಆಧಾರದ ಮೇಲೆ ಅವರು ರಿಪೋರ್ಟ್‌ನ್ನು ತಯಾರು ಮಾಡಿದ್ದಾರೆ. ಅದಕ್ಕೆ ಈಗಾಗಲೇ ಚಾಲನೆ ಸಿಕ್ಕಿದೆ. ಆದರೂ ಹೆಚ್ಚಿನ ರೀತಿಯಲ್ಲಿ ಚಾಲನೆ ಸಿಕ್ಕಿ ಅವರು ಹೇಳಿದಂತಹ ಹಣ ಬಿಡುಗಡೆ ಮಾಡತಕ್ಕಂಥಾದ್ದು ಆಗಬೇಕು ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಹೇಳಿಕೊಳ್ಳುತ್ತೇನೆ. ಅವರು ಅತ್ಯಂತ ಬಡತನದಿಂದ ಮೇಲೆ ಬಂದಂತಹ ಒಬ್ಬ ವ್ಯಕ್ತಿ. ಇದೆಲ್ಲವೂ ಕೂಡ ಅವರ ಹಿಂದೆ ಇತ್ತು. ಎರಡನೆಯದಾಗಿ ಮೈಸೂರು ಮಠ್‌ರವರು, ತಮಗೆ ಗೊತ್ತಿದೆ. ಪತ್ರಕರ್ತರೂ ಇವರೆಲ್ಲರಿಗೂ ಪರಿಚಯ ಇದ್ದರು. ಇಲ್ಲಿ ಯಾವಾಗಲೂ ಕೂಡ ಅವರಾಗಲೀ, ರಾಜಾರಾವ್ ಆಗಲಿ ಇವರೆಲ್ಲರೂ ಕೂಡ ನಮ್ಮ ಜೊತೆಯಲ್ಲಿ ಸುಮಾರು 25–30 ವರ್ಷ ನಾವಿಲ್ಲಿ ಕಂಡಿದ್ದೇವೆ. ನೋಡಿದ್ದೇವೆ ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದೇವೆ. ಅಂತಹ ಮೈಸೂರು ಮಠ್‌ರವರು, ರಾಜಾರಾವ್‌ರವರು ಇವರೆಲ್ಲರಿಗೂ ಕೂಡ ನನ್ನ ತುಂಬು ಹೃದಯದ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತೇನೆ. ಅದೇ ರೀತಿಯಾಗಿ ಶ್ರೀ ವಜ್ರಮುನಿಯವರು ಇವರು ಕೂಡ ತಮ್ಮದೇ ಆದಂತಹ ಛಾಪನ್ನು ವಿಶೇಷವಾಗಿ ಈ ನಮ್ಮ ಚಿತ್ರರಂಗದಲ್ಲಿ ಫಿಲಿಂನಲ್ಲಿ ಇಟ್ಟುಕೊಂಡಿದ್ದರು. ಬಹುಶಃ ಅವರು ಮಾಡಿದಷ್ಟು ಸಿನಿಮಾಗಳು ಬೇರೆ ಯಾರೂ ಕೂಡ ಮಾಡಿಲ್ಲ. ವಿಲ್ಲನ್ ಆಗಿ ಆಕ್ಟ್ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಸುಮಾರು 300 ಕ್ಕಿಂತಲೂ ಹೆಚ್ಚಿನ ಚಿತ್ರಗಳಲ್ಲಿ ಅವರು ನಟಿಸಿದ್ದಾರೆ. ಅಂತಹ ಒಬ್ಬ ಧೀಮಂತ ನಟ, ಅವರು ಇವತ್ತು ನಮ್ಮ ಜೊತೆಯಲ್ಲಿ ಇಲ್ಲ. ಅದೇ ರೀತಿಯಾಗಿ ಶ್ರೀ ಕೃಷ್ಣಸ್ವಾಮಿಯವರು ಅವರು ಕೂಡ ಒಬ್ಬ ಚಿತ್ರರಂಗದ ನಿರ್ದೇಶಕರು. ಪ್ರೊಫೆಸರ್ ಸಿ. ಜಿ. ಕೃಷ್ಣಸ್ವಾಮಿಯವರು ಬಂಡಾಯ ಸಾಹಿತ್ಯ ಚಳುವಳಿಯಲ್ಲಿ ಹೆಚ್ಚಿನ ಆಸಕ್ತಿಯನ್ನು ಇಟ್ಟುಕೊಂಡಿದ್ದಂತಹ ಒಬ್ಬ ವ್ಯಕ್ತಿ. ಅವರನ್ನೂ ಕೂಡ ನಾವು ಕಳೆದುಕೊಂಡಿದ್ದೇವೆ. ಅನೇಕ ಹಿರಿಯ ಸಾಹಿತಿಗಳು, ರಾಷ್ಟ್ರದ ಮುಖಂಡರುಗಳನ್ನು ಈ ಒಂದು ಮೂರು ನಾಲ್ಕು ತಿಂಗಳ ಅವಧಿಯಲ್ಲಿಯೇ ನಾವು ಕಳೆದುಕೊಂಡಿದ್ದೇವೆ. ಬಹುಶಃ ಈ ರಾಜ್ಯಕ್ಕೆ ರಾಷ್ಟ್ರಕ್ಕೆ ಇವತ್ತು ತುಂಬಲಾರದಷ್ಟು ನಷ್ಟ ಆಗಿದೆ. ಅವರ ಕುಟುಂಬದವರು ಕೂಡ ಇವತ್ತು ಏನು ದುಃಖದಲ್ಲಿದ್ದಾರೆ ಆ ಒಂದು ದುಃಖವನ್ನು ಸಹಿಸತಕ್ಕಂಥ ಶಕ್ತಿ ಅವರಿಗೆ ಸಿಗಲಿ, ಭಗವಂತ ಕೊಡಲಿ ಎಂದು ನಾನು ಈ ಸಂದರ್ಭದಲ್ಲಿ ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಹಣಕಾಸು ಮತ್ತು ಕೈಗಾರಿಕಾ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ರಾಷ್ಟ್ರದ ಮತ್ತು ರಾಜ್ಯದ ಅನೇಕ ಗಣ್ಯ ವ್ಯಕ್ತಿಗಳನ್ನು ನಾವು ಕಳೆದುಕೊಂಡಿರತಕ್ಕಂಥ ಈ ಸಂದರ್ಭದಲ್ಲಿ ಮಾನ್ಯ ಸಭಾಧ್ಯಕ್ಷರು ಮತ್ತು ತಾವು ಮಂಡಿಸಿರತಕ್ಕಂಥ ಈ ಸಂತಾಪ ಸೂಚನೆಗೆ ನನ್ನ ಬೆಂಬಲವನ್ನು ವ್ಯಕ್ತ ಮಾಡಿ ಮೃತರ ಆತ್ಮಗಳಿಗೆ ಶಾಂತಿಯನ್ನು ಕೋರಿ ಅವರು ಕುಟುಂಬ ವರ್ಗದವರಿಗೆ ಭಗವಂತ ಈ ದುಃಖವನ್ನು ಭರಿಸತಕ್ಕಂಥ ಶಕ್ತಿ ಕೊಡಲಿ ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ. ನನಗೆ ಕೆಲವು ಗಣ್ಯ ವ್ಯಕ್ತಿಗಳ ಕೈ ಕೆಳಗಡೆ ಕೆಲಸ ಮಾಡತಕ್ಕಂಥ ಒಂದು ಸಂದರ್ಭ ಒದಗಿತ್ತು. ಮಾನ್ಯ ಕೆ. ಆರ್. ನಾರಾಯಣನ್‌ರವರ ಕೈ ಕೆಳಗಡೆ ಮತ್ತು ಇನ್ನೂ ಅನೇಕ ಮುಖಂಡರುಗಳ ಕೈ ಕೆಳಗಡೆ ಕೆಲಸ ಮಾಡತಕ್ಕಂಥ ಭಾಗ್ಯ ನನ್ನ ಪಾಲಿಗೆ

ಸಿಕ್ಕಿತ್ತು. ಅದರ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ರಾಷ್ಟ್ರಪತಿಗಳಾಗಿ ಮಾನ್ಯ ಕೆ. ಆರ್. ನಾರಾಯಣನ್ ರವರು ಕರ್ನಾಟಕ ರಾಜ್ಯಕ್ಕೆ ಬಂದಂತಹ ಸಂದರ್ಭದಲ್ಲಿ ಮತ್ತು ಅವರು ಉಪರಾಷ್ಟ್ರಪತಿಗಳಾಗಿ ಕರ್ನಾಟಕ ರಾಜ್ಯಕ್ಕೆ ಬಂದಂತಹ ಸಂದರ್ಭದಲ್ಲಿ ನಾನು ಮಿನಿಸ್ಟರ್ ಇನ್‌ವೈಟಿಂಗ್ ಎಂದು ಇರಬೇಕಾದ ಒಂದು ಪ್ರಸಂಗ ಒದಗಿತ್ತು. ಅಂದರೆ ರಾಷ್ಟ್ರಪತಿಗಳು ಬಂದಂತಹ ಸಂದರ್ಭದಲ್ಲಿ ರಾಜ್ಯಪಾಲರು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಅವರ ಜೊತೆಯಲ್ಲಿರಬೇಕಾಗುತ್ತದೆ. ಅವರು ಇಲ್ಲದೇ ಇದ್ದಂತಹ ಸಂದರ್ಭದಲ್ಲಿ ಯಾರಾದರೂ ಮಂತ್ರಿಗಳನ್ನು ಮಿನಿಸ್ಟರ್ ಇನ್‌ವೈಟಿಂಗ್ ಎಂದು ಹೇಳಿ ಮಾಡತಕ್ಕಂಥ ಒಂದು ಸಂಪ್ರದಾಯ ನಮ್ಮಲ್ಲಿ ಇದೆ. ಶ್ರೀ ಕೆ.ಆರ್. ನಾರಾಯಣ್‌ರವರನ್ನು ನಾನು ಕರ್ನಾಟಕ ರಾಜ್ಯದ ಜನತೆಯ ಪರವಾಗಿ, ರಾಜ್ಯ ಸರ್ಕಾರದ ಪರವಾಗಿ ಅವತ್ತು ಅವರ ಜೊತೆ ಮೂರ್‍ನಾಲ್ಕು ದಿವಸ ಕಳೆಯುತಕ್ಕಂಥ ಅವಕಾಶ ನನಗೆ ಎರಡು ಭಾರಿ ಸಿಕ್ಕಿತ್ತು. ಅವರು ಈ ರಾಷ್ಟ್ರದ ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿಯವರು ಪರಿಶಿಷ್ಟ ವರ್ಗದವರ ಜನಾಂಗಕ್ಕೆ ಬಂದಿದ್ದರು ಎಂಬುದೊಂದು ಭಾಗ. ಆದರೆ ಈ ರಾಷ್ಟ್ರದ ಅಷ್ಟೇ ಅಲ್ಲ, ಈ ಪ್ರಪಂಚದ ಬಹುದೊಡ್ಡ ಪಾಂಡಿತ್ಯವನ್ನು ಹೊಂದಿದ್ದಂತಹ ಒಬ್ಬ ಮಹಾನ್ ನಾಯಕರಾಗಿದ್ದರು ಎಂಬುದನ್ನು ನಾನು ಬಹಳ ಹೆಮ್ಮೆಯಿಂದ ಸ್ಮರಿಸಿಕೊಳ್ಳುವುದಕ್ಕೆ ನಾನು ಈ ಸಂದರ್ಭದಲ್ಲಿ ಬಯಸುತ್ತೇನೆ. ಈ ರಾಷ್ಟ್ರದ ರಾಜಕಾರಣದಲ್ಲಿ ಬಹಳ ಬದಲಾವಣೆಗಳಾಗುತ್ತಿವೆ, ಆರ್ಥಿಕ ಬದಲಾವಣೆ, ಸಾಮಾಜಿಕ ಕ್ಷೇತ್ರದಲ್ಲಿ ಬದಲಾವಣೆ, ರಾಜಕೀಯ ಕ್ಷೇತ್ರದಲ್ಲು ಕೂಡ ನಾವು ನಿರೀಕ್ಷೆ ಮಾಡದಂತಹ ಬದಲಾವಣೆಗಳಾಗುತ್ತಿವೆ. ಇಂತಹ ಸನ್ನಿವೇಶದಲ್ಲಿ ಮಾನ್ಯ ನಾರಾಯಣ್‌ರಂತಹ ಅತ್ಯಂತ ಶ್ರೇಷ್ಠತೆ ಪರಿಜ್ಞಾನ, ಪ್ರಪಂಚದಲ್ಲಿ ಆಗತಕ್ಕಂಥ ಆಗು ಹೋಗುಗಳು, ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಇದ್ದಂತಹ ಬಿಕ್ಕಟ್ಟುಗಳ ಬಗ್ಗೆ ಅವರಿಗಿದ್ದಂತಹ ಆಳವಾದ ಜ್ಞಾನ ಈ ದೇಶದ ದೊಡ್ಡ ಸಂಪತ್ತೆಂದು ನಾನು ತಿಳಿದುಕೊಂಡಿದ್ದೇನೆ. ಏನು ಡಾ: ಅಬ್ದುಲ್ ಕಲಾಂರವರನ್ನು ಕರೆಯಿಸಿ ತಾವು ಮತ್ತು ವಿಧಾನಪರಿಷತ್ತಿನ ಸಭಾಪತಿಗಳು, ಮುಂದಿನ ಇಪ್ಪತ್ತು ವರ್ಷಗಳ ಕಾಲ ಕರ್ನಾಟಕದ ಅಭಿವೃದ್ಧಿ ಏನಾಗಬೇಕು ಎಂದು ಭಾಷಣ ಮಾಡಿಸಿದ್ದೀರಿ. ನಾವು ಹಣಕಾಸಿನ ಮಂತ್ರಿಯಾಗಿ ಏನು ಬಜೆಟ್ ಅನ್ನು ಮಂಡನೆ ಮಾಡಬೇಕೆಂದು ಅಂದುಕೊಂಡಿದ್ದೆ ಅಥವಾ ಈಗಲೂ ಸಹಿತ ಅಂದುಕೊಂಡಿದ್ದೇನೆ, ಅದಕ್ಕೆ ಒಂದು ಸ್ಥೂಲ ರೂಪವನ್ನು ಕೊಟ್ಟಂತಹವರು ಮಾನ್ಯ ಕಲಾಂರವರು, ಇವತ್ತು ರಾಷ್ಟ್ರದಲ್ಲಿ ಏನೇ ರಾಜಕೀಯ ಭಿನ್ನಾಭಿಪ್ರಾಯಗಳಿರಬಹುದು. ಏನೇ ವ್ಯತ್ಯಾಸಗಳಿರಬಹುದು. ಆದರೆ ನಾವು ಬಹಳ ಅದೃಷ್ಟವಂತರೆಂದು ನಾನು ತಿಳಿದುಕೊಂಡಿದ್ದೇನೆ. ಮಹಾನ್ ನಾಯಕರುಗಳು ಈ ರಾಷ್ಟ್ರದ ಅಧ್ಯಕ್ಷರುಗಳಾಗಿದ್ದರೆ, ರಾಧಾಕೃಷ್ಣನ್‌ರವರಿಂದ ಹಿಡಿದು, ರಾಜೇಂದ್ರಪ್ರಸಾದ್‌ರವರಿಂದ ಹಿಡಿದು ಇವತ್ತಿನ ಮಹಾನ್ ವಿಜ್ಞಾನಿಗಳು, ನೋಡಿ ಇವತ್ತು ನಾವು ಎಷ್ಟೊಂದು ಸೌಭಾಗ್ಯವಂತರು, ಇಷ್ಟೆಲ್ಲಾ ರಾಜಕೀಯ ಭಿನ್ನಾಭಿಪ್ರಾಯಗಳ ಮಧ್ಯೆ ಒಬ್ಬ ಶ್ರೇಷ್ಠ ವಿಜ್ಞಾನಿ ಈ ದೇಶದ ಅಧ್ಯಕ್ಷರಾಗಿದ್ದಾರೆ, ಒಬ್ಬ ಶ್ರೇಷ್ಠ ಅರ್ಥಶಾಸ್ತ್ರಜ್ಞರು ಈ ದೇಶದ ಪ್ರಧಾನಮಂತ್ರಿಗಳಾಗಿದ್ದಾರೆ. ಇವತ್ತು ಪ್ರಪಂಚದ ಯಾವುದೇ ಮೂಲೆಗೆ ಹೋದರು ಕೂಡ ಇದರ ಬಗ್ಗೆ ಮಾತನಾಡುತ್ತಾರೆ, ಇದನ್ನು ಗುರುತಿಸುತ್ತಾರೆ, ಪ್ರತಿಯೊಬ್ಬ ಭಾರತೀಯನು ಹೆಮ್ಮೆ ಪಡತಕ್ಕಂಥ ವಿಚಾರ. ಅಂತಹ ಶ್ರೇಷ್ಠರ ಸಾಲಿಗೆ ಮಾನ್ಯ ನಾರಾಯಣ್‌ರವರು ಸೇರಿದ್ದರು. ಕರ್ನಾಟಕದ ಬಗ್ಗೆ ಅವರಿಗೆ ಬಹಳ ಅಭಿಮಾನವಿತ್ತು, ಬಹಳ ಗೌರವವಿತ್ತು, ಎಲ್ಲಾ ವರ್ಗದ ಎಲ್ಲಾ ಧರ್ಮದ ಜನರನ್ನು

ಗೌರವಿಸತಕ್ಕಂಥ ಬಹಳ ದೊಡ್ಡ ಹೃದಯವನ್ನು ಹೊಂದಿದ್ದಂತಹ ಒಬ್ಬ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಅದೇ ರೀತಿಯಲ್ಲಿ ಮಾನ್ಯ ಪಿ.ಂ. ಸಯೀದ್‌ರವರು, ಅವರು ನೂರಕ್ಕೆ ನೂರರಷ್ಟು ಕಾಂಗ್ರೆಸ್ಸಿಗರು, ಅವರು ಹುಟ್ಟಿದಾಗಿನಿಂದಲೂ ಕೂಡ ಕೊನೆಯವರೆಗೂ ಕೂಡ ಕಾಂಗ್ರೆಸಿಗರಾಗಿದ್ದರು. ನಾವು ಕಾಂಗ್ರೆಸ್ ಅನ್ನು ವೈಚಾರಿಕವಾಗಿ ವಿರೋಧ ಮಾಡಿರತಕ್ಕಂಥ ಜನ ಆದರೆ ಸಯೀದ್‌ರವರು ಕಾಂಗ್ರೆಸಿಗರಾಗಿದ್ದುಕೊಂಡು ಬಹುಶಃ ಎಲ್ಲಾ ವಿರೋಧ ಪಕ್ಷಗಳಲ್ಲೂ ಕೂಡ ಸ್ನೇಹಿತರನ್ನು ಇಟ್ಟುಕೊಂಡಿರತಕ್ಕಂಥ ಒಬ್ಬ ನಾಯಕರಾಗಿದ್ದರು. ನಮ್ಮ ದೇಶ ಬಹಳ ವಿಸ್ತಾರವಾಗಿದೆ ಎನ್ನುವುದಕ್ಕೆ ಉದಾಹರಣೆ ಸಯೀದ್‌ರವರು. ಅದರ ಜೊತೆಗೆ ಕರ್ನಾಟಕದ ಬಗ್ಗೆ ಕನ್ನಡದ ಬಗ್ಗೆ ಅವರಿಗಿದ್ದ ಅಭಿಮಾನ, ಅನೇಕ ವಿರೋಧ ಪಕ್ಷದ ನಾಯಕರುಗಳು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಮಾನ್ಯ ಪಿ.ಎಂ. ಸಯೀದ್‌ರವರು ನಿಧನರಾದಂಥ ಸಂದರ್ಭದಲ್ಲಿ, ನೀಡಿದ ಹೇಳಿಕೆಯನ್ನು ಕೂಡ ನಾನು ಗಮನಿಸಿದ್ದೇನೆ. ಅವರು ಏನು ಹೇಳಿದರೆಂದರೆ, ಕರ್ನಾಟಕ ಮತ್ತು ಕನ್ನಡಿಗರು ಒಬ್ಬ ನಿಜವಾದ ಒಬ್ಬ ಸ್ನೇಹಿತನನ್ನು ಇವತ್ತು ಕಳೆದುಕೊಂಡಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಸಯೀದ್‌ರವರು ಅಲ್ಪಸಂಖ್ಯಾತ ವರ್ಗದವರು, ಸಯೀದ್‌ರವರು ಓದಿದ್ದು ಕರ್ನಾಟಕದಲ್ಲಿ, ಅವರಿಗೆ ಕನ್ನಡದ ಬಗ್ಗೆ, ಕನ್ನಡನಾಡಿನ ಬಗ್ಗೆ, ರಾಜ್ಯದ ಬಗ್ಗೆ ಇದ್ದಂತಹ ಅಭಿಮಾನ ಅದ್ವಿತೀಯವಾದುದೆಂದು ನಾನು ತಿಳಿದುಕೊಂಡಿದ್ದೇನೆ ಕಾಂಗ್ರೆಸ್ ಪಾರ್ಟಿಗೆ ಅವರು ಬಹಳ ದೊಡ್ಡ ಆಸ್ತಿಯಾಗಿದ್ದರು. ಆದುದರಿಂದಲೆ ಕಾಂಗ್ರೆಸ್‌ನ ಅಧ್ಯಕ್ಷರು ಮತ್ತು ಮಾನ್ಯ ಮಂತ್ರಿಗಳಾದ ಮಾನ್ಯ ಖರ್ಗೆಯವರು ಬಹಳ ಸೂಕ್ತವಾಗಿ ಈ ಮಾತನ್ನು ಹೇಳಿದರು. ಚುನಾವಣೆಯಲ್ಲಿ ಸೋತರೂ ಕೂಡ ಕಾಂಗ್ರೆಸ್‌ನ ವರಿಷ್ಟರು ಅವರನ್ನು ಗುರುತಿಸಿ ಕೇಂದ್ರ ಸರ್ಕಾರದ ಮಂತ್ರಿಯನ್ನಾಗಿ ಮಾಡಿ ಅವರನ್ನು ಉಳಿಸಿಕೊಂಡರೆನ್ನುವ ಮಾತನ್ನು ಅವರು ಹೇಳಿದ್ದಾರೆ. ಇವತ್ತು ಸಯೀದ್‌ರವರ ಸಾವು ಕರ್ನಾಟಕಕ್ಕೆ ದೊಡ್ಡ ನಷ್ಟವೆಂದು ನಾನು ಭಾವಿಸಿಕೊಂಡಿದ್ದೇನೆ.

ಮಾನ್ಯ ಬಿ.ಎಸ್. ಪಾಟೀಲ್‌ರವರು ಕೂಡ, ನಮ್ಮೆಲ್ಲರ ಸ್ನೇಹಿತರಾಗಿದ್ದಂತಹ ಉತ್ತರ ಕರ್ನಾಟಕದ ಅತ್ಯಂತ ಪ್ರಾಮಾಣಿಕ ರಾಜಕಾರಣಿಗಳ ಸಾಲಿಗೆ ಸೇರಿದಂತಹವರು. ಮಾನ್ಯ ಪಿ.ಪಿ. ಹೆಗರೆಯವರು, ನಾವು 1983ರಲ್ಲಿ ಅಲ್ಪಸಂಖ್ಯಾತ ಸರ್ಕಾರವನ್ನು ರಚನೆ ಮಾಡಿದಂತಹ ಸಂದರ್ಭದಲ್ಲಿ ನಮ್ಮ ಪಕ್ಷದಿಂದ ಅವರು ವಿಧಾನಸಭೆಯ ಸದಸ್ಯರಾಗಿದ್ದರು. ಮಾನ್ಯ ಹೆಗರೆಯವರು ನಮ್ಮ ಶಾಸಕಾಂಗ ಪಕ್ಷದ ಉಪನಾಯಕರು ಕೂಡ ಆಗಿದ್ದರು. ಸರಳತೆ, ಸಜ್ಜನಿಕೆ, ರಾಷ್ಟ್ರಾಭಿಮಾನ, ಖಾದಿಯ ಬಗ್ಗೆ ಅವರಿಗಿದ್ದಂತಹ ಪ್ರೀತಿ, ಪ್ರೇಮ, ಇದು ಅದ್ವಿತೀಯವಾದುದೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ವಿ. ಕೃಷ್ಣರಾವ್‌ರವರು, ಇವರು ಕೂಡ ಹುಟ್ಟು ಕಾಂಗ್ರೆಸ್ಸಿಗರು, ಸ್ವಾತಂತ್ರ್ಯ ಹೋರಾಟಗಾರರು, ಆದರೆ ಒಂದು ಮಾತನ್ನು ಕೃಷ್ಣರಾವ್‌ರವರ ಬಗ್ಗೆ ನಾವೆಲ್ಲರು ಒಪ್ಪಬೇಕಾಗುತ್ತದೆ, ಒಂದು ರೀತಿಯಲ್ಲಿ ಅವರು ಅಜಾತಶತೃವಾಗಿದ್ದರು. ಒಬ್ಬ ಪಂಚಾಯಿತಿ ಅಧ್ಯಕ್ಷನಾಗಿ, ಹಲವಾರು ಬಾರಿ ಲೋಕಸಭೆ ಸದಸ್ಯರಾಗಿ, ಕಾಂಗ್ರೆಸ್‌ನ ಅಧ್ಯಕ್ಷರಾಗಿ, ಬಹಳ ಅಭಿಮಾನದಿಂದ ಎಲ್ಲಾ ಪಾರ್ಟಿಯವರನ್ನು ಕೂಡ ಪಕ್ಷಾತೀತವಾಗಿ ನೋಡತಕ್ಕಂಥ ಒಂದು ದೃಷ್ಟಿಕೋನವನ್ನು ಮಾನ್ಯ ಕೃಷ್ಣರಾವ್‌ರವರು ಉಳಿಸಿಕೊಂಡಿದ್ದರು. ಮತ್ತೆ ನಮ್ಮ ಸ್ನೇಹಿತರಾದ ನಾರಾಯಣ್‌ಕುಮಾರ್‌ರವರು, ಇವರು ಹಿಂದುಳಿದ ಬಡಕುಟುಂಬದಿಂದ ಬಂದಂತಹ ಒಬ್ಬ ವ್ಯಕ್ತಿ. ಮಾನ್ಯ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮಾನ್ಯ ಹೆಗಡೆಯವರಿಗೆ, ಮಾನ್ಯ ರಮೇಶ್ ಕುಮಾರ್‌ರವರಿಗೆ, ಮತ್ತು ಮಾನ್ಯ ನಾರಾಯಣ್‌ಕುಮಾರ್‌ರವರಿಗೆ ಬಹಳ ಹತ್ತಿರವಾದ ಒಂದು

ಸ್ನೇಹ. ಮಾನ್ಯ ನಾರಾಯಣ್‌ಕುಮಾರ್‌ರವರು ಮಾನ್ಯ ವಾಟಾಳ್ ನಾಗರಾಜ್‌ರವರ ಜೊತೆಯಲ್ಲಿ ಎಷ್ಟೇ ಜಗಳವಾಡಿದರೂ ವಾಟಾಳ್‌ರವರು ತಮ್ಮ ಮಾನಸಿಕ ಆರೋಗ್ಯವನ್ನು, ದೇಹದ ಆರೋಗ್ಯವನ್ನು ಕಳೆದ ನಲವತ್ತು ವರ್ಷಗಳಿಂದ ಬಹಳ ಚೆನ್ನಾಗಿ ಕಾಪಾಡಿಕೊಂಡು ಬಂದಿದ್ದರು. ಮಾನ್ಯ ನಾರಾಯಣ್ ಕುಮಾರ್‌ರವರು ಎಷ್ಟೇ ಪ್ರಚೋದನೆ ಮಾಡಿ, ಇವರಿಗೆ ಅವಹೇಳನ ಮಾಡಿದರೂ ಕೂಡ ಎಲ್ಲಾ ಸಂದರ್ಭಗಳಲ್ಲೂ ಕೂಡ ಮಾನ್ಯ ನಾರಾಯಣ್ ಕುಮಾರ್‌ರವರನ್ನು ಕ್ಷಮಿಸಿ ಅವರ ಸ್ನೇಹಕ್ಕೆ ಮರುಳಾಗಿ, ಅವರನ್ನು ಬಹಳ ಪ್ರೀತಿ ವಿಶ್ವಾಸದಿಂದ ನೋಡಿರತಕ್ಕಂಥ ಗಳಿಗೆಗಳನ್ನು ವಿದ್ಯಾರ್ಥಿ ದಿಸೆಯಿಂದಲೂ ಕೂಡ ನಾನು ನೋಡಿದ್ದೇನೆ. ಕರ್ನಾಟಕದಲ್ಲಿರತಕ್ಕಂಥ ಅಲ್ಪಸಂಖ್ಯಾತರ ಒಂದು ಸಮಾಜ ಅಂದರೆ ಗೊಲ್ಲರ ಸಮಾಜ, ಆ ಗೊಲ್ಲರ ಸಮಾಜದಿಂದ ಬಂದಿದ್ದಂತಹ ಮಾನ್ಯ ನಾರಾಯಣ್ ಕುಮಾರ್‌ರವರು, ಯಾವುದೇ ಸಂದರ್ಭದಲ್ಲೂ ಕೂಡ ಯಾರೇ ಎಷ್ಟು ದೊಡ್ಡ ಮನುಷ್ಯರಾಗಿರಲಿ ಕನ್ನಡಕ್ಕೆ ಅನ್ಯಾಯವಾಗಿದೆ ಎಂದರೆ, ಅನೇಕರು ನಗೆಪಾಟಲು ಮಾಡತಕ್ಕಂಥ ಸಂದರ್ಭದಲ್ಲೂ ಕೂಡ ಮಾನ್ಯ ನಾರಾಯಣ್‌ಕುಮಾರ್‌ರವರು ಹೆದರುತ್ತಿರಲಿಲ್ಲ. ನಿಜವಾಗಿಯೂ ಇವತ್ತು ಕನ್ನಡದ ಹೋರಾಟಕ್ಕೆ ಮುಂಚೂಣಿಯಾಗಿದ್ದ ಒಬ್ಬರನ್ನು ನಾವು ಕಳೆದುಕೊಂಡಿದ್ದೇವೆ. ಕೆಲವು ಸಾರಿ ಅವರ ಕುಟುಂಬವರ್ಗದವರನ್ನೆಲ್ಲಾ ನೋಡಿದಾಗ ಮನಸ್ಸಿಗೆ ಬಹಳ ನೋವಾಗುತ್ತದೆ. ಏನಪ್ಪ 30–40 ವರ್ಷ ಸಾರ್ವಜನಿಕ ಜೀವನದಲ್ಲಿ ಏನೂ ಗಳಿಸದೆ ಪಾಪ ಅವರು ಬಹಳ ತೊಂದರೆಯಲ್ಲಿದ್ದಾರಲ್ಲ ಎಂದು ಅನೇಕ ಸಂದರ್ಭಗಳಲ್ಲಿ ನನಗನ್ನಿಸಿದೆ. ನಾರಾಯಣ್‌ಕುಮಾರ್ ಕುಟುಂಬ ವರ್ಗಕ್ಕೆ ಸರ್ಕಾರದ ವತಿಯಿಂದ ಸಹಾಯ ಮಾಡುವುದು ಯೋಗ್ಯವಾದುದೆಂದು ನಾನು ಭಾವಿಸಿರತಕ್ಕಂಥವನು.

ಮಾನ್ಯ ಕರನಿಂಗ್‌ರವರು, ಒಂದು ವಿಚಿತ್ರವಾದ ಸಂದರ್ಭವೆಂದರೆ, ಇವರ ಮಗ ಕರನಿಂಗ್‌ರವರು ಒಬ್ಬ ದಕ್ಷ ಅಧಿಕಾರಿ. ಈಗ ಡಿಸಿಪಿಯಾಗಿದ್ದಾರೆಂದು ಕಾಣುತ್ತದೆ, ಹಿಂದುಳಿದ ವರ್ಗದವರು. ನಮ್ಮ ಜಾರಕಿ ಹೋಳ್‌ಯವರು ಇಲ್ಲೋ ಎಲ್ಲೋ ಇದ್ದಾರೆ, ಗೋಕಾಕ್‌ನಲ್ಲಿ ಇವರ ತಂದೆಯವರಿಗೆ ಮತ್ತು ಕರನಿಂಗ್‌ರವರಿಗೆ ದೊಡ್ಡ ಹೋರಾಟ, ಆಗ ನಾನು ಗೃಹ ಇಲಾಖೆಯ ಮಂತ್ರಿಯಾಗಿದ್ದೆ. ಜೆ.ಹೆಚ್. ಪಟೇಲರು ಉಪ ಮುಖ್ಯಮಂತ್ರಿಗಳಾಗಿದ್ದರು, ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಹೆಚ್.ಡಿ. ದೇವೇಗೌಡರು ನನಗೆ ಆದೇಶ ಕೊಟ್ಟು, ತಕ್ಷಣ ಗೋಕಾಕ್‌ಗೆ ಹೋಗಿ ಅಲ್ಲಿ ಒಂದು ರೀತಿಯಲ್ಲಿ ಯುದ್ಧ ನಡೆಯುತ್ತಿದೆ, ಅದನ್ನು ಸರಿಮಾಡಬೇಕೆಂದು ಹೇಳಿದರು, ನಾವಿಬ್ಬರು ಹೋದೆವು ರಸ್ತೆಯಲ್ಲಿ ರಕ್ತದ ಒಕುಳಿ, ಎಂಟು ಹೆಣಗಳು ಬಿದ್ದಿವೆ, ಪೊಲೀಸರು ಎಳೆಯುತ್ತಿದ್ದಾರೆ, ಪ್ರಕ್ಷುಬ್ಧವಾದ ಪರಿಸ್ಥಿತಿ, ಎರಡು ಕಾರ್ಮಿಕ ಸಂಘಟನೆಗಳ ನಡುವೆ ಅಂಥ ದೊಡ್ಡ ಸಂಘರ್ಷ, ಅದೇನೇ ಇರಲಿ, ಯಾರದು ತಪ್ಪು ಯಾರದು ಸರಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅನಿವಾರ್ಯವಾಗಿ ನಾನು ಗೃಹಮಂತ್ರಿಯಾಗಿ ಇವರನ್ನು ಬಂದಿಖಾನೆಗೆ ಕಳುಹಿಸಲೇಬೇಕೆಂಬ ಪೊಲೀಸ್‌ರವರಿಗೆ ಆದೇಶ ಕೊಡುವಂತಹ ಸಂದರ್ಭ ಬಂತು. ಕರನಿಂಗ್‌ರವರನ್ನು ಗುಲ್ಬರ್ಗಾ ಅಥವಾ ಬಳ್ಳಾರಿ ಜೈಲಿಗೆ ಕಳುಹಿಸುವಂತಹ ಸಂದರ್ಭ ಅವತ್ತು ಬಂತು, ನಾನೇ ಅದಕ್ಕೆ ಆಜ್ಞೆ ಮಾಡಿದೆ. ಆದರೆ, ಅವರ ಮನಸ್ಸಿನಲ್ಲಿ ಆ ಬಗ್ಗೆ ಒಂದು ಚೂರು ಕೂಡ ದ್ವೇಷ ಇರಲಿಲ್ಲ. ಯಾವತ್ತು ಕೂಡ ಅವರು ಬೆಂಗಳೂರಿಗೆ ಬಂದರೆ ನಮ್ಮನ್ನು ಭೇಟಿ ಮಾಡದೆ, ನಮ್ಮನ್ನು ನೆನಸಿಕೊಳ್ಳದೆ ಹೋಗುತ್ತಿರಲಿಲ್ಲ. ಮತ್ತೆ ಮಂಡ್ಯ ಜಿಲ್ಲೆಯ ರಾಜಕಾರಣದಲ್ಲಿ ಪುಟ್ಟುಗೆ, ಒಂದು ರೀತಿಯ

ವಿಶೇಷವಾದ ಸ್ಥಾನಮಾನವಿದೆ. ಈ ಕಿರುಗಾವಲು ಕ್ಷೇತ್ರ ಯಾವತ್ತು ಕೂಡ, ನಮ್ಮ ಜಿ. ಮಾದೇಗೌಡರ ಸ್ಟ್ರಾಂಗ್ ಹೋಲ್ಡ್, ಅಲ್ಲಿ ಒಂದು ಸಾರಿ ಮಾದೇಗೌಡರ ಆಶೀರ್ವಾದದಿಂದ ಪುಟ್ಟುರವರು ಗೆದ್ದು ಬಂದಿದ್ದರು. ಬಹಳ ಒಳ್ಳೆಯ ಸ್ವಭಾವದವರು, ಸರಳತೆ ಸಜ್ಜನಿಕೆಗೆ ಹೆಸರಾಗಿದ್ದವರು. ಮತ್ತೆ ನಮ್ಮ ಸ್ನೇಹಿತರಾಗಿದ್ದಂತಹ ಭೀಮಸೇನಿ ಕೊಂಡಯ್ಯನವರು, ಇವರ ದುರ್ಮರಣದಿಂದ ರಾಜಕಾರಣಿಗಳು, ಮುಖಂಡರುಗಳು ಕಲಿಯತಕ್ಕಂಥದ್ದು ಬಹಳ ಇದೆ. ಎರಡು ಕುಟುಂಬಗಳ ಮಧ್ಯೆ ಇದ್ದಂತಹ ದ್ವೇಷದಿಂದಾಗಿ ಭೀಮನೇನಿ ಕೊಂಡಯ್ಯನವರು ಸತ್ತರು. 15 ವರ್ಷಗಳ ಹಿಂದೆ ಪಂಚಾಯಿತಿ ಚುನಾವಣೆಗಳಲ್ಲಿದ್ದಂತಹ ದ್ವೇಷ ಎಂದು ಹೇಳಿ ನಾನು ಕೇಳಪಟ್ಟಿದ್ದೇನೆ. ಇದರ ಬಗ್ಗೆ ವಿಚಾರಣೆ ನಡೆಯುತ್ತಿದೆ. ಸರ್ಕಾರದಿಂದ ವಿಚಾರಣೆಯನ್ನು ಮಾಡುತ್ತಿದ್ದಾರೆ. ಆದರೆ ಮಾನ್ಯ ಭೀಮಸೇನಿ ಕೊಂಡಯ್ಯನವರು ಬಹಳ ಒಳ್ಳೆಯ ಮನುಷ್ಯರಾಗಿದ್ದರು. ನಾನೊಂದು ಸಾರಿ ಹಂಪೆಯ ಉತ್ಸವಕ್ಕೆ ಹೋಗಿದ್ದೆ. ಕೃಷ್ಣದೇವರಾಯನ ಪಾತ್ರದಲ್ಲಿ ಭೀಮನೇನಿ ಕೊಂಡಯ್ಯನವರು ಮೆರೆದಿದ್ದನ್ನು ನಾನು ನೋಡಿದ್ದೇನೆ. ಒಬ್ಬ ಅತ್ಯಂತ ಸರಳತೆ ಮತ್ತು ಸಜ್ಜನಿಕೆಯ ಶಾಸಕನಾಗಿ ಹೊಸಪೇಟೆ ಕ್ಷೇತ್ರದ ಬೆಳವಣಿಗೆಗೆ ಬಹಳ ನಿಷ್ಠೆಯಿಂದ ದುಡಿದವರು. ಅವರ ದುರ್ಮರಣದ ಗಳಿಗೆಯಲ್ಲಿ ನಾನು ಅಲ್ಲಿಯೇ ಇದ್ದೆ. ಕೆಲವೇ ನಿಮಿಷಗಳಲ್ಲಿ ಅವರ ಮೃತ ದೇಹವನ್ನು ನೋಡತಕ್ಕಂಥ ಒಂದು ದೌರ್ಭಾಗ್ಯ ನನ್ನ ಪಾಲಿಗೆ ದೊರಕಿತ್ತು. ರಾಜಕೀಯ ವೈಷಮ್ಯ, ಅಂದರೆ ರಾಜಕೀಯ ವೈಷಮ್ಯಕ್ಕೂ ಒಂದು ಇತಿಮಿತಿ ಇರಬೇಕಾಗುತ್ತದೆ.

ಮಾನ್ಯ ಪುಡಕಲಕಟ್ಟಿಯವರೂ ಸಹಾ ನಮ್ಮ ಹಗರೆಯವರ ಸಾಲಿಗೆ ಸೇರಿದವರು. ಧಾರವಾಡದ ಅವರ ಸ್ವಂತ ಊರಿನಲ್ಲಿ ಚುನಾವಣೆಯಲ್ಲಿ ಇವರ ವಿರುದ್ಧವೇ ನಾನು ಕೆಲಸ ಮಾಡುವುದಕ್ಕೆ ಹೋಗಿದ್ದೆ. 1980ರಲ್ಲಿ. ಬೊಮ್ಮಾಯಿಯವರು ನಮ್ಮ ಪಕ್ಷದ ಅಧ್ಯಕ್ಷರು. ಒಂದು ಖಾದಿ ಸಂಘವನ್ನು ಇವರು ನಡೆಸುತ್ತಿದ್ದರು. ಆ ಜನರೇಷನ್‌ನ ಲೀಡರ್ಸ್ ಏನು ಇದ್ದರು, ರಚನಾತ್ಮಕವಾಗಿ ಕೆಲಸ ಮಾಡುತ್ತಿದ್ದ ಮುಖಂಡರಲ್ಲಿ ಮಾನ್ಯ ಪುಡಕಲಕಟ್ಟಿಯವರೂ ಸಹಾ ಒಬ್ಬರಾಗಿದ್ದರು. ಶ್ರೀಮಾನ್ ಬಿ.ಹೆಚ್. ಲಕ್ಷ್ಮಣಯ್ಯನವರು ನಮ್ಮ ಪಕ್ಷದಿಂದ 1978ರಲ್ಲಿ ಅವರು ವಿಧಾನಸಭೆಗೆ ಬೇಲೂರು ಕ್ಷೇತ್ರದಿಂದ ಗೆದ್ದಿದ್ದರು. ಅವರು ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಮಾನ್ಯ ಬಿ.ಹೆಚ್. ಲಕ್ಷ್ಮಣಯ್ಯನವರು ಬೇಲೂರಿನ ಶಾಸಕರಾಗಿ ಬಹಳ ನಿಷ್ಠೆಯಿಂದ ಕೆಲಸ ಮಾಡಿದಂಥ ಒಬ್ಬ ವ್ಯಕ್ತಿ.

ಇದರ ಜೊತೆಗೆ ಮಾನ್ಯ ಚನ್ನಬಸವಯ್ಯನವರು, ಒಬ್ಬ ದಿಟ್ಟ ಹೋರಾಟಗಾರರು. ವಿಶೇಷವಾಗಿ ಅವರು ಶಿಕ್ಷಣ ಕ್ಷೇತ್ರಕ್ಕೆ ಮಾಡಿರತಕ್ಕ ಕೆಲಸ ಬಹಳ ದೊಡ್ಡದು ಎಂದು ಹೇಳಿ ನಾನು ತಿಳಿದುಕೊಂಡಿದ್ದೇನೆ.

ಡಾ: ಎಂ.ಆರ್. ತಂಗಾರವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಹಳ ಸುದೀರ್ಘವಾಗಿ ಮಾತನಾಡಿದ್ದಾರೆ. ತಂಗಾರವರು ನಿಜವಾದ ಅಜಾತಶತ್ರು. ಅವರಿಗೆ ಶತ್ರುಗಳು ಎನ್ನತಕ್ಕದ್ದು ರಾಜಕೀಯದಲ್ಲಷ್ಟೇ ಅಲ್ಲ, ಅವರ ಸ್ವಂತ ಜೀವನದಲ್ಲೂ ಸಹಾ ಇರಲಿಲ್ಲ. ಅದರ ಜೊತೆಗೆ ಅವರಿಗೆ ಇದ್ದಂಥ ಒಂದು ಜ್ಞಾನ, ಅದರ ಬಗ್ಗೆ hats off to him. ಅವರು ಇಲ್ಲ. ಅವರ ಕುಟುಂಬದವರೆಲ್ಲಾ ಬಹಳ ದೊಡ್ಡ ದೊಡ್ಡ ಸ್ಥಾನಗಳಲ್ಲಿದ್ದಾರೆ. ಅವರು ಅಲ್ಪಸಂಖ್ಯಾತ ಸಮುದಾಯದಿಂದ ಬಂದಂಥ ವ್ಯಕ್ತಿ. ಆದರೆ ಈಗ ನಾವು ಬಿಜೆಪಿಯನ್ನು ತಾತ್ವಿಕವಾಗಿ ವಿರೋಧ ಮಾಡುತ್ತೇವೆ. ವೈಯಕ್ತಿಕವಾಗಿ

ನಮಗೆ ವಿರೋಧ ಏನೂ ಇಲ್ಲ. ಆದರೆ ತತ್ವದ ದೃಷ್ಟಿಯಿಂದಾಗಿ ನಾವೆಲ್ಲಾ ಬಿಜೆಪಿ ಯನ್ನು ವಿರೋಧ ಮಾಡತಕ್ಕಂಥವರು. ಆದರೆ ಡಾ: ತಂಗಾ ಅವರಲ್ಲಿ ಅವರ ವ್ಯಕ್ತಿತ್ವ, ಆ ಒಂದು ವೈಚಾರಿಕತೆ ಅವರಲ್ಲಿ ನೂರಕ್ಕೇ ನೂರರಷ್ಟು ಇತ್ತು. ಅನೇಕ ಬಿಜೆಪಿ ಯ ಬೆಳವಣಿಗೆಗಳು ಅವರ ಮನಸ್ಸಿಗೆ ನೋವನ್ನುಂಟು ಮಾಡಿದ ಕಾಲವೂ ಸಹಿತ ಇತ್ತು. ಒಂದು ರಾಜಕೀಯ ಪಕ್ಷದಲ್ಲಿ ಇವೆಲ್ಲಾ ಸ್ವಾಭಾವಿಕವಾಗಿರತಕ್ಕಂಥ ಪ್ರಕ್ರಿಯೆಗಳು. ಅದನ್ನು ಸರಿ ತಪ್ಪು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಿಜವಾಗಿಯೂ ಡಾ: ತಂಗಾರವರು ಒಬ್ಬ ಶ್ರೇಷ್ಠ ರಾಜಕಾರಣಿಗಳ ಪಾಲಿವಿ ಸಿಕ್ಕಿದವರು. ಅವರು ಮಂತ್ರಿಗಳಾಗದೇ ಇರಬಹುದು. ಆದರೆ ಬಹಳ ದಿನಗಳ ಕಾಲ ಅವರ ಒಂದು ವ್ಯಕ್ತಿತ್ವ ಈ ಸಮಾಜದ ಮೇಲೆ ಅವರ ಹೆಜ್ಜೆಗಳು ಅವರ ಒಂದು ಪ್ರಭಾವ ಇದ್ದೇ ಇರುತ್ತದೆ ಎಂದು ಹೇಳಿ ನಾನು ತಿಳಿದುಕೊಂಡಿರತಕ್ಕವನು. ಅವರು ಯಾವುದೇ ಪಕ್ಷದಲ್ಲಿದ್ದರೂ ಸಹಿತ ಆ ಪಕ್ಷಕ್ಕೆ ಒಂದು ದೊಡ್ಡ ಆಸ್ತಿಯಾಗಿದ್ದರು ಎಂದು ನಾನು ತಿಳಿದಿರುವವನು.

ಡಾ: ಹೆಚ್.ಎಲ್. ನಾಗೇಗೌಡರ ಬಗ್ಗೆ ಹೇಳುವುದಾದರೆ, ನಾವು ನಾಗೇಗೌಡರಿಗೆ ಮಾಡಬೇಕಾಗಿರುವ ಒಂದೇ ಒಂದು ಕೆಲಸ, ಅದರಲ್ಲೂ ವಿಶೇಷವಾಗಿ ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜನರು ಈ ಜಾನಪದ ಸಾಹಿತ್ಯಕ್ಕೆ ಅವರು ಮಾಡಿರುವ ಕೊಡುಗೆ ಏನು ಇದೆ, ಇದು ಅಪಾರವಾದುದು. ಬಹುಶಃ ರಾಷ್ಟ್ರದಲ್ಲೇ ಜಾನಪದ ಸಾಹಿತ್ಯಕ್ಕೆ ಕೊಡುಗೆಯನ್ನು ಕೊಟ್ಟಿರುವ ವ್ಯಕ್ತಿಗಳ ಪೈಕಿ ಡಾ: ಎಚ್.ಎಲ್. ನಾಗೇಗೌಡರಿಗೆ ಮೊದಲನೇ ಸ್ಥಾನ ಹೋಗಬೇಕೆಂದು ತಿಳಿದುಕೊಂಡಿರುವವನು ನಾನು. ಅವರು ಪ್ರಾರಂಭ ಮಾಡಿರುವ ಸಂಸ್ಥೆಯನ್ನು ಬಲಪಡಿಸುವುದರ ಮೂಲಕವಾಗಿ ಅದನ್ನು ಒಂದು ರಾಷ್ಟ್ರೀಯ ಸಂಸ್ಥೆಯನ್ನಾಗಿ ಮಾಡುವುದರ ಮೂಲಕವಾಗಿ ನಾವು ಅವರಿಗೆ ಶ್ರದ್ಧಾಂಜಲಿಯನ್ನರ್ಪಿಸಬೇಕಾಗಿದೆ. ಮತ್ತೊಬ್ಬ ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು, ಮಾಜಿ ಮೇಯರ್‌ರವರು, ಗಾಂಧಿವಾದಿಗಳು ಆದ ಶ್ರೀ ಜಿ. ನಾರಾಯಣ್ ಅವರು ಅದರ ಅಧ್ಯಕ್ಷರಾಗಿದ್ದಾರೆ. ಆ ಸಂಸ್ಥೆಯನ್ನು ನಾವು ಬಲಪಡಿಸಬೇಕೆಂದು ಹೇಳುತ್ತೇನೆ.

ಡಾ: ಎಂ.ಸಿ. ಮೋದಿಯವರು, ಮೋದಿಯವರ ಹೆಸರನ್ನು ಕೇಳದೇ ಇರುವ ಮನುಷ್ಯನೇ ಇಲ್ಲ. ಎಷ್ಟು ಲಕ್ಷಾಂತರ ಜನರಿಗೆ ಅವರು ನೇತ್ರದಾನವನ್ನು ಮಾಡಿದ್ದಾರೆ. ಅವರ ಹಠಾತ್ ನಿಧನ ನಮಗೆ ಬಹಳ ದುಃಖವನ್ನುಂಟು ಮಾಡಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಡಾ: ನಂಜುಂಡಪ್ಪನವರ ಬಗ್ಗೆ ಮಾತನಾಡುವುದೇ ಒಂದು ದೊಡ್ಡ ಹೆಮ್ಮೆ ಎಂದು ಹೇಳಿ ನಾನು ತಿಳಿದಿರುವವನು. ಒಬ್ಬ ಶ್ರೇಷ್ಠ ಆರ್ಥಿಕ ತಜ್ಞರು; ನಮ್ಮ ರಾಷ್ಟ್ರದ ಕೀರ್ತಿಯನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋದಂಥವರು. ಬಹುಶಃ ಅವರು ಕೊಟ್ಟಿರುವ ವರದಿ ಏನು ಇದೆ, ಆ ವರದಿಯು ಅನೇಕ ರಾಜ್ಯಗಳಲ್ಲಿ ರಾಷ್ಟ್ರದಲ್ಲಿ ಅನುಸರಿಸುವುದಕ್ಕೆ ಮಾದರಿಯಾಗಿರತಕ್ಕಂಥ ಒಂದು ವರದಿ. ನನಗೆ ಹೆಮ್ಮೆ ಇದೆ. ಡಾ: ನಂಜುಂಡಪ್ಪನವರು ಸಾಯುವುದಕ್ಕೆ ಮುನ್ನ ಪೂಜ್ಯ ಸುತ್ತೂರು ಸ್ವಾಮಿಗಳ ಸನ್ನಿಧಿಯಲ್ಲಿ ಅವರನ್ನು ಭೇಟಿ ಮಾಡತಕ್ಕ ಅವಕಾಶ ನನಗೆ ಸಿಕ್ಕಿತ್ತು. ಕೈಗಾರಿಕಾ ಮಂತ್ರಿಯಾಗಿ ಡಾ: ನಂಜುಂಡಪ್ಪನವರ ವರದಿಯನ್ನು ಕೈಗಾರಿಕಾ ವಿಕಾಸ ಎಂದು ಹೇಳಿ ಮಾನ್ಯ ಉಪಾಧ್ಯಕ್ಷರೇ ನಿಮ್ಮ ಮೊಳಕಾಲ್ಮೂರನ್ನು ಸಹಿತ ಅದರಲ್ಲಿ ಸೇರಿಸಿದ್ದೇನೆ. ಅದು ಅತ್ಯಂತ ಹಿಂದುಳಿದಿರತಕ್ಕ ತಾಲ್ಲೂಕು 35 ತಾಲ್ಲೂಕುಗಳನ್ನೇನು ಅವರು ಗುರುತು ಮಾಡಿದ್ದಾರೆ. ಅದನ್ನು ಈ ಆರ್ಥಿಕ ವರ್ಷದಲ್ಲೇ ಕೈಗಾರಿಕಾ ವಿಕಾಸ ಯೋಜನೆಯ

ಮೂಲಕ ಅಲ್ಲಿಯ ಕೈಗಾರಿಕೆಗಳ ಮತ್ತು ನಿರುದ್ಯೋಗದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕೈಗಾರಿಕೆಗಳ ಬೆಳವಣಿಗೆಗೆ ನಾನು ಪ್ರಯತ್ನವನ್ನು ಮಾಡಿದ್ದೇನೆ. ನನ್ನನ್ನು ಕರೆಸಿ ಶಹಭಾಷೆಗಿರಿಯನ್ನು ಕೊಟ್ಟಿದ್ದರು. ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಎಲ್ಲಾ ಇಲಾಖೆಯವರು ಇದೇ ರೀತಿ ಒಂದು ಪ್ರಯತ್ನವನ್ನು ಮಾಡಿದರೆ ನನ್ನ ಒಂದು ವರದಿ ಸಾರ್ಥಕವಾಗುತ್ತದೆ ಎಂದು ಅಂದುಕೊಂಡಿದ್ದೇನೆ. ಸ್ವಾತಂತ್ರ್ಯದ ನಂತರದ 55 ವರ್ಷಗಳ ನಂತರವೂ ಸಹಿತ ನಮ್ಮ ರಾಜ್ಯದಲ್ಲಿರುವ ಈ ಪ್ರಾದೇಶಿಕ ಅಸಮತೋಲನ ಏನು ಇದೆ, ಇದನ್ನು ಸರಿಪಡಿಸಲಿಕ್ಕೆ ಡಾ: ನಂಜುಂಡಪ್ಪನವರ ವರದಿಯನ್ನು ನಾವು ಜಾರಿಗೊಳಿಸುವುದಷ್ಟೇ ಅಲ್ಲ; ಚಾಮರಾಜನಗರ ಜಿಲ್ಲೆಯಾಗಬೇಕಾದರೆ ಜಿ.ಹೆಚ್. ಪಟೇಲರು ಕಾರಣ ಎಂದು ಹೇಳಿ. ಯಾವ ರೀತಿ ಜೆ.ಹೆಚ್. ಪಟೇಲರ ಹೆಸರನ್ನು ಮಾನ್ಯ ವಾಟಾಳ್ ನಾಗರಾಜ್‌ರವರು ಆಗಾಗ್ಗೆ ಹೇಳುತ್ತಲೇ ಇರುತ್ತಾರೆ, ವಿಧಾನಸೌಧವನ್ನು ಇಲ್ಲಿ ಕಟ್ಟಬೇಕಾದರೆ ಕೆಂಗಲ್ ಹನುಮಂತಯ್ಯನವರು ಕಾರಣ ಎಂದು ಹೇಳುತ್ತಾರೆ. ಅದೇ ರೀತಿಯಲ್ಲಿ ಇವತ್ತು ಈ ಪ್ರಾದೇಶಿಕ ಅಸಮತೋಲನ ಹೋಗುವವರೆಗೂ ಸಹಿತ ಹೋದ ನಂತರವೂ ಸಹಿತ ಚಿರಂತನವಾಗಿ ಇವತ್ತು ಡಾ: ನಂಜುಂಡಪ್ಪನವರ ಹೆಸರು ಇರುತ್ತದೆ ಎಂದು ಹೇಳಿ ನಾನು ಭಾವಿಸಿಕೊಂಡಿರುತ್ತೇನೆ.

ಇವತ್ತಿನ ಪತ್ರಿಕಾ ಮಿತ್ರರಿಗೆ ಮತ್ತು ರಾಜಕಾರಣಿಗಳಿಗೆ ಆದರ್ಶವಾಗಿದ್ದವರು ಎಂದರೆ ಮೈಸೂರುಮಠ್ ಮತ್ತು ರಾಜಾರಾವ್ ಅವರು. ಇಲ್ಲೇನಾದರೂ ಮೈಸೂರುಮಠ್ ಮತ್ತು ರಾಜಾರಾವ್ ಅವರು ಬರುತ್ತಾರೆಂದು ಹೇಳಿದರೆ ನಾವೆಲ್ಲಾ ಎದ್ದುನಿಂತುಕೊಳ್ಳುತ್ತಿದ್ದೆವು. ನೈತಿಕತೆಯನ್ನು ಕಾಪಾಡಿಕೊಳ್ಳುವುದು, ಅಷ್ಟೊಂದು ತೀಕ್ಷ್ಣವಾಗಿರುವ ರಾಜಕೀಯ ವಿಶ್ಲೇಷಣೆಯನ್ನು ಮಾಡಿ ಸಂಕಷ್ಟದ ಸಂದರ್ಭದಲ್ಲಿ ಯಾವ ರೀತಿ ದೊಡ್ಡವರು ಎನ್ನತಕ್ಕವರು ಸಣ್ಣತನವನ್ನು ತೋರಿಸಿದ ಮೆರೆಯಬೇಕೆನ್ನುವುದನ್ನು ನಮಗೆ ಹೇಳಿಕೊಡುತ್ತಿದ್ದರು. ಪ್ರಜಾವಾಣಿಯಲ್ಲಿ ಮೈಸೂರುಮಠ್‌ರವರು ಬರೆಯುತ್ತಾರೆಂದರೆ ನಮಗೆ ಏನು ಬರೆದಿದ್ದಾರೋ, ಏನೋ ಎಂದು ಹೇಳಿ ಹೆದರಿಕೆಯಾಗುತ್ತಿತ್ತು. ರಾಜಾರಾವ್ ಅವರು ವೆರಿ ಸಿಂಪಲ್ ಮ್ಯಾನ್. ನನಗೆ ಅವರ ಬಗ್ಗೆ ಹೇಳುವುದಕ್ಕೆ ಶಬ್ದಗಳೇ ಇಲ್ಲ. ಅಷ್ಟೊಂದು ಸಿಂಪಲ್ ಆಗಿ ಬದುಕಿದಂಥ ವ್ಯಕ್ತಿ ಎಂದು ಹೇಳಿದರೆ ರಾಜಾರಾವ್ ಅವರು. ಇಷ್ಟೆಲ್ಲಾ ನಾಯಕರ ಮಧ್ಯೆ ಸಿನಿಮಾ ತಾರೆಯ ಖಳನಾಯಕ ವಜ್ರಮುನಿ ಅವರು. ನಿಜವಾಗಿಯೂ ಸಹಿತ ಕರ್ನಾಟಕದಲ್ಲಿ ನಾವು ನಾಲ್ಕೈದು ಜನರನ್ನು ನೋಡಬಹುದು. ಎಂ.ಪಿ. ಶಂಕರ್, ವಜ್ರಮುನಿ, ಇವರೆಲ್ಲರನ್ನೂ ಖಳನಾಯಕರನ್ನಾಗಿ ಮರೆಯುವುದಕ್ಕೆ ಆಗುವುದಿಲ್ಲ. ಡಾ: ರಾಜ್‌ಕುಮಾರ್ ಅವರನ್ನು ನಾಯಕರನ್ನಾಗಿ ಮರೆಯುವುದಕ್ಕೆ ಆಗುವುದಿಲ್ಲ. ಶ್ರೀಮತಿ ಸರೋಜಾದೇವಿ ಅವರನ್ನು ಒಬ್ಬ ನಾಯಕರ ನಟಿಯನ್ನಾಗಿ ಮರೆಯುವುದಕ್ಕೆ ಸಾಧ್ಯವಿಲ್ಲ. ನಾವೆಲ್ಲಾ ಈ ಜನರೇಷನ್‌ನವರು. ಇವತ್ತಿನ ಜನರೇಷನ್ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಜನರೇಷನ್ ಅನ್ನು ನಾವು ನೆನೆಪಿಸಿಕೊಳ್ಳುತ್ತೇವೆ. ವಜ್ರಮುನಿ ಬರುತ್ತಾನೆ ಎಂದರೆ ನಾವೆಲ್ಲಾ ಎಲ್ಲೆಲ್ಲೋ ಓಡಿಹೋಗುತ್ತಿದ್ದೆವು. ವಜ್ರಮುನಿ ಬರುತ್ತಾನೆ ಎಂದರೆ ಒಂದು ತರಹ ಭಯ ಆಗುತ್ತಿತ್ತು. ಆ ರೀತಿಯ ಒಂದು ವ್ಯಕ್ತಿತ್ವವನ್ನು ಹೊಂದಿದ್ದರು. ಸ್ವಭಾವತಃ ಅವರು ನನ್ನ ನೇಬರ್. ಜೆಪಿ. ನಗರದಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ನನಗೊಂದು ಸೈಟನ್ನು ಕೊಟ್ಟಿದ್ದಾರೆ. ನಾನು ಮನೆಯನ್ನು ಕಟ್ಟಿಕೊಂಡಿದ್ದೇನೆ. ಪಕ್ಕದಲ್ಲಿ ಅವರದೂ ಒಂದು ಸೈಟಿದೆ. ಪಾಪ, ಅವರ ಕುಟುಂಬ ವರ್ಗದವರೆಲ್ಲಾ ಕಾಂಗ್ರೆಸ್ ಪಕ್ಷಕ್ಕೆ ದುಡಿದಿದ್ದರು. ರಾಜಕೀಯವಾಗಿ ನಾವು ವಿರೋಧಿಗಳಾಗಿದ್ದರೂ ಸಹಿತ ನಮ್ಮ ಒಳ್ಳೆಯ ಸ್ನೇಹಿತರಾಗಿದ್ದರು.

ಕೊನೆಯದಾಗಿ, ನಮ್ಮ ಸಿಜಿಕೆ. ಬಗ್ಗೆ ಹೇಳುವುದಾದರೆ, ಬಹಳ ಜನ ಇಲ್ಲಿ ಇರತಕ್ಕ ನಮ್ಮ ಸ್ನೇಹಿತರುಗಳಿಗೆ ಸಿಜಿಕೆ ಏನೂ ಆಗಿರಲಿಲ್ಲ. ಅವರು ವೃತ್ತಿಯಲ್ಲಿ ಒಬ್ಬ ಸಾಮಾನ್ಯವಾದ ಪ್ರಧ್ಯಾಪಕರು, ಆದರೆ ವ್ಯಕ್ತಿತ್ವದಲ್ಲಿ ಅಪಾರ ಕೀರ್ತಿಯನ್ನು ಹೊಂದಿದ್ದರು. ಸಿಜಿಕೆ ಯವರು ಸತ್ತಾಗ ಪರಮ ಪೂಜ್ಯರಾದ ಸಿರಿಗೆರೆ ಸ್ವಾಮಿಗಳು ಅವರ ಅಂತ್ಯಕ್ರಿಯೆಯನ್ನು ಮಾಡುವುದರಲ್ಲಿ ಮುಂದೆ ನಿಂತಿದ್ದರು ಎಂದು ಹೇಳಿದರೆ ಸಾವಿರಾರು ಜನರು ಸೇರಿ ಅವರಿಗೆ ಒಂದು ಕೊನೆಯ ಬೀಳ್ಕೊಡುಗೆಯನ್ನು ಮಾಡಿದರು ಎಂದು ಹೇಳಿದರೆ ಯಾವುದೇ ಕ್ಷೇತ್ರದಲ್ಲೂ ಸಹಿತ ನಿಷ್ಠೆಯಿಂದ ಕರ್ಮವನ್ನು ಮಾಡಿದರೆ ಅದಕ್ಕೆ ಬೆಲೆ ಇದೆ ಎನ್ನುವುದನ್ನು ಕನ್ನಡಿಗರು ತೋರಿಸಿಕೊಟ್ಟರು, ನಮ್ಮ ನಾಟಕ ಕ್ಷೇತ್ರದಲ್ಲಿ ಸಮಾಜದ ಪರಿವರ್ತನೆಗೋಸ್ಕರ ವೈಚಾರಿಕವಾದ ಮೌಲ್ಯಗಳಿಗೋಸ್ಕರ ಹೋರಾಟ ಮಾಡಿದಂಥ ವ್ಯಕ್ತಿಯಾದ ಶ್ರೀ ಸಿಜಿಕೆ ಯನ್ನು ಕಳೆದುಕೊಂಡಿರುವುದು ನಮ್ಮ ದೌರ್ಭಾಗ್ಯ. ಅರಳುತ್ತಿದ್ದ ಒಂದು ಮೊಗ್ಗು ಇನ್ನು 20–25 ವರ್ಷ ಆ ಕ್ಷೇತ್ರದಲ್ಲಿ ಅಪಾರವಾಗಿ ಕೆಲಸವನ್ನು ಮಾಡುವಂಥ ಒಂದು ಶಕ್ತಿ ಸಿಜಿಕೆ ಗೆ ಇತ್ತು. ಅವರನ್ನು ನಾವು ಕಳೆದುಕೊಂಡಿದ್ದೇವೆ. ಇಂಥ ಮಹಾನ್ ನಾಯಕರುಗಳನ್ನು ಕಳೆದುಕೊಂಡು ಈ ಸಾರಿ ಅಧಿವೇಶನ ನಮಗೂ ಮನಸ್ಸಿಗೆ ಬಹಳ ನೋವಾಗಿದೆ. ಏಕೆಂದು ಹೇಳಿದರೆ ಈ ಆರು ತಿಂಗಳಲ್ಲಿ ಇಷ್ಟೊಂದು ಒಳ್ಳೆಒಳ್ಳೆಯ ರತ್ನಗಳನ್ನು, ಕರ್ನಾಟಕದ ರತ್ನಗಳನ್ನು ನಾವು ಕಳೆದುಕೊಂಡಿರುವುದು ನನ್ನ 24 ವರ್ಷದ ಈ ಒಂದು ವಿಧಾನಸಭೆಯ ಅವಧಿಯಲ್ಲಿ ಇದು ಮೊದಲೇ ಬಾರಿಗೆ ಎಂದು ನಾನು ತಿಳಿದುಕೊಂಡಿದ್ದೇನೆ. ಏನು ಅವಸಾನಕ್ಕೋ ನನಗಂತೂ ಗೊತ್ತಿಲ್ಲ. ಇದರಿಂದಾಗಿ ನಮ್ಮ ಕರ್ನಾಟಕ ಬರಡಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕರ್ನಾಟಕದ ಒಂದು ದೊಡ್ಡ ರಾಜಕೀಯ, ಸಾಮಾಜಿಕ, ನಾಟಕ, ಚಿತ್ರರಂಗ, ಸಾರ್ವಜನಿಕ ಕ್ಷೇತ್ರ ಬಡವಾಗಿದೆ ಎಂದು ನಾನು ತಿಳಿದು ಇವರೆಲ್ಲರ ಕುಟುಂಬ ವರ್ಗದವರಿಗೆ ಸರ್ಕಾರದಿಂದ ಆದಷ್ಟು ನಾವು ಎಲ್ಲಾ ರೀತಿಯಲ್ಲೂ ಸಹಕಾರ ಮಾಡತಕ್ಕ ಮನಸ್ಸು ನಮಗೆಲ್ಲರಿಗೂ ಸಹಿತ ಬರಲಿ. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ಕುಟುಂಬ ವರ್ಗದವರಿಗೆ ನಾವೆಲ್ಲರೂ ಸಹಿತ ಈ ರೀತಿ ಮಾತನಾಡುವುದರಿಂದ ಏನೋ ದೊಡ್ಡ ಉಪಯೋಗವಾಗುತ್ತದೆಂದು ಹೇಳಿ ನಾನು ಹೇಳಿಕೊಳ್ಳುವುದಿಲ್ಲ. ಆದರೆ ಅವರು ನಮ್ಮಿಂದ ಏನು ಕೋಟ್ಯಾಂತರ ರೂಪಾಯಿಗಳನ್ನು ಬಯಸುವುದಿಲ್ಲ. ಆದರೆ ಅವರನ್ನು ನೆನೆಸಿಕೊಂಡರು ಎಂದು ಹೇಳಿ ಅವರ ಕುಟುಂಬ ವರ್ಗದವರಿಗೆ ಒಂದು ಧೈರ್ಯ ಬರುತ್ತದೆ. ಪರವಾಗಿಲ್ಲಪ್ಪ ನಮ್ಮನ್ನು ನೆನೆಸಿಕೊಂಡರು. ನಮ್ಮ ತಂದೆ ಸೇವೆ ಮಾಡಿದ್ದಕ್ಕೂ, ನನ್ನ ಗಂಡ ಸೇವೆ ಮಾಡಿದ್ದಕ್ಕೂ ವಿಧಾನಸಭೆಯಲ್ಲಿ ನೆನೆಸಿಕೊಂಡರಲ್ಲಾ ಎಂದು ಹೇಳಿ ಹೇಳುತ್ತಾರೆ. ಅಷ್ಟಾದರೂ ನಾವು ಮಾಡಿದ್ದೇವೆ. ಅದಕ್ಕೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ತಮಗೆ ಧನ್ಯವಾದಗಳು.

ಉಪಾಧ್ಯಕ್ಷರು : ಈಗ ಸಂತಾಪ ಸೂಚನಾ ವಿಷಯದಲ್ಲಿ ಚರ್ಚೆ.....

ಶ್ರೀ ವಾಟಾಳ್ ನಾಗರಾಜ್ : ಇನ್ನೂ ಮಾತನಾಡಬೇಕಾಗಿದೆ. ನಾವ್ಯಾರೂ ಮಾತನಾಡೇ ಇಲ್ಲ. ಅದಕ್ಕೆ ತಾವು ಮುಂದಕ್ಕೆ ಹಾಕಿ. ಊಟವಾದ ನಂತರ ಮಾತನಾಡುತ್ತೇನೆ. ಈಗಲೇ ಮಾತನಾಡಿ ಎಂದರೂ ಮಾತನಾಡುತ್ತೇನೆ.

ಮಾನ್ಯ ಸದಸ್ಯರು : ಕಂಟಿನ್ಯೂ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಕಳೆದ 30–40 ವರ್ಷದ ರಾಜಕೀಯ ಇತಿಹಾಸದಲ್ಲಿ ಈ ರೀತಿ ಒಂದು ಸಂತಾಪ

ಸೂಚನಾ ನಿರ್ಣಯವನ್ನು ತಂದಾಗ ಊಟಕ್ಕೆ ಹೋಗಿ ಬಂದು ಮುಂದುವರಿಸುವಂತಹದನ್ನು ನಾನು ಕಂಡಿಲ್ಲ. ಮಾನ್ಯ ವಾಟಾಳ್ ನಾಗರಾಜ್ ಅವರ ಅನುಭವದಲ್ಲಿ ಇದೆಯೇನೋ ನನಗೆ ಗೊತ್ತಿಲ್ಲ. ಇದು ಮೊದಲನೆಯದು. ಎರಡನೆಯದು, ಬಹಳ ಮಹತ್ತರವಾದಂತಹದು ಅವರು ಓಟ್ ಆಫ್ ಕಾನ್‌ಫಿಡೆನ್ಸ್ ಮೋಷನ್ ಅನ್ನು ಮೂವ್ ಮಾಡಬೇಕಾಗಿತ್ತು. ಅದಕ್ಕಾಗಿ ಈ ಸದನ ಸೇರಿರುವಂತಹದು. ಇಡೀ ದೇಶದಲ್ಲಿ ಲಕ್ಷಾಂತರ ಜನ ಲೈವ್ ನೋಡುತ್ತಿದ್ದಾರೆ. ಇಲ್ಲೇನು ನಡೆಯುತ್ತಿದೆ ಎಂದು ಲೈವ್ ಟೆಲಿಕಾಸ್ಟ್‌ನಲ್ಲಿ ನೋಡುತ್ತಿದ್ದಾರೆ. ಈಗ ಸಂತಾಪ ಸೂಚನೆಯ ನಿರ್ಣಯ ಆಗಲಿ, ಅದರ ಮೇಲೆ ಮಾತನಾಡಲಿ, ಏನೂ ತೊಂದರೆಯಿಲ್ಲ. ಊಟಕ್ಕೆ ಹೋಗೋಣ, ಆಮೇಲೆ ಮಾಡೋಣ ಎಂದು ಬೇಡ. ಈ ಕಡೆ ಇರುವ 80 ಭಾಗದ ಜನ ಊಟ ಮಾಡಿಯೇ ಬಂದಿದ್ದಾರೆ. ಮಧ್ಯದಲ್ಲಿ ಹೋಗಿ ಬಂದಿದ್ದಾರೆ. ಯಾವುದೇ ಕಾರಣಕ್ಕೆ ಊಟ ಎಂದು ಹೇಳಿ ಅಡ್ಜರ್ನ್ ಮಾಡುವ ಅಗತ್ಯ ಇಲ್ಲ. ಸಂತಾಪ ಸೂಚನಾ ನಿರ್ಣಯದ ಮೇಲೆ ಮಾನ್ಯ ಹಿರಿಯ ಸದಸ್ಯರಾದಂತಹ ವಾಟಾಳ್ ನಾಗರಾಜ್ ಅವರು ಮಾತನಾಡಬೇಕು, ಮಾತನಾಡಲಿ. ಆದರೆ ಅವರ ಬಾಯಿಮದ ಏಕೆ ಅಡ್ಜರ್ನ್ ಮಾಡಿ ಊಟ ಮಾಡಿ ಬರೋಣ ಎಂಬ ಶಬ್ದ ಬಂತೋ ನನಗೆ ಗೊತ್ತಿಲ್ಲ. ದಯಮಾಡಿ ತಾವು, ಬಹಳ ಪ್ರಮುಖವಾಗಿರುವಂತಹ ಕಾರ್ಯಕಲಾಪ ಇದೆ. ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡುವಂತಹದು ಪ್ರಮುಖವಾಗಿದೆ. ಅದಕ್ಕೆ ಆದ್ಯತೆ ಕೊಡಿ. ಇದಕ್ಕೆಲ್ಲಾ ಅವರು ಮಾತನಾಡಿದ್ದಾರೆ. ಅದು ನನ್ನ ರಿಕ್ವೆಸ್ಟ್.

ಶ್ರೀ ಹೆಚ್.ಕೆ. ಪಾಟೀಲ್ (ಸಂಸದೀಯ ವ್ಯವಹಾರಗಳು ಹಾಗೂ ಕಾನೂನು ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸನ್ಮಾನ್ಯ ವಾಟಾಳ್ ನಾಗರಾಜ್ ಅವರು ಹಾಗೂ ಇತರ ನಾಯಕರುಗಳು ಸಂತಾಪ ಸೂಚನೆಯ ಮೇಲೆ ಮಾತನಾಡುತ್ತೇವೆ ಎನ್ನುವ ಇಚ್ಛೆಯನ್ನು ವ್ಯಕ್ತ ಮಾಡಿದರು. ಸನ್ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದ ಹಾಗೆ ಅವರೆಲ್ಲರೂ ಊಟ ಮಾಡಿಬಂದಿದ್ದಾರೆ ಎಂದರು. ಕೆಲವರು ಶುಗರ್ ಪೇಷೆಂಟ್ ಇದ್ದಾರೆ. ಅದರಿಂದ ನನಗೆ ಅನಿಸುತ್ತದೆ. ತಾವು ಕೆಲವು ಕಾಲ ಸದನವನ್ನು ಮುಂದೆ ಹಾಕಿ ಮತ್ತೆ ಮುಂದುವರಿಸಬಹುದು.

(ಗೊಂದಲ)

ಮಾನ್ಯ ಸದಸ್ಯರು : ಸಭೆ ನಡೆಯಲಿ, ಅವರು ಹೋಗಿ ಊಟ ಮಾಡಿಕೊಂಡು ಬರಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಸತ್ಸಂಪ್ರದಾಯ ನಡೆದುಕೊಂಡು ಬಂದಿದೆ. ಜನ ನಗಬಾರದು.

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) : ಮಧ್ಯಾಹ್ನ ಊಟಕ್ಕೆ ಯಾವಾಗಲೂ ಅಡ್ಜರ್ನ್ ಮಾಡಿಲ್ಲವಾ? ಮಾಡಿಲ್ಲ ಎಂದರೆ ಮಾಡಬೇಡಿ. ಪ್ರತಿ ದಿನ ಊಟಕ್ಕೆ ಅಡ್ಜರ್ನ್ ಮಾಡುತ್ತೀರಿ. 1.30 ಕ್ಕೆ ಅಡ್ಜರ್ನ್ ಮಾಡುತ್ತೀರಿ, 3.00 ಗಂಟೆಯವರೆಗೆ ಅವಕಾಶ ಕೊಡುತ್ತೀರಿ.

(ಗೊಂದಲ)

ಮಾನ್ಯ ಸದಸ್ಯರು : ಹಸಿವಾಗುತ್ತಿದೆ, ಊಟಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಹೊಸ ಪದ್ಧತಿ ಮಾಡುತ್ತಿದ್ದೀರಿ. ಇವರು ಹೊಸ ಪದ್ಧತಿ ಮಾಡುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು : ಇಲ್ಲ. ಮಾತನಾಡಿ.

ಮಾನ್ಯ ಸದಸ್ಯರು : ಊಟಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಅವರು ಮಾತನಾಡಲಿ.

ಮಾನ್ಯ ಸದಸ್ಯರು : ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಅವಕಾಶ ಕೊಡಿ. ಅವರು ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಏನು ಊಟಕ್ಕೆ ಹೋಗಲೇಬಾರದಾ?

(ಗೊಂದಲ)

ಶ್ರೀ ಆಲ್ಕೋಡ್ ಹನುಮಂತಪ್ಪ : ಊಟ ಆದ ಮೇಲೆ ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ದಯವಿಟ್ಟು ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ಎಂ.ಟಿ. ಕೃಷ್ಣಪ್ಪ : ಕಂಟಿನ್ಯೂ ಮಾಡಿ, ಊಟ ಮಾಡಲಿಕ್ಕೆ ಏನೂ ತೊಂದರೆ ಇಲ್ಲ.

(ಗೊಂದಲ)

ಶ್ರೀ ಉಪಾಧ್ಯಕ್ಷರು : ಅವರು ಮಾತನಾಡಲಿ. ನೀವು ಮುಂದುವರಿಸಿ.

ಶ್ರೀ ವಾಟಾಳ್ ನಾಗರಾಜ್ : ಅನೇಕ ಬಾರಿ, ಊಟಕ್ಕೆ ಮುಂದೂಡಬೇಕು ಎಂದಾಗ ಮಾನ್ಯ ಯಡಿಯೂರಪ್ಪನವರು ......

ಉಪಾಧ್ಯಕ್ಷರು : ಆಮೇಲೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಾಖಲೆಗಳನ್ನು ತೆಗೆದು ನೋಡಿ.

ಶ್ರೀ ಬಾಲರಾಜ್ ಎನ್ : ಅವರು ಮಾತು ಮುಂದುವರಿಸಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಾಖಲೆ ತೆಗೆದು ನೋಡಿ. ಸಂತಾಪ ಸೂಚನೆ ನಡೆಯುಬೇಕಾದರೆ, ಊಟ ಮಾಡುವುದಕ್ಕೆ ಹೋಗಿ ಸ್ವೀಟ್ಸ್ ತಿಂದು ಬಂದು ಅದನ್ನು ಮುಂದುವರಿಸುವುದಕ್ಕೆ ನಾವು ಇತಿಹಾಸದಲ್ಲಿ ನೋಡಿಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ : ಸ್ವಾಮಿ, ಒಂದೂವರೆ ಗಂಟೆ ಅದರ ಬಗ್ಗೆ ಸಂತಾಪ ವ್ಯಕ್ತಪಡಿಸಿದ್ದೇವೆ. ಕ್ಲೋಸ್ ಮಾಡಿ, ಫರ್ದರ್ ಮಾಡಿ ಸಮಯ ಸಾಕಾಗುತ್ತದೆ.

(ಗೊಂದಲ)

ಮಾನ್ಯ ಸದಸ್ಯರು : ಅವರಿಗೆ ಮಾತನಾಡಲು ರೈಟ್ಸೇ ಇಲ್ಲ. ಬಹುಮತವೇ ಇಲ್ಲ, ಅವರು ಮಾತನಾಡುತ್ತಿದ್ದಾರೆ. ಅವರಿಗೆ ಅವಕಾಶ ಕೊಡಬೇಡಿ.

ಉಪಾಧ್ಯಕ್ಷರು : ನೀವು ಮಾತನಾಡಿ .....

(ಗೊಂದಲ)

ಶ್ರೀ ಕೆ.ಎಂ. ವೆಂಕಟೇಶ್ : ಮಂತ್ರಿಗಳು ಊಟಕ್ಕೆ ಬಿಟ್ಟು ಬಿಡಿ ಎಂದು ಈ ಮನೆಯಲ್ಲಿ ಕೇಳುತ್ತಿದ್ದಾರೆ. ಎಂತಹ ಮರ್ಯಾದೆ ಇದು? ಮಾನ್ಯ ಮಂತ್ರಿಗಳೇ ಊಟಕ್ಕೆ ಬಿಟ್ಟು ಬಿಡಿ ಎಂದು ಕೇಳುತ್ತಿದ್ದಾರೆ.

(ಗೊಂದಲ)

ಮಾನ್ಯ ಸದಸ್ಯರು : ಬಹಳ ಅವಸರದಲ್ಲಿ ಇದ್ದಾರೆ.

ಶ್ರೀ ಕೆ.ಎಂ. ವೆಂಕಟೇಶ್ : ಮಾನ್ಯ ಮಂತ್ರಿಗಳೇ ಊಟಕ್ಕೆ ಬಿಡಿ ಎಂದು ಕೇಳುತ್ತಿದ್ದಾರಲ್ಲಾ, ಕೊನೆಗಾಲದಲ್ಲಿ ಹೇಗಾಗುತ್ತಿದೆ ನೋಡಿ?

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರೇ ನೀವು ಮಾತನಾಡಿ. ಈಗ ಈ ನಿರ್ಣಯ ಅಂಗೀಕಾರ ಆಗಬೇಕು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದ, ದೇಶದ, ಸುಮಾರು 24 ಜನ ಗಣ್ಯರು, ತ್ಯಾಗ ಜೀವಿಗಳು, ಪರಮ ಪವಿತ್ರರು, ತಮ್ಮದೇ ಆದಂತಹ ಕ್ಷೇತ್ರದಲ್ಲಿ ಪವಾಡವನ್ನು ಮಾಡಿರತಕ್ಕಂಥ ಮಹನೀಯರುಗಳು ನಮ್ಮನ್ನು ಅಗಲಿದ್ದಾರೆ. ಬಹುಶಃ ಪ್ರತಿ ಸಾರಿ ಶಾಸನಸಭೆ ಆರಂಭವಾದಾಗ ಈ ರೀತಿ ಸಂತಾಪ ಸೂಚನಾ ಸಭೆಗಳು ನಡೆದಿವೆ. ಇವತ್ತಿನ ದಿವಸ ಬಹಳ ಜನ ಗಣ್ಯರು ನಮ್ಮ ಜೊತೆಯಲ್ಲಿದ್ದವರು, ನಾವು ಕಂಡವರು, ಕಣ್ಣಾರೆ ನೋಡಿದಂತಹವರು, ತ್ಯಾಗ ಜೀವಿಗಳು, ಅವರ ಬಗ್ಗೆ ಸಂತಾಪವನ್ನು ಮಾಡಿ, ಗುಣಗಾನ ಮಾಡತಕ್ಕಂಥದ್ದು ಈ ಸದನದ ಸತ್ಸಂಪ್ರದಾಯ. ಆ ಪ್ರಕಾರ ಈ ರಾಷ್ಟ್ರದ ರಾಷ್ಟ್ರಪತಿಯವರಾಗಿ, ಶ್ರೀ ಕೆ.ಆರ್. ನಾರಾಯಣನ್ ಅವರು ದೀನದಲಿತರ, ಆಶಾಜ್ಯೋತಿಯಾಗಿ ರಾಷ್ಟ್ರಪತಿಯ ಹುದ್ದೆಗೆ ಹೆಚ್ಚಿನ ಮಹತ್ವವನ್ನು ನೀಡಿ, ಅನೇಕ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದ ಶಿಫಾರಸ್ಸುಗಳನ್ನು ಕಟುವಾಗಿ ಟೀಕಿಸಿ ಹಿಂದಕ್ಕೆ ಕಳುಹಿಸಿರತಕ್ಕಂಥ ಸಂದರ್ಭಗಳನ್ನು ನಾವು ನೋಡಿದ್ದೇವೆ. ಶ್ರೀ ಕೆ.ಆರ್. ನಾರಾಯಣನ್ ಅವರು ಆದರ್ಶನೀಯವಾಗಿ ಚರಿತ್ರೆಯಲ್ಲಿ ಉಳಿಯುತ್ತಾರೆ. ಈ ದೇಶದ ಇತಿಹಾಸದಲ್ಲಿ ಉಳಿಯತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅವರು ಪತ್ರಕರ್ತರಾಗಿಯೂ ಕೆಲಸ ಮಾಡಿದ್ದಾರೆ. ವಿದೇಶಗಳಲ್ಲಿ ನಮ್ಮ ದೇಶದ ಪರವಾಗಿ ಕೆಲಸ ಮಾಡಿದ್ದಾರೆ. ರಾಜಕಾರಣಿಯಾಗಿ ಕೆಲಸ ಮಾಡಿದ್ದಾರೆ. ಹೀಗೆ ಅನೇಕ ಕೆಲಸಗಳನ್ನು ಮಾಡಿದಂತಹ, ದೀನದಲಿತರ ಜ್ಯೋತಿ ಶ್ರೀ ಕೆ.ಆರ್. ನಾರಾಯಣನ್ ಅವರು ರಾಷ್ಟ್ರಪತಿ ಆದದ್ದು ಈ ದೇಶಕ್ಕೆ ಆದರ್ಶ. ಅವರ ನಿಧನದಿಂದ ದೇಶ ಒಬ್ಬ ದೀನದಲಿತರ ಆದರ್ಶ ವ್ಯಕ್ತಿಯನ್ನು ಕಳೆದುಕೊಂಡು ತಬ್ಬಲಿ ಆಗಿದೆ. ಶ್ರೀ ನಾರಾಯಣನ್ ಅವರು ದಿಟ್ಟ ನಿಲುವಿನ ವ್ಯಕ್ತಿ ಆಗಿದ್ದರು. ಪ್ರಾಮಾಣಿಕ ವ್ಯಕ್ತಿ ಆಗಿದ್ದರು. ರಾಷ್ಟ್ರಪತಿಯಾಗಿ ಅವರು ತೆಗೆದುಕೊಂಡಂತಹ ನಿರ್ಧಾರಗಳು ಅವಿಸ್ಮರಣೀಯವಾದಂತಹ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಪ್ರಪ್ರಥಮವಾಗಿ ಅವರು ಮತ್ತೊಂದು ಸಾರಿ ರಾಷ್ಟ್ರಪತಿ ಆಗಬೇಕಾಗಿತ್ತು. ಅವರ ನಿರ್ಧಾರಗಳು ರಾಷ್ಟ್ರಪತಿಯನ್ನಾಗಿ ಮಾಡಲಿಲ್ಲ. ನಮ್ಮ ಕೆಲವು ಪಕ್ಷದವರಿಗೆ, ಕೆಲವು ರಾಜಕಾರಣಿಗಳಿಗೆ, ಅವರ ನಿರ್ಧಾರಗಳು ಹಿಡಿಸಲಿಲ್ಲ. ಹಿಡಿಸಿದ್ದರೆ ಅವರು ಮತ್ತೆ ಒಂದು ಬಾರಿ ರಾಷ್ಟ್ರಪತಿಯಾಗಿ ಮುಂದುವರಿಯುತ್ತಿದ್ದರು. ಆದರೆ ಅವರ ನಿರ್ಧಾರಗಳು, ದಿಟ್ಟ ನಿಲುವು ಪ್ರಾಮಾಣಿಕ ಚಿಂತನೆ ರಾಷ್ಟ್ರಪತಿಯಾಗಿ ಮುಂದುವರಿಯುವುದಕ್ಕೆ ಆಗಲಿಲ್ಲ. ಆದುದರಿಂದ, ಇನ್ನು ರಾಷ್ಟ್ರಪತಿ ಸ್ಥಾನ, ರಾಜ್ಯಪಾಲರ ಸ್ಥಾನ ಇವೆಲ್ಲವೂ ಪಕ್ಷಾತೀತವಾಗಿ ಇರಬೇಕು. ರಾಜಕಾರಣಿಗಳಾದ ನಾವು ರಾಷ್ಟ್ರಪತಿಗಳನ್ನು ರಾಜ್ಯಪಾಲರುಗಳನ್ನು ರಾಜಕೀಯಕ್ಕೆ ಎಳೆಯತಕ್ಕಂಥಾದ್ದು ಸರಿಯಾದ ಮಾರ್ಗವಲ್ಲ. ರಾಷ್ಟ್ರಪತಿಗಳಾಗಲಿ, ರಾಜ್ಯಪಾಲರಾಗಲಿ ಅವರು

ಬಹಳ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆ. ಇತ್ತೀಚೆಗೆ ತಮಗೆ ಗೊತ್ತಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಿಹಾರ ರಾಜ್ಯಪಾಲರ ಮೇಲೆ ಬಂದಿರುವುದನ್ನು ನೋಡಿದಾಗ ಎಷ್ಟು ಜವಾಬ್ದಾರಿಯಿಂದ ರಾಜ್ಯಪಾಲರಾದವರು, ರಾಷ್ಟ್ರಪತಿಗಳಾದವರು ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾಗಿದೆ ಎನ್ನುವುದನ್ನು ನಾವು ಅರಿತುಕೊಳ್ಳಬೇಕಾಗಿದೆ. ಆದರೆ, ಅಷ್ಟೇ ಎತ್ತರವಾಗಿ ಕೆಲಸ ಮಾಡಿದಂತಹವರು ಶ್ರೀ ಕೆ.ಆರ್. ನಾರಾಯಣನ್‌ರವರು, ಅವರು ನಿಜಕ್ಕೂ ಈ ದೇಶದ ಮಹಾನ್ ವ್ಯಕ್ತಿ ಎನ್ನುವುದರಲ್ಲಿ ಅನುಮಾನವಿಲ್ಲ. ಶ್ರೀ ನಾರಾಯಣನ್‌ರವರ ಸ್ಮಾರಕ ದೇಶದ ಎಲ್ಲಾ ಕಡೆಗಳಲ್ಲೂ ಎಲ್ಲಾ ರಾಜ್ಯಗಳಲ್ಲೂ ಆಗಬೇಕೆನ್ನುವಂಥಾದ್ದು ನನ್ನ ವೈಯಕ್ತಿಕ ಅಭಿಪ್ರಾಯವೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಇಳಿಸುತ್ತಿದ್ದೇನೆ.

ಮತ್ತೊಬ್ಬರು ಪಿ.ಎಂ. ಸಯೀದ್‌ರವರು, ಲಕ್ಷದ್ವೀಪದಲ್ಲಿ ಜನಿಸಿ, ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿ ಕನ್ನಡದ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದಂಥ ಸಯೀದ್‌ರವರು ನಮಗೆ ಎಷ್ಟು ಹೆಮ್ಮೆಯಾಗುತ್ತದೆಂದರೆ, ಲೋಕಸಭೆಯಲ್ಲಿ ನಮ್ಮವರೇ ಒಬ್ಬರಿದ್ದಾರೆ, ನಮ್ಮವರೇ ಒಬ್ಬರು ಸಚಿವರಿದ್ದಾರೆ. ನಮ್ಮವರೇ ವ್ಯಕ್ತಿ ಅಲ್ಲಿದ್ದಾರೆ ಎನ್ನುವಷ್ಟು ನಮಗೆ ಸಂತೋಷ ಮತ್ತು ಕನ್ನಡಿಗರಿಗೆ ಹೆಮ್ಮೆ ತಂದಂಥಾದ್ದು ಅವರು ಕರ್ನಾಟಕಕ್ಕೆ ಬಂದಾಗ ಪತ್ರಕರ್ತರ ಜೊತೆ ಸಾರ್ವಜನಿಕ ಸಭೆಗಳಲ್ಲಿ ಕನ್ನಡದಲ್ಲಿಯೇ ಮಾತನಾಡುತ್ತಿದ್ದರು. ಸಯೀದ್‌ರವರು ಬೆಂಗಳೂರಿಗೆ ಬಂದಾಗ ಪತ್ರಕರ್ತರ ಜೊತೆ ಮಾತನಾಡುವಾಗ, ಬೇರೆ ಸಮಾರಂಭಗಳಲ್ಲಿ ಕನ್ನಡದಲ್ಲಿ ಮಾತನಾಡುವಾಗ ಎಷ್ಟು ಹೆಮ್ಮೆಯಾಗುತ್ತದೆಂದರೆ, ಅಷ್ಟು ಪ್ರಾಮಾಣಿಕವಾಗಿ ಅವರು ಕನ್ನಡದ ಬಗ್ಗೆ ತೀವ್ರವಾಗಿ ಆಳವಾಗಿ ಅಭ್ಯಾಸ ಮಾಡಿದವರು. ಅವರು ಕನ್ನಡ ಭಾಷೆಯಲ್ಲಿ ಮಾತನಾಡುವಾಗ ನನಗನಿಸುತ್ತದೆ, ಕನ್ನಡವನ್ನು ಎಷ್ಟು ಸ್ವಚ್ಛವಾಗಿ, ಚೆನ್ನಾಗಿ ಮಾತನಾಡುತ್ತಾರೆ ಎನ್ನುವ ಪರಿಸ್ಥಿತಿ ನಮಗೆ ನೇರವಾಗಿ ಅರ್ಥವಾಗುತ್ತಿತ್ತು. ಆ ದೃಷ್ಟಿಯಿಂದ ಸಯೀದ್‌ರವರ ನಿಧನ ವೈಯಕ್ತಿಕವಾಗಿ ಕರ್ನಾಟಕಕ್ಕೂ ನಷ್ಟವಾಗಿದೆ, ಕನ್ನಡಿಗರಿಗೂ ನಷ್ಟವಾಗಿದೆ ಕನ್ನಡ ಭಾಷೆಗೂ ನಷ್ಟವಾಗಿದೆಯೆಂದು ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ.

ನಮ್ಮ ಸದನದಲ್ಲಿ ಅನೇಕರು ಲೋಕಸಭೆಗೆ ಹೋದವರು ಕನ್ನಡದಲ್ಲಿ ಮಾತನಾಡುವುದು ಬಹಳ ಕಷ್ಟ. ಇತ್ತೀಚೆಗೆ ಲೋಕಸಭೆಯಲ್ಲಿ ಪ್ರಪ್ರಥಮವಾಗಿ ಕನ್ನಡದಲ್ಲಿ ಮಾತನಾಡಿದವರು ಅಂದರೆ ಶ್ರೀ ಜೆ.ಹೆಚ್. ಪಟೇಲರು ಮತ್ತು ಕೋಲಾರ ಜಿಲ್ಲೆಯಿಂದ ಹೋದಂಥ ಶ್ರೀ ಟಿ. ಚನ್ನಯ್ಯನವರು. ಇತ್ತೀಚೆಗೆ ನಮ್ಮಲ್ಲಿ ಶಿವಣ್ಣ ಎಂಬುವವರು ಚಾಮರಾಜನಗರದಿಂದ ಹೋಗಿರುವ ಲೋಕಸಭಾ ಸದಸ್ಯರು ಕನ್ನಡದಲ್ಲಿಯೇ ನಿರರ್ಗಳವಾಗಿ ಮಾತನಾಡುತ್ತಾರೆ ಮತ್ತು ಅದನ್ನು ದೂರದರ್ಶನದ ಮೂಲಕ ನಾವೆಲ್ಲರೂ ನೋಡಿದ್ದೇವೆ. ಅವರು ಕೊಟ್ಟ ಪ್ರಶ್ನೆಗಳಿಗೆ ಕನ್ನಡದಲ್ಲಿಯೇ ಉತ್ತರಗಳನ್ನು ಸಯೀದ್‌ರವರು ಕೊಟ್ಟಿರುವುದನ್ನು ನೋಡಿ ನಮಗೆ ಎಷ್ಟು ಸಂತೋಷವಾಯಿತು ಎಂದರೆ, ಒಂದು ರೀತಿ ಸಯೀದ್‌ರವರು ನಮ್ಮ ರಾಜ್ಯದವರಲ್ಲ. ಬೇರೆ ರಾಜ್ಯದವರು. ಆದರೆ, ನಮ್ಮ ರಾಜ್ಯದಲ್ಲೇ ವಿದ್ಯಾಭ್ಯಾಸ ಮಾಡಿದ್ದಾರೆ, ನಮ್ಮ ರಾಜ್ಯದಲ್ಲೇ ಎಲ್ಲರ ಜೊತೆಗೆ ಒಡನಾಡಿದ್ದಾರೆ. ಅವರು ಅಲ್ಲಿಗೆ ಹೋಗಿರುವುದು ನಮಗೆ ಎಷ್ಟು ಸಂತೋಷವಾಯಿತೆಂದರೆ, ಪ್ರಶ್ನೆಗಳನ್ನು ಕನ್ನಡದಲ್ಲಿಯೇ ಕೇಳಿ ನಾನು ಕನ್ನಡದಲ್ಲೇ ಉತ್ತರಿಸುತ್ತೇನೆ ಎಂದು ಹೇಳಿದರು. ಆದರೆ, ನಮ್ಮಲ್ಲಿ ಕೆಲವರಿಗೆ ಕನ್ನಡದಲ್ಲಿ ಪ್ರಶ್ನೆಗಳನ್ನು ಕೇಳುವುದಕ್ಕೆ ನಾಚಿಕೆಯಾಗಿದೆ! ಅಂತಾದ್ದರಲ್ಲಿ ನೀವು ಕನ್ನಡದಲ್ಲೇ ಪ್ರಶ್ನೆ ಕೇಳಿ, ನಾನು ಕನ್ನಡದಲ್ಲೇ ಉತ್ತರ ಕೊಡುತ್ತೇನೆಂದು ಎಲ್ಲರಿಗೂ ಬೆನ್ನು ತಟ್ಟಿ ಕನ್ನಡದಲ್ಲಿ ಪ್ರಶ್ನೆ ಕೇಳಿದವರಿಗೆ ಕನ್ನಡದಲ್ಲೇ ಉತ್ತರ ಕೊಟ್ಟಿರುವ ಒಬ್ಬ ದಿಟ್ಟ ನಿಲುವು ಇರುವವರಾಗಿದ್ದಾರೆ.

ಇನ್ನು ಶ್ರೀ ಬಿ.ಎಸ್. ಪಾಟೀಲ್ ಮತ್ತು ಶ್ರೀ ಪಿ.ಪಿ. ಹೆಗಡೆಯವರು ಅವರವರ ದೃಷ್ಟಿಯಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ, ಕೆಲಸ ಮಾಡಿದ್ದಾರೆ.

ಶ್ರೀ ವಿ. ಕೃಷ್ಣರಾವ್‌ರವರು ಕಾಂಗ್ರೆಸ್ ಅಧ್ಯಕ್ಷರಾಗಿ, ಕಾಂಗ್ರೆಸ್ ಪಕ್ಷದಲ್ಲಿ ಅಪಾರವಾಗಿ ಕೆಲಸ ಮಾಡಿದಂತಹವರು. ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ವಿ. ಕೃಷ್ಣರಾವ್‌ರವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ಕೃಷ್ಣರಾವ್ ಅವರದು ಬಹಳ ಆದರ್ಶ. ಸಾಮಾನ್ಯ ಜನರೇ ಸಿಗಲಿ, ಯಾರೇ ಸಿಗಲಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಅಷ್ಟು ಎತ್ತರದಲ್ಲಿದ್ದರೂ ಎರಡೂ ಕೈಗಳನ್ನು ಎತ್ತಿ 'ಚೆನ್ನಾಗಿದ್ದೀರಾ? ಚೆನ್ನಾಗಿದ್ದೀರಾ?' ಎನ್ನುವ ಮೃದುವಾದ, ಒಳ್ಳೆಯ ಭಾಷೆ, ಮಾತು, ಸೌಜನ್ಯ, ಸಹಕಾರ, ಪ್ರೀತಿ, ವಿಶ್ವಾಸ ಅವರಲ್ಲಿ ಇದ್ದುದು ನಿಜಕ್ಕೂ ಅವರು ಆದರ್ಶಪ್ರಾಯರೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮತ್ತೊಂದು ಬಹಳ ಅತ್ಯಂತ ದುಃಖದ ಸಂಗತಿಯೆಂದರೆ ಶ್ರೀ ಜಿ. ನಾರಾಯಣ್ ಕುಮಾರ್‌ರವರು. ಒಂದು ಗಾಡಿಯ ಎರಡು ಎತ್ತುಗಳಿದ್ದಂತೆ ನನ್ನ ಪಕ್ಷದಲ್ಲಿದ್ದಂಥ ಒಬ್ಬ ವ್ಯಕ್ತಿ ಅನೇಕ ವಿಚಾರಗಳಲ್ಲಿ ನಮ್ಮ ಮಧ್ಯೆ ವಿಚಾರ ಭೇದಗಳಿರಬಹುದು. ಆದರೆ, ಕರ್ನಾಟಕಕ್ಕೆ ಕನ್ನಡ ನಾಡಿಗೆ, ಗಡಿನಾಡಿಗೆ, ಹೊರ ನಾಡಿಗೆ, ಕನ್ನಡ ಭಾಷೆಗೆ ಸಂಬಂಧಿಸಿದಂತೆ ತಮ್ಮ ಇಡೀ ಜೀವನದ ಉದ್ದಗಲಕ್ಕೂ ತಮ್ಮ ದಿಟ್ಟ ನಿಲುವು ತೋರಿಸಿ ಹೋರಾಟ ಮಾಡಿ, ನೂರಾರು ಬಾರಿ ಜೈಲಿಗೆ ಹೋಗಿ, ಲಾಕಪ್‌ಗೆ ಹೋಗಿ, ಲಾಠಿ ಏಟು ತಿಂದವರು. ಅವರನ್ನು ಪ್ರಪ್ರಥಮ ಬಾರಿಗೆ ನಗರಸಭಾ ಸದಸ್ಯರನ್ನಾಗಿ ಮಾಡಿದೆ. ಅವರು ನಗರಸಭಾ ಸದಸ್ಯರಾಗಬೇಕೆಂದು ನಾನು ನಿಂತು ಹೋರಾಟ ಮಾಡಿದೆ. ಅವರು ಈ ಸದನದ ಸದಸ್ಯರಾಗಿದ್ದರು. ಅವರಿಗೆ ಎಷ್ಟು ಧೈರ್ಯವೆಂದರೆ, ಯಾರೇ ಆಗಿರಲಿ, ಎಂತಹವರೇ ಆಗಿರಲಿ ಯಾವುದೇ ಸಭೆ-ಸಮಾರಂಭ ಇರಲಿ, ಅವರ ನಿಲುವು ನಿಜಕ್ಕೂ ಅತ್ಯಂತ ಪ್ರಿಯವಾದುದು. ಕನ್ನಡದ ಪ್ರಶ್ನೆ ಬಂದಾಗ, ರಾಜ್ಯದ ಪ್ರಶ್ನೆ ಬಂದಾಗ ಮತ್ತು ಕನ್ನಡ ಭಾಷೆಯ ಪ್ರಶ್ನೆ ಬಂದಾಗ ಮೈಮರೆತು ನಿಂತು ಕೆಲಸ ಮಾಡಿದಂತಹವರು. ಅವರ ನಿಧನ ನಿಜಕ್ಕೂ ಅತ್ಯಂತ ಶೋಚನೀಯವಾದುದು. ಸಿಂಧ್ಯಾರವರು ಹೇಳಿದ ಪ್ರಕಾರ ಅವರ ಸಂಸಾರದ ಬಗ್ಗೆ ನಾವು ಚಿಂತನೆ ಮಾಡಬೇಕು. ಕರ್ನಾಟಕ ಸರ್ಕಾರ ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕಾಗಿದೆ. ಮತ್ತೆ ಅವರ ಸಂಸಾರಕ್ಕೆ ಸರ್ಕಾರ ಎಷ್ಟು ಸಹಕಾರ ಕೊಡಬಹುದು, ಸಹಾಯ ಮಾಡಬಹುದು, ಯಾವ ದಿಕ್ಕಿನಲ್ಲಿ ಕೆಲಸ ಮಾಡಬಹುದು ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಬೆಂಗಳೂರು ಮಹಾನಗರಪಾಲಿಕೆಯು ಒಂದು ಬಡಾವಣೆಗೆ ಜಿ. ನಾರಾಯಣ್‌ಕುಮಾರ್‌ರವರ ಹೆಸರಿಡಲು ನಿರ್ಣಯಿಸಿದೆ. ಮತ್ತು ಒಂದು ಉದ್ಯಾನವನಕ್ಕೂ ಅವರ ಹೆಸರಿಡಲು ನಿರ್ಣಯಿಸಿದೆ. ಆ ನಿರ್ಣಯ ಸರ್ಕಾರಕ್ಕೆ ಬಂದಿದೆ. ಸರ್ಕಾರ ಆ ನಿರ್ಣಯವನ್ನು ಒಪ್ಪಿ ಕಳುಹಿಸಿಕೊಡುವುದು ಬಹಳ ಒಳ್ಳೆಯ ಕೆಲಸ. ಅವರು ಅನೇಕ ಸಂದರ್ಭಗಳಲ್ಲಿ, ಅವರು ಸರ್ಪ ತೋಟದಲ್ಲಿ ನನ್ನೊಂದಿಗೆ ಮಲಗಿದ್ದಾರೆ. ಭೂಗತವಾಗಿ ಅನೇಕ ಕಡೆಗಳಿಗೆ ಹೋಗಿದ್ದೇವೆ, ಅನೇಕ ವಿಧಗಳಲ್ಲಿ ಒಂದೊಂದು ನೆನಪುಗಳು, ಸುಮಾರು ಮೂವತ್ತು ವರ್ಷಗಳ ಕಾಲ ಜೊತೆಯಲ್ಲಿದ್ದುಕೊಂಡು ನಡೆಸಿದ ಹೋರಾಟದ ಅನೇಕ ನೆನಪುಗಳು, ಇವತ್ತಿಗೂ ಕನ್ನಡಿಗರಿಗೆ, ಕರ್ನಾಟಕಕ್ಕೆ, ಕನ್ನಡ ಭಾಷೆಗೆ, ಎಷ್ಟು ಅತ್ಯಂತ ಘೋರ ಅನ್ಯಾಯವಾಗಿದೆ ಎಂಬುದನ್ನು ಮನಗಂಡು ಹೋರಾಟ ನಡೆಸಿದವರು. ಅವರ ನಿಧನ ನಿಜಕ್ಕೂ

ರಾಷ್ಟ್ರಕ್ಕೆ ಆದ ದೊಡ್ಡ ದುರಂತ. ಅವರು ಕರ್ನಾಟಕ ಚಲನಚಿತ್ರ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದರು. ನಗರಸಭೆಗೆ ಎರಡು ಸಲ ಶಾಸಕರಾಗಿ ಉತ್ತಮವಾದ ಕೆಲಸ ಮಾಡಿರತಕ್ಕಂಥವರು. ಅವರಲ್ಲಿ ಹಿಂದುಳಿದ ವರ್ಗ ಮತ್ತು ಮುಂದುವರೆದ ವರ್ಗ ಎಂಬ ಭಾವನೆ ಅವರಲ್ಲಿ ಎಂದೂ ಇರಲಿಲ್ಲ. ಒಂದೇ ದಿಟ್ಟ ನಿಲುವು. ಒಳ್ಳೆಯ ಕನ್ನಡಿಗ, ಕನ್ನಡದ ಪರವಾಗಿ ಹೋರಾಟ ಮಾಡಿದ ದಿಟ್ಟ ನಿಲುವು ಇದ್ದಂತಹವರು.

ಶ್ರೀ ಶಂಕರ್ ಎಸ್. ಕರನಿಂಗ್ ಬಹಳ ಒಳ್ಳೆಯ ವ್ಯಕ್ತಿ. ಅದೇ ರೀತಿ ಶ್ರೀ ಬಾಬುರಾವ್ ಅಣ್ಣಪ್ಪ ಬೋಳಶೆಟ್ಟರು ಬಹಳ ಎತ್ತರದ ವ್ಯಕ್ತಿ ಶ್ರೀ ಕೆ.ಎಂ. ಪುಟ್ಟು, ಇವರು ಮಂಡ್ಯದಲ್ಲಿದ್ದ ಒಬ್ಬ ಬಹಳ ಸರಳ ವ್ಯಕ್ತಿ. ಸಹಕಾರ ಕ್ಷೇತ್ರದಲ್ಲಿ ಅಪಾರವಾಗಿ ಕೆಲಸ ಮಾಡಿದಂತಹವರು. ಇವರೆಲ್ಲರೂ ದಿವಂಗತ ಶ್ರೀ ಶಂಕರೇಗೌಡರ ಶಿಷ್ಯರು. ಒಳ್ಳೆಯ ಕೆಲಸ ಮಾಡಿ ಅಪಾರವಾಗಿ ದುಡಿದಂತಹ ವ್ಯಕ್ತಿ ಶ್ರೀ ಕೆ.ಎಂ. ಪುಟ್ಟುರವರು.

ಅದೇ ರೀತಿ ಶ್ರೀ ಯು.ಕೆ. ಶಾಮಣ್ಣನವರು ಮತ್ತು ಶ್ರೀ ಭೀಮಸೇನಿ ಕೊಂಡಯ್ಯನವರೂ ಕೂಡ ಅಷ್ಟೇ ಪ್ರಾಮಾಣಿಕವಾಗಿ ಕೆಲಸ ಮಾಡಿದಂತಹವರಾಗಿದ್ದಾರೆ. ಇನ್ನು ಶ್ರೀ ಸಿ.ವಿ. ಪಾಡಶಲಕಟ್ಟಿ ಅವರ ಕುರಿತು ಹೇಳುವುದಾದರೆ, ಒಮ್ಮೆ ನಾನು ಅವರ ಊರಿಗೆ ಹೋಗಿದ್ದೆ. ಎಷ್ಟು ಒಳ್ಳೆಯ ಜನರೆಂದರೆ, ಅಷ್ಟು ಕೆಲಸ ಮಾಡಿದ್ದಾರೆ. ಶಿಕ್ಷಣ ಸಂಸ್ಥೆಗಳಿಗೆ ಅಪಾರವಾದ ಸೇವೆ ಮಾಡಿರತಕ್ಕಂಥವರು.

ಇನ್ನು ಶ್ರೀ ಬಿ.ಹೆಚ್. ಲಕ್ಷ್ಮಣಯ್ಯನವರು ನಮಗೆ ಆತ್ಮೀಯರು ಆಗಿದ್ದಂಥವರು. ಇವರೆಲ್ಲರ ಅಗಲಿಕೆ ನಿಜಕ್ಕೂ ನೋವು ತರುತ್ತದೆ. ಅದೇ ರೀತಿ ಶ್ರೀ ಎಸ್. ಚನ್ನಬಸವಯ್ಯನವರು ನಿಜಕ್ಕೂ ಅವರ ಕೊನೆಯ ದಿನಗಳಲ್ಲಿ ಅವರು ಪಟ್ಟ ಕಷ್ಟ. ಅನಾರೋಗ್ಯದಿಂದ ತಾವು ಮತ್ತು ತಮ್ಮ ಮನೆಯವರಿಬ್ಬರೇ ಅನಾರೋಗ್ಯದಿಂದ ಇದ್ದಂತಹವರು. ಅವರು ಕರ್ನಾಟಕ ಸರ್ಕಾರಿ ನೌಕರರ ಸಂಘವನ್ನು ಬೆಳೆಸುವುದರಲ್ಲಿ ಅವರ ಪಾತ್ರ ಅಪಾರವಾದುದು. ಹಿಂದೆ ಮೇರಿ ದೇವಾಸಿಯ ಎಂಬುವವರು ಮೊದಲಿಗೆ ಇದ್ದರು. ಅದಾದ ನಂತರ ಬಂದಂಥ ಗುಂಪಿನಲ್ಲಿ ಶ್ರೀ ಚನ್ನಬಸವಯ್ಯನವರು ಇಡೀ ಕರ್ನಾಟಕದಲ್ಲಿ ನೌಕರರ ಶಕ್ತಿಯುತವಾದ ಸಂಘವನ್ನು ಸಂಘಟಿಸಿ ಕೆಲಸ ಮಾಡಿದಂತಹವರು. ನಿಜಕ್ಕೂ ಅವರ ಕೊನೆಗಾಲದಲ್ಲಿ ಕಾಲು, ಶರೀರ, ಕಿಡ್ನಿ ಮತ್ತು ಎಲ್ಲಾ ರೀತಿಯ ತೊಂದರೆ ಅನುಭವಿಸಿ ಅವರು ತೀರಿಕೊಂಡಿದ್ದಾರೆ. ಅವರ ನಿಧನದಿಂದ ನಮಗೆ ಶಿಕ್ಷಣ ಕ್ಷೇತ್ರಕ್ಕೆ ಮತ್ತು ನೌಕರ ಜನಾಂಗಕ್ಕೆ ಎಲ್ಲಾ ರೀತಿಯ ತೊಂದರೆಯಾಗಿದೆ ಎನ್ನುವ ಮಾತನ್ನು ತಮಗೆ ನಾನು ಮನವರಿಕೆ ಮಾಡುತ್ತಿದ್ದೇನೆ. ಡಾ: ಎಂ.ಆರ್. ತಂಗಾರವರು ನಿಜವಾಗಿಯೂ ನಾವು ಅವರು ಬಹಳ ಸ್ನೇಹಿತರು. ನಾವು ದೆಹಲಿಗೆ ಹೋಗಿದ್ದಾಗ, ಕೊನೆಯದಿನಗಳಲ್ಲಿ ನಾವು ಅವರು ಇಬ್ಬರೇ ಒಂದು ಕಾರಿನಲ್ಲಿ ಇಡೀ ದೆಹಲಿಯ ಸುತ್ತ ಎಲ್ಲೆಲ್ಲಿ ಏನೇನಿದೆ ಎಂದು ನೋಡೋಣವೆಂದು ಹೋಗಿದ್ದೆವು. ಬಹಳ ಎತ್ತರವಾದಂಥ ವ್ಯಕ್ತಿ ಪ್ರಾಜ್ಞರು, ಅತ್ಯಂತ ಸ್ನೇಹಿತರು, ಉತ್ತಮವಾದಂಥ ವಾಗ್ಮಿಗಳು, ಒಳ್ಳೆಯ ರಾಜಕಾರಣಿಯಾಗಿ ಹಾಗೂ ಒಳ್ಳೆಯ ವೈದ್ಯರಾಗಿ ಕೆಲಸ ಮಾಡಿರತಕ್ಕಂಥ ಮಹಾನ್ ವ್ಯಕ್ತಿ ಅದೇ ರೀತಿ, ಡಾ: ಹೆಚ್.ಎಲ್. ನಾಗೇಗೌಡರು. ಇಡೀ ಜಾನಪದ ಲೋಕವೇ ಕಣ್ಣೀರಿಡುವ ಪರಿಸ್ಥಿತಿ ನಿರ್ಮಾಣವಾಗಿದೆ, ಹೆಚ್.ಎಲ್. ನಾಗೇಗೌಡರು ಅಧಿಕಾರಿಗಳಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಸಾಹಿತಿಗಳಾಗಿ, ಜಾನಪದದ ಅಗ್ರಗಣ್ಯರಾಗಿ ಜಾನಪದ ಲೋಕವೊಂದನ್ನು ಸೃಷ್ಟಿ ಮಾಡಿ ಹೊಸ ಶಕ್ತಿಯನ್ನು ಕನ್ನಡದ ಕುಲಕೋಟಿಗೆ ತಂದಂಥ ಶ್ರೀಮಾನ್ ನಾಗೇಗೌಡರ ನಿಧನ ನಿಜಕ್ಕೂ ನಮಗರ ಅಪಾರವಾದಂಥ ನೋವನ್ನು ತಂದಿದೆ. ಅವರ ನೂರಾರು ವರ್ಷಗಳ

ಕಾಲ ಉಳಿಯತಕ್ಕ ಕೆಲಸ ಮೈಸೂರು ಮತ್ತು ಬೆಂಗಳೂರಿಗೆ ಬರುವ ರಸ್ತೆಯಲ್ಲಿ ರಾಮನಗರದಿಂದ ಸ್ವಲ್ಪ ಮುಂದೆ ಹೋದಾಗ ಆ ಜಾನಪದ ಲೋಕ ಎದ್ದು ಕಾಣುತ್ತದೆ, ಆ ಲೋಕವೇ ನಾಗೇಗೌಡರು ನಿಧನರಾಗಿಲ್ಲ, ಅವರು ಬದುಕಿದ್ದಾರೆ ಎಂಬ ಶಕ್ತಿ ಅಲ್ಲಿ ನಮಗೆ ಕಾಣುತ್ತದೆ. ನನಗನಿಸುತ್ತದೆ. ನಾಗೇಗೌಡರು ದಕ್ಷ ಅಧಿಕಾರಿಯಾಗಿದ್ದರು, ಪ್ರಾಮಾಣಿಕ ಅಧಿಕಾರಿಯಾಗಿದ್ದರು, ಯಕ್ಷಗಾನದಲ್ಲಿ, ಜಾನಪದದಲ್ಲಿ, ಗ್ರಾಮೀಣ ಸೊಗಡನ್ನು ತರುವುದರಲ್ಲಿ ಅಪಾರವಾದ ಕೆಲಸ ಮಾಡಿದ್ದಾರೆ, ಬಹುಶಃ ನನಗನ್ನಿಸುತ್ತದೆ ಅವರು ಇಡೀ ಕರ್ನಾಟಕದ ಉದ್ದಗಲಕ್ಕೂ ಹಳ್ಳಿಗಾಡಿನ ಜನರನ್ನು ಭೇಟಿ ಮಾಡಿ ಜಾನಪದ ಸಮಗ್ರವಾದಂಥ ವಿಚಾರವನ್ನು ಚಿಂತನಮಂತನ ಮಾಡಿ ಜಾನಪದ ಲೋಕ ಒಂದು ವಿಶ್ವವಿದ್ಯಾನಿಲಯ ಎನ್ನತಕ್ಕಂಥ ಎತ್ತರಕ್ಕೆ ಬೆಳೆಸಿದಂಥ ವ್ಯಕ್ತಿ ಶ್ರೀಮಾನ್ ನಾಗೇಗೌಡರು. ನಾಗೇಗೌಡರ ನಿಧನದಿಂದ ಅಪಾರವಾಗಿ ನಷ್ಟವಾಗಿದೆ, ಅನೇಕ ಪ್ರಶಸ್ತಿಗಳನ್ನು ಪಡೆದಿರತಕ್ಕಂಥ ನಾಗೇಗೌಡರು ನಮ್ಮ ಮುಂದೆ ಇವತ್ತು ಇಲ್ಲ, ಅವರೇ ಕಟ್ಟಿದಂಥ ಜಾನಪದ ಲೋಕ ಅವರ ಸ್ಮಾರಕವಾಗಿದೆ. ಡಾ: ಎಂ.ಸಿ. ಮೋದಿಯುವರು ಬಹುಶಃ ಕೆಂಗಲ್ ಹನುಮಂತಯ್ಯನವರು ಆ ಕಾಲದಲ್ಲಿ ಮುಖ್ಯಮಂತ್ರಿಗಳು. ಡಾ: ಎಂ.ಸಿ. ಮೋದಿಯವರು ಕೇವಲ ಕಣ್ಣಿನ ಡಾಕ್ಟರ್ ಆಗದೆಯೇ ಡಾ: ಹರ್ಡಿಕರ್‌ರವರು ಸ್ಥಾಪನೆ ಮಾಡಿದಂಥ ಭಾರತ ಸೇವಾದಳದಲ್ಲಿ ಕೆಲಸ ಮಾಡದಂಥವರು. ಡಾ: ಹರ್ಡಿಕಲರ್‌ರವರು ಅಪಾರವಾದ ನಂಬಿಕೆಯನ್ನು ಇಟ್ಟುಕೊಂಡಿದ್ದಂಥ ವ್ಯಕ್ತಿ ಅಂದರೆ ಡಾ: ಮೋದಿಯವರು. ಡಾ: ಮೋದಿಯವರ ವ್ಯಕ್ತಿತ್ವವನ್ನು ನೋಡಿದರೆ, ದೇಶವಿದೇಶದ ಪಂಡಿತರು, ಪ್ರಾಜ್ಞರೆಲ್ಲ ಏನಿವರ ಕೈಚಳಕ ಎಷ್ಟು ಕೈಚಳಕ ಇವರದ್ದು? ಎರಡೆರಡು ನಿಮಿಷಕ್ಕೆ ಒಂದು ಕಣ್ಣಿನ ಪೊರೆಯನ್ನು ತೆಗೆಯುವುದರ ಮೂಲಕ ಸುಮಾರು ಒಂದೂವರೆ ಕೋಟಿಗೂ ಮೇಲ್ಪಟ್ಟು ಜನರ ಕಣ್ಣಿನ ಪೊರೆಯನ್ನು ತೆಗೆದು ಅಪಾರವಾದ ಸೇವೆ ಮಾಡಿರತಕ್ಕವರು. ಡಾ: ಎಂ.ಸಿ. ಮೋದಿಯವರು. ಡಾ: ಎಂ.ಸಿ. ಮೋದಿಯವರ ಸಮಾದಿ ಅವರ ಕ್ಷೇತ್ರದಲ್ಲಿ ಬಹುಶಃ ಬಸವೇಶ್ವರ ನಗರದಲ್ಲಿ ಅವರ ಕಣ್ಣಿನ ಆಸ್ಪತ್ರೆ. ಇದೆ, ಆ ಆಸ್ಪತ್ರೆಯ ಆವರಣದಲ್ಲೇ ಅವರ ಸಮಾದಿಯಾಯಿತು. ನನಗನ್ನಿಸುತ್ತದೆ ಒಬ್ಬ ಆದರ್ಶವಾದಂಥ ವ್ಯಕ್ತಿ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಬಹಳ ಕೆಲಸ ಮಾಡಿರತಕ್ಕವರು. ಎಷ್ಟು ಪ್ರಶಸ್ತಿಗಳು. ಡಾ: ರಾಜೇಂದ್ರಪ್ರಸಾದ್‌ರವರಿಂದ ಹಿಡಿದು ಅನೇಕ ರಾಷ್ಟ್ರಪತಿಗಳಿಂದ ಪ್ರಶಸ್ತಿಯನ್ನು ಪಡೆದಿರತಕ್ಕಂಥ ವ್ಯಕ್ತಿ, ಸುಮಾರು ಐವತ್ತು ವರ್ಷಗಳ ಕಾಲ ನಿರಂತರವಾಗಿ ಕೆಲಸ ಮಾಡಿರತಕ್ಕಂಥ ಮಹಾನ್ ವ್ಯಕ್ತಿ, ಅವರ ನಿಧನದಿಂದ ನಮಗೆ ಅಪಾರವಾದ ನಷ್ಟವಾಗಿದೆ. ಇನ್ನು ಶಾಂತಾದೇವಿ ಮಾಳವಾಡ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವರದ್ದೇ ಆದ ಶಕ್ತಿ, ಅಪಾರವಾಗಿ ಕೆಲಸ ಮಾಡಿದ್ದಾರೆ, ಅವರ ಅಗಲಿಕೆಯೂ ನಮಗೆ ನೋವನ್ನು ತಂದಿರತಕ್ಕ ವಿಚಾರ. ಎಲ್.ಆರ್. ಹೆಗ್ಡೆಯವರು, ಅವರು ತಮ್ಮದೇ ಆದಂಥ ಜಾನಪದ ಕ್ಷೇತ್ರದಲ್ಲಿ ಅಪಾರವಾದ ಕೆಲಸ ಮಾಡಿರತಕ್ಕವರು. ಡಾ: ಡಿ.ಎಂ. ನಂಜುಂಡಪ್ಪನವರು ಕರ್ನಾಟಕದ ಇತಿಹಾಸದಲ್ಲಿ ಹೋಗತಕ್ಕವರು, ಇತಿಹಾಸಕಾರರು, ಚರಿತ್ರಾಕಾರರು. ಚರಿತ್ರೆಯನ್ನು ಬರೆಯತಕ್ಕವರು ನಂಜುಂಡಪ್ಪನವರ ಚರಿತ್ರೆಯಲ್ಲಿ ಅವರ ಹೆಸರನ್ನು ಸೇರಿಸಬೇಕಾಗುತ್ತದೆ. ನನಗನ್ನಿಸುತ್ತದೆ ಡಾ: ಡಿ.ಎಂ. ನಂಜುಂಡಪ್ಪನವರು ಒಬ್ಬ ಅಧಿಕಾರಿಯಾಗಿ ಇರಲಿಲ್ಲ, ಒಬ್ಬ ಸಂತ, ಶರಣ, ಪ್ರಾಜ್ಞ, ಚಿಂತಕ ಎಲ್ಲಾ ಇರತಕ್ಕವರು. ಇಂಥ ಮಹಾನ್ ವ್ಯಕ್ತಿಗೆ ಭಾರತ ರತ್ನ ಪ್ರಶಸ್ತಿಯನ್ನು ಕೊಡತಕ್ಕದ್ದು. ಮರಣೋತ್ತರ ಪ್ರಶಸ್ತಿಯನ್ನು ಕೊಡತಕ್ಕದ್ದು ನಿಜಕ್ಕೂ

ಯೋಗ್ಯವೆಂದು ನನಗನ್ನಿಸುತ್ತದೆ. ಅವರು ಬದುಕಿರುವಾಗಲೆ ಉತ್ತರ ಕರ್ನಾಟಕವನ್ನು ಮಾತ್ರ ಹಿಂದುಳಿದ ಪ್ರದೇಶಕ್ಕೆ ಸೇರಿಸದೆ ನಮ್ಮ ಚಾಮರಾಜನಗರ ಜಿಲ್ಲೆಯನ್ನು ಸಹ ಹಿಂದುಳಿದ ಪ್ರದೇಶಕ್ಕೆ ಸೇರಿಸಿದ್ದಾರೆ. ಇವರ ಇಡೀ ಜೀವನದ ಉದ್ದಕ್ಕೂ ನಾನು ಹಾಸುಹೊಕ್ಕಾಗಿ ನೋಡಿದ್ದೇನೆ. ಅವರು ಪ್ರಾಧ್ಯಾಪಕರಾಗಿದ್ದಾಗ, ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದಾಗ ಅವರು ಚಿಂತನಾ ಶೀಲರಾಗಿದ್ದಾಗ ಮತ್ತು ಅವರು ನಡೆದಂಥ ದಾರಿಯಲ್ಲಿ ಅನೇಕ ಸಂದರ್ಭಗಳಲ್ಲಿ ನಮಗೂ ಅವರಿಗೂ ನಿಕಟವಾದಂಥ ಬಾಂಧವ್ಯ ವಿಶ್ವಾಸ ಇದೆ. ಮಾನ್ಯ ಮಾಧುಸ್ವಾಮಿಯವರು ಹೇಳಿದ ಮಾತಿಗೆ ನಾನು ಬೆಂಬಲ ಕೊಡುತ್ತೇನೆ, ಇದು ಈ ಸಂತಾಪ ಸೂಚನೆಯಲ್ಲಿ ಬರಬಾರದಿತ್ತು. ಇದನ್ನು ಕೇಳಿದರೆ ಅದಕ್ಕೆ ನಾನಾ ರೀತಿಯ ಕತೆಗಳು ಬರುತ್ತದೆ. ನನಗನ್ನಿಸುತ್ತದೆ ಡಾ: ನರಸಿಂಹಯ್ಯನವರು ಎತ್ತರವಾದ ವ್ಯಕ್ತಿ, ಅವರ ಗೌರವಾರ್ಥವಾಗಿ ಒಂದು ದಿನ ರಜೆ ಕೊಟ್ಟಿರಿ. ನೀವು ಶಾಸನ ಸಭೆಯಲ್ಲಿ ತಾರತಮ್ಯ ಮಾಡಲು ಆಗುವುದಿಲ್ಲ. ಏಕೆ ತಾರಾತಮ್ಯ ಮಾಡುತ್ತೀರಿ? ಇವರಿಗೂ ರಜೆ ಕೊಡಿ. ಡಾ: ನಂಜುಂಡಪ್ಪ, ಡಾ: ನಾಗೇಗೌಡರು, ಡಾ: ಎಂ.ಸಿ. ಮೋದಿಯವರು ಸತ್ತಿದ್ದಾರಲ್ಲ, ರಜಾ ಕೊಡಿ, ರಜಾ ಕೊಡಿ ಎಂದ ತಕ್ಷಣ ಕೆಲವರಿಗೆ ಹಿಡಿಸುವುದಿಲ್ಲ. ನನಗೆ ಇವತ್ತಿನ ಪರಿಸ್ಥಿತಿ ಗೊತ್ತಿದೆ, ಆದರೆ ರಜೆ ಕೊಡತಕ್ಕದ್ದು, ಒಬ್ಬರಿಗೆ ಕೊಟ್ಟು ಮತ್ತೊಬ್ಬರಿಗೆ ಕೊಡುವುದಿಲ್ಲವೆಂದರೆ ನಮ್ಮ ಈ ಸದನ ಎಲ್ಲೋ ಒಂದು ಕಡೆ ಈ ಜನರಿಗೆ ತಪ್ಪುದಾರಿಯನ್ನು ತೋರಿಸುತ್ತಿದೆ. ತಪ್ಪು ಸಂದೇಶವನ್ನು ನಾವು ಕೊಟ್ಟಂತಾಗುತ್ತದೆ, ಇವರುಗಳು ಸತ್ತಾಗ ಏಕೆ ರಜೆ ಕೊಡುವುದಿಲ್ಲ? ಸರ್ಕಾರ ತೀರ್ಮಾನ ತೆಗೆದುಕೊಳ್ಳಿ. ಏಕೆ ತೆಗೆದುಕೊಳ್ಳಬಾರದು? ನಿಮ್ಮ ಉದ್ದೇಶವೇನು? ಒಬ್ಬರಿಗೆ ಒಂದೊಂದು ರೀತಿ ಮಾಡುವುದಲ್ಲ. ಅವರ ಬಗ್ಗೆ ಅಪಾರವಾದ ಗೌರವವಿದೆ, ನಾನು ಮತ್ತು ಮಾನ್ಯ ಮಾಧುಸ್ವಾಮಿಯವರು ಮುಖ್ಯಮಂತ್ರಿಯವರಿಗೆ ಹೇಳಿದೆವು. ಈ ರೀತಿ ನೀವು ರಜೆ ಕೊಟ್ಟರೆ ನಮ್ಮದೇನು ಅಭ್ಯಂತರವಿಲ್ಲ. ಆದರೆ ಇನ್ನು ಮುಂದೆ ಎಲ್ಲಾ ರೀತಿಯ ರಜೆಗಳನ್ನು ಕೊಡಬೇಕಾಗುತ್ತದೆ ಎಂಬ ಮಾತನ್ನು ಆವತ್ತು ಹೇಳಿದೆವು. ಮಾನ್ಯ ಮುಖ್ಯಮಂತ್ರಿಗಳು ಕೊಡೋಣ, ನನ್ನದೇನು ಅಭ್ಯಂತರವಿಲ್ಲವೆಂದು ಹೇಳಿದರು. ಅನೇಕರು ಇಂಥ ದೊಡ್ಡ ದೊಡ್ಡ ಮಹನೀಯರು ನಿಧನರಾದಾಗ ರಜೆ ಕೊಟ್ಟರೆ ತಪ್ಪೇನಿಲ್ಲವೆಂದು ಹೇಳಿದ್ದರು. ನಾನು ಹೇಳುತ್ತಿದ್ದೇನೆ, ಮಾನ್ಯ ಮಾಧುಸ್ವಾಮಿಯವರು ಹೇಳುತ್ತಾರೆ ನೀವು ಸರ್ಕಾರಕ್ಕೆ ಹೇಳಬೇಕು. ನಾವು ಹಿಂದೆ ರಜೆ ಕೊಟ್ಟಿದ್ದೇವೆ. ಇವರಿಗೇಕೆ ರಜೆ ಕೊಡಬಾರದು? ರಜೆ ಕೊಟ್ಟು ಅವರ ಗೌರವಕ್ಕೆ ಹೆಚ್ಚಿನ ಶಕ್ತಿ ಕೊಡೋಣ ಎಂಬ ವಿಚಾರದಲ್ಲಿ ತಾವು ಚಿಂತನೆ ಮಾಡಬೇಕು. ಡಾ: ನಂಜುಂಡಪ್ಪನವರ ವರದಿ, ಅವರ ಆತ್ಮಕ್ಕೆ ಶಾಂತಿ ಬರಬೇಕು ಎನ್ನುವುದಾದರೆ ನೀವು ಡಾ: ನಂಜುಂಡಪ್ಪನವರ ವರದಿಯನ್ನು ಜಾರಿಗೆ ತರಬೇಕು, ಬರಿ ಮಾತಿನಿಂದ ಇದು ಆಗುವುದಿಲ್ಲ. ಡಾ: ನಂಜುಂಡಪ್ಪನವರ ವರದಿಯನ್ನು ಜಾರಿಗೆ ತರುವ ಮೂಲಕ ಡಾ: ನಂಜುಂಡಪ್ಪನವರ ಆತ್ಮಕ್ಕೆ ಶಾಂತಿ ಬರುತ್ತದೆ. ಇಲ್ಲದಿದ್ದರೆ ಅದು ಸರಿಯಾದ ಮಾರ್ಗವಲ್ಲ. ಆ ದೃಷ್ಟಿಯಿಂದ ಡಾ: ನಂಜುಂಡಪ್ಪನವರು ಒಂದು ವ್ಯಕ್ತಿಯಲ್ಲ. ಮಹಾನ್ ಶಕ್ತಿ, ಅಪಾರವಾದ ಶಕ್ತಿ, ಜನಸಾಮಾನ್ಯರಿಂದ ಬಂದಂಥ ಒಬ್ಬ ಅದ್ಭುತವಾದಂಥ ವ್ಯಕ್ತಿ ಜನಸಾಮಾನ್ಯರಿಂದ ಮೇಲಕ್ಕೆ ಬಂದಂಥ ಮಹಾನ್ ವ್ಯಕ್ತಿ, ಅದನ್ನು ಅಷ್ಟು ಲಘುವಾಗಿ ಸರ್ಕಾರ ತೀರ್ಮಾನ ಮಾಡತಕ್ಕದ್ದು ಒಳ್ಳೆಯ ಸಂದರ್ಭವಲ್ಲ, ಒಳ್ಳೆಯ ಸೂಚನೆಯಲ್ಲ, ಮೈಸೂರುಮಠ್, ಇವರು ಉತ್ತರ ಕರ್ನಾಟಕದಿಂದ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ವರದಿಗಾರರಾಗಿ ಬಂದರು. ಎಷ್ಟು ಶಕ್ತಿಯುತವಾದಂಥ ವರದಿಗಾರರು, ಅವರ ಭಾಷೆ, ಅವರ

ವರದಿ, ಅವರು ಅನೇಕ ವರ್ಷಗಳ ಕಾಲ ಈ ಸದನದ ವರದಿಯನ್ನು ಮಾಡಿದ್ದಾರೆ. ಡೆಕ್ಕನ್‌ಹೆರಾಲ್ಡ್ ಪತ್ರಿಕೆಯಲ್ಲಿ ಶಕ್ತಿಯುತವಾಗಿ ಮತ್ತು ಉತ್ತರ ಕರ್ನಾಟಕದ ಬೇರೆ ಪತ್ರಿಕೆಯಲ್ಲೂ ಸಹ ಕೆಲಸ ಮಾಡಿದ್ದಾರೆ. ಅಲ್ಲಿಂದ ಇಲ್ಲಿಗೆ ಬಂದು ಅಪಾರವಾದ ಕೆಲಸ ಮಾಡಿದಂಥವರು ಮೈಸೂರುಮಠ್, ಮೈಸೂರು ಮಠ್ ಮತ್ತು ರಘುರಾಂಶೆಟ್ಟಿ, ಇವರಿಬ್ಬರ ಪೈಕಿ ಪ್ರಜಾವಾಣಿಯಲ್ಲಿ ರಘುರಾಂ ಶೆಟ್ಟಿ ಅವರು ಈ ಕಡೆ ಮೈಸೂರುಮಠ್. ಇವರಿಬ್ಬರು ಮುಖ್ಯ ವರದಿಗಾರರಾಗಿ ಬಹಳ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿದಂಥವರು. ಪತ್ರಿಕಾರಂಗದಲ್ಲಿ ಅಪಾರವಾದ ಕೆಲಸ ಮಾಡಿದಂಥವರು. ಈ ರೀತಿ ಇವರಿಗೂ ಮರಣೋತ್ತರ ಪ್ರಶಸ್ತಿಗಳನ್ನು ಕೊಡುವುದರ ಮೂಲಕ ಪತ್ರಿಕಾ ರಂಗಕ್ಕೂ ಒಂದು ಶಕ್ತಿ ಬಂದಂತಾಗುತ್ತದೆ ಎಂಬ ಮಾತನ್ನು ತಮಗೆ ನಾನು ತಿಳಿಸುತ್ತಿದ್ದೇನೆ.

ಕೆ. ರಾಜಾರಾವ್ ಎಂದರೆ ಅವರು ಧರಿಸುತ್ತಿದ್ದಂತಹ ವಿಶೇಷವಾದಂತಹ ಪೈಜಾಮ ಮತ್ತು ಜುಬ್ಬಾ ನೆನಪಿಗೆ ಬರುತ್ತದೆ. ಅವರು ತುಮಕೂರು ಜಿಲ್ಲೆಯವರಾಗಿದ್ದರು. ಅವರು ಸಂಯುಕ್ತ ಕರ್ನಾಟಕದಲ್ಲಿ ವರದಿಗಾರರಾಗಿದ್ದರು. ತಮಗೆಲ್ಲರಿಗೂ ಗೊತ್ತಿರುವಂತೆ ಶ್ರೀ ಆರ್.ಡಿ. ಕಿತ್ತೂರುರವರು ಮಾನ್ಯ ದೇವರಾಜ್ ಅರಸ್ ಅವರ ಕಾಲದಲ್ಲಿ ಮಂತ್ರಿಗಳಾಗಿದ್ದರು. ಸಂಯುಕ್ತ ಕರ್ನಾಟಕದಲ್ಲಿ ಒಂದು ವರದಿಯನ್ನು ಶ್ರೀಯುತ ರಾಜಾರಾವ್‌ರವರು ಬರೆದರು. ಆಗ ಶ್ರೀ ಕೆ. ಶಾಮರಾಯರು ಇದ್ದರು. ಇವತ್ತು ಅವರನ್ನು ನೆನಪಿಸಿಕೊಳ್ಳಬೇಕು, ಅವರು ಬಹಳ ಎತ್ತರವಾದಂತಹ ವ್ಯಕ್ತಿಯಾಗಿದ್ದರು. ಅವರು ತಮ್ಮ ವರದಿಗಾರರಿಗೆ ಸಂಪೂರ್ಣವಾದಂತಹ ಸ್ವಾತಂತ್ರ್ಯವನ್ನು ಕೊಟ್ಟಿದ್ದರು. ದಿವಂಗತ ರಾಜಾರಾವ್‌ರವರು, ಮಾನ್ಯ ಆರ್.ಡಿ. ಕಿತ್ತೂರ್ ಅವರ ಮನೆಯಲ್ಲಿ ಸುಮಿತ್ರಾ ದೇಸಾಯಿ ಎಂಬ ಹೆಣ್ಣುಮಗಳು ಇದ್ದಾರೆ ಎಂಬುದು ಆ ವರದಿಯ ಸಾರಾಂಶವಾಗಿತ್ತು. ಅದು ಬಹಳ ದೊಡ್ಡ ಲೇಖನವಾಗಿತ್ತು. ನಾನು ಸದನದಲ್ಲಿ ಆ ಲೇಖನವನ್ನು ಪ್ರಸ್ತಾಪ ಮಾಡಿದಾಗ, ಆ ಬಗ್ಗೆ ಇಲ್ಲಿ ದೊಡ್ಡ ಚರ್ಚೆ, ಭಾರಿ ಹೋರಾಟವೇ ನಡೆಯಿತು. ಅಂತಿಮವಾಗಿ ಕಿತ್ತೂರ್‌ರವರು ರಾಜೀನಾಮೆ ಕೊಟ್ಟರು. ಅದಕ್ಕೆ ಆ ಒಬ್ಬ ಶಕ್ತವಂತ ವರದಿಗಾರರು ಆ ಕಾಲದಲ್ಲಿ ಬರೆದಂತಹ ಶಕ್ತಿಯುತ ವರದಿ ಕಾರಣವಾಗಿತ್ತು. ಆ ವರದಿಯಿಂದಾಗಿಯೇ ಕಿತ್ತೂರ್‌ರವರು ರಾಜೀನಾಮೆ ಕೊಡುವ ಮಟ್ಟಕ್ಕೆ ಹೋಗಬೇಕಾಯಿತು. ಇವತ್ತು ಅಂತಹ ಹತ್ತು ವರದಿಗಳನ್ನು ಬರೆದರೂ ರಾಜೀನಾಮೆ ಕೊಡುವವರು ಯಾರೂ ಇಲ್ಲ. ಅದಕ್ಕಾಗಿ ಇವತ್ತು ನಾವು ಅವರನ್ನು ನೆನಪಿಸಿಕೊಳ್ಳಬೇಕಾಗಿದೆ. ರಾಜಾರಾವ್‌ರಂತಹ ಒಬ್ಬ ವ್ಯಕ್ತಿ ಇತಿಹಾಸದಲ್ಲಿ ದಾಖಲಾಗಬೇಕು. ರಾಜಾರಾವ್‌ರವರು ಕಡಿಮೆ ಏನಲ್ಲ, ರಾಜಾರಾವ್‌ರವರು ಪೂರ್ವಾಗ್ರಹ ಪೀಡಿತರಾಗಿರಲಿಲ್ಲ. ಅವರು ಒಳ್ಳೆಯ ಸ್ನೇಹಜೀವಿಯಾಗಿದ್ದರು. ಮಲ್ಯ ಆಸ್ಪತ್ರೆಯಲ್ಲಿ ಅವರು ಕೊನೆಯ ಉಸಿರು ಇರುವವರೆಗೂ, ಯಾರು ಏನು ಹೇಳಿದರೂ ವಿಶಿಷ್ಟ ರೀತಿಯಲ್ಲಿ ಸಿಗರೇಟ್ ಸೇದುವುದನ್ನು ಬಿಟ್ಟಿರಲಿಲ್ಲ. ರಾಜಾರಾವ್ ಅವರ ನಿಧನದಿಂದ ಕನ್ನಡ ಪತ್ರಿಕಾ ರಂಗಕ್ಕೆ ಮತ್ತು ಕರ್ನಾಟಕಕ್ಕೆ ಅಪಾರವಾದಂತಹ ನಷ್ಟವಾಗಿದೆ. ದಿವಂಗತ ವಜ್ರಮುನಿಯವರು ಅತ್ಯುನ್ನತವಾದಂತಹ ನಟರಾಗಿದ್ದರು. ಮಾನ್ಯ ಕಣಗಾಲ್ ಪ್ರಭಾಕರ ಶಾಸ್ತ್ರಿಯವರ 'ಪ್ರಚಂಡ ರಾವಣ' ನಾಟಕದಲ್ಲಿ, ರಾವಣ ಪಾತ್ರ ಮಾಡಲೆಂದೇ ವಜ್ರಮುನಿಯವರು ಹುಟ್ಟಿದ ರೀತಿಯಲ್ಲಿ ಅದ್ಭುತವಾಗಿ ಅಭಿನಯಿಸಿದ್ದರು. ದಿವಂಗತ ವಜ್ರಮುನಿಯವರು ಖಳನಾಯಕನಾಗಿದ್ದರೂ ನಿಜ ಜೀವನದಲ್ಲಿ ಒಳ್ಳೆಯ ವ್ಯಕ್ತಿಯಾಗಿದ್ದರು. ಅವರು ಒಳ್ಳೆಯ ಸೌಜನ್ಯ, ಪ್ರೀತಿ, ವಿಶ್ವಾಸ ಇರತಕ್ಕ ವ್ಯಕ್ತಿಯಾಗಿದ್ದರು. ವಜ್ರಮುನಿಯವರ ನಿಧನದಿಂದಾಗಿ ಚಿತ್ರರಂಗಕ್ಕೆ ಮತ್ತು ರಂಗಭೂಮಿಗೆ ಅಪಾರವಾದ ನಷ್ಟವಾಗಿದೆ.

ವಜ್ರಮುನಿಯವರು ಸ್ವಲ್ಪ ಹೆಚ್ಚು ಕಡಿಮೆ 300 ಚಿತ್ರಗಳಲ್ಲಿ ಖಳನಾಯಕನಾಗಿ ಪಾತ್ರ ಮಾಡಿದ್ದರು. ಕೊನೆಯ ದಿನಗಳಲ್ಲಿ ಅವರು ಮೂತ್ರಪಿಂಡ ರೋಗದಿಂದ ಬಹಳ ಬಳಲಿ ಅಸು ನೀಗಬೇಕಾಯಿತು. ಅಂತಹ ಒಬ್ಬ ಮಹಾನ್ ವ್ಯಕ್ತಿಯನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಇದರಿಂದಾಗಿ ಚಿತ್ರರಂಗ ಮತ್ತು ರಂಗಭೂಮಿಗೆ ಅಪಾರವಾದ ಅನ್ಯಾಯವಾಗಿದೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ಇನ್ನು ಶ್ರೀ ಸಿ.ಜಿ. ಕೃಷ್ಣಸ್ವಾಮಿಯವರ ಬಗ್ಗೆ ಹೇಳುವುದಾದರೆ, ಅವರು ಸಿಜಿಕೆ ಎಂದೇ ಖ್ಯಾತರಾಗಿದ್ದರು. ಅವರು ರಂಗಭೂಮಿಗೆ ಒಂದು ಹೊಸ ಆಯಾಮವನ್ನು, ಹೊಸ ಶಕ್ತಿಯನ್ನು ಕೊಟ್ಟಂತಹ ಕ್ರಾಂತಿಕಾರಕ ವ್ಯಕ್ತಿಯಾಗಿದ್ದರು. ಎಡಪಂಥೀಯ ಚಿಂತನಕಾರರಾಗಿದ್ದ ಅವರು ನಾಟಕ ರಂಗದಲ್ಲಿ ಮತ್ತು ರಂಗಭೂಮಿಯಲ್ಲಿ ತನ್ನದೇ ಆದಂತಹ ಸೊಗಡನ್ನು ತಂದು ಅದನ್ನು ಶಕ್ತಿಯುತಗೊಳಿಸಿ ಬೆಳಸಿದಂತಹವರಾಗಿದ್ದರು. ಶ್ರೀಯುತ ಸಿ.ಜಿ. ಕೃಷ್ಣಸ್ವಾಮಿಯವರ ನಿಧನದ ಸುದ್ದಿ ಕೇಳಿ ನನಗೆ ಬರಸಿಡಿಲು ಬಡಿದಂತಾಯಿತು. ಅವರು ಯೋಜನೆಯೊಂದರ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಮಡಿದ್ದಾಗ ಅವರ ನಿಧನವಾದುದು ನಮ್ಮ ನಾಡಿಗೆ, ಹೊಸ ಆಯಾಮದ ರಂಗಭೂಮಿಗೆ, ಎಡ ಪಂಥೀಯ ಚಿಂತನೆಗೆ ಅತ್ಯಂತ ನೋವಾಗಿದೆ. ಅವರ ಜೊತೆಗೆ ಈ ಸಂತಾಪ ಸೂಚಕದಲ್ಲಿ ಉಲ್ಲೇಖಿಸಿರುವ ಎಲ್ಲಾ 24 ಜನ ಮಹಾಗಣ್ಯರು ಹಾಗೂ ಮೇಧಾವಿಗಳ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಈ ಸದನ ಬರೀ ಅವರ ಆತ್ಮಕ್ಕೆ ಶಾಂತಿ ಕೋರುವ ಸದನವಾಗದೆ ಕನಿಷ್ಟ ಪಕ್ಷ ಈ ಎಲ್ಲಾ ವ್ಯಕ್ತಿಗಳ ಹೆಸರು ಉಳಿಯುವುದಕ್ಕೆ ಕೆಲವು ಪುಸ್ತಕ ಭಂಡಾರವನ್ನಾದರೂ ತಾವು ಮಾಡಬೇಕು. ಸರ್ಕಾರವೇ ಇವರ ಇತಿಹಾಸವನ್ನು ಬರೆಸಿ, ಕರ್ನಾಟಕ ಸರ್ಕಾರದ ಪುಸ್ತಕ ಭಂಡಾರದಲ್ಲಿ ಇವರ ಕುರಿತ ಪುಸ್ತಕಗಳನ್ನು ಇಡುವ ವ್ಯವಸ್ಥೆ ಮಾಡಬೇಕು. ಸುಮ್ಮನೆ ಪ್ರತಿ ಸಲ 10–15 ಅಥವಾ 24 ಜನಗಳ ಆತ್ಮಕ್ಕೆ ಶಾಂತಿ ಕೋರುವ ಭಾಷಣ ಮಾಡಿ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಕೊನೆಯ ಪಕ್ಷ ಇವರ ಹಿನ್ನೆಲೆಯೇನು? ಇವರ ಸಂಸಾರದ ಪರಿಸ್ಥಿತಿ ಏನು? ಅವರ ನಿಧನದ ಹಿನ್ನೆಲೆಯಲ್ಲಿ ಅವರ ಸಂಸಾರದವರು ಎಷ್ಟು ನೋವಿನಲ್ಲಿದ್ದಾರೆ ಎಂಬ ಬಗ್ಗೆ ಗಮನಹರಿಸಬೇಕು. ಅವರಿಗೆ ಪರಿಹಾರದ ರೂಪದಲ್ಲಿ ಹನ ಕೊಡುವುದಕ್ಕಾದರೂ ಆಗಲಿ ಅಥವಾ ಮತ್ತೆ ಯಾವುದೇ ರೀತಿಯ ಸಹಾಯ ಮಾಡುವುದಕ್ಕಾಗಲಿ, ಸರ್ಕಾರ ಒಬ್ಬ ಅಧಿಕಾರಿಯನ್ನು ನೇಮಿಸಬೇಕು. ಇಂತಹ ಗಣ್ಯ ವ್ಯಕ್ತಿಗಲು ತೀರಿಕೊಂಡಾಗ ಅವರ ಮನೆಗಳಿಗೆ ಹೋಗಿ ನಿಮ್ಮ ಪರಿಸ್ಥಿತಿ ಏನು? ಏನಾಗಿದೆ? ಎಂದು ಕೇಳುವಂತಾಗಬೇಕು. ಸುಮ್ಮನೆ ಸಂತಾಪ ಸೂಚಿಸುವ ಒಣ ಮಾತುಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಕೆಲವರಿಗೆ ಸ್ಮಾರಕ, ಕೆಲವರಿಗೆ ಸಹಾಯ, ಕೆಲವರಿಗೆ ಸಹಕಾರ ಇವೆಲ್ಲವನ್ನೂ ಮಾಡಬೇಕಾಗುತ್ತದೆ. ಈ ರಾಜ್ಯಕ್ಕಾಗಿ ಮತ್ತು ದೇಶಕ್ಕಾಗಿ ಕೆಲಸ ಮಾಡಿದಂತಹ ಜನರನ್ನು ನಂಬಿದಂತಹ ಸಂಸಾರದ ಕಣ್ಣೀರು ಒರೆಸಬೇಕು. ಅವರು ಬೀದಿಪಾಲಾಗದ ರೀತಿಯಲ್ಲಿ ಅಗತ್ಯ ಅನುಕೂಲವನ್ನು ಅವರಿಗೆ ಮಾಡಿಕೊಡಬೇಕೆಂದು ತಾವು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು. ಇಷ್ಟು ಹೇಳಿ ದಿವಂಗತರ ಆತ್ಮಕ್ಕೆ ಶಾಂತಿ ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, 24 ಜನ ಗಣ್ಯರಿಗೆ ಅನ್ವಯಿಸುವಂತೆ ಸಂತಾಪ ಸೂಚಕ ನಿರ್ಣಯವನ್ನು ತಾವು ಮಂಡಿಸಿದ್ದೀರಿ. ಇದರಲ್ಲಿ ಅಸಾಮಾನ್ಯವಾದಂತಹ ಮೇಧಾವಿಗಳು. ರಾಜತಂತ್ರಜ್ಞರು, ನಾಟಕಕಾರರು, ಸಾಹಿತಿಗಳು, ಅರ್ಥಶಾಸ್ತ್ರಜ್ಞರು ಇದ್ದಾರೆ. ಇಂತಹವರಿಗೆಲ್ಲಾ ಗೌರವ ಪೂರ್ವಕವಾಗಿ ಶ್ರದ್ಧಾಂಜಲಿಯನ್ನು

ಅರ್ಪಿಸತಕ್ಕಂಥ ಮನೋಸ್ಥಿತಿ ಇವತ್ತು ಈ ಸದನದಲ್ಲಿ ಇಲ್ಲ. ಈ ಸದನವನ್ನು ಯಾವುದೋ ಒಂದು ಕಾಡುತ್ತಿದೆ. ಆ ರೀತಿಯಾದಂತಹ ಮನೋಸ್ಥಿತಿ ಇವತ್ತು ಈ ಸದನದಲ್ಲಿಲ್ಲ. ಅರೆ ಮನಸ್ಸಿನಿಂದ ನಾವು ಸಂತಾಪ ಹೇಳತಕ್ಕ ಸ್ಥಿತಿಗೆ ನಾವು ಬಂದಿದ್ದೇವೆ. ಆದರೂ ಪರವಾಗಿಲ್ಲ, ನಮ್ಮ ಕರ್ತವ್ಯವನ್ನು ನಾವು ಮಾಡಲೇಬೇಕಾಗಿದೆ. ಪ್ರಮುಖವಾಗಿ ನಾರಾಯಣನ್, ಮೋದಿ, ನಂಜುಂಡಪ್ಪ, ಸಿ.ಜಿ. ಕೃಷ್ಣಸ್ವಾಮಿ ಇಂತಹವರು ನಮ್ಮ ಕರ್ನಾಟಕ ರಾಜ್ಯಕ್ಕಷ್ಟೇ ಅಲ್ಲ, ಇಡೀ ದೇಶಕ್ಕೆ ಅಪೂರ್ವವಾದ ಆಸ್ತಿಗಳಾಗಿದ್ದರು. ಮಾನ್ಯ ಕೆ.ಆರ್. ನಾರಾಯಣನ್ ಬಗ್ಗೆ ನಾನು ಹೇಳಬೇಕಾಗಿಲ್ಲ. ಇಡೀ ಜಗತ್ತಿಗೇ ಅದು ಗೊತ್ತಿದೆ. ಅವರ ವ್ಯಕ್ತಿತ್ವ. ಅವರ ಮೇಧಾವಿತನ, ಅವರ ರಾಜತಾಂತ್ರಿಕತೆ ಮತ್ತು ಕೌಶಲ್ಯ ಎಲ್ಲರಿಗೂ ತಿಳಿದಿರುವಂತಾದ್ದೇ ಆಗಿದೆ. ಬಹಳ ಮುಖ್ಯವಾಗಿ ಅವರ ಬಗ್ಗೆ ವಿಚಾರವೊಂದನ್ನು ಹೇಳುವುದೇನೆಂದರೆ, ಮೊಟ್ಟಮೊದಲು ಅವರು ಚೈನಾ ದೇಶದಲ್ಲಿ ರಾಯಭಾರಿಯಾಗಿದ್ದಂತಹ ಸಂದರ್ಭದಲ್ಲಿ ನಮ್ಮ ಭಾರತ ಮತ್ತು ಚೈನಾ ದೇಶಗಳ ನಡುವೆ ಸಂಬಂಧಗಳು ಹಳಸಿ ಹೋಗಿದ್ದವು. ಅಂತಹ ಸಂದರ್ಭದಲ್ಲಿ ಚೈನಾ ಮತ್ತು ನಮ್ಮ ಭಾರತ ಎರಡೂ ದೇಶಗಳೂ ಸ್ನೇಹದಿಂದ ಮತ್ತು ಒಗಟ್ಟಿನಿಂದ ಇರತಕ್ಕದ್ದು ಜಗತ್ತಿಗೇ ಭಾರಿ ಪ್ರಮುಖವಾದಂತಹ ವಿಚಾರ ಎಂದು ಹೇಲಿ, ಅವರು ರಾಯಭಾರಿಯಾಗಿದ್ದಂತಹ ಇಡೀ ಅವಧಿಯಲ್ಲಿ ಅವರು ಮಾಡಿದಂತಹ ಪ್ರಯತ್ನದಿಂದಾಗಿಯೇ ಇವತ್ತು ಚೈನಾ ಮತ್ತು ನಮ್ಮ ಮಧ್ಯೆ ಒಳ್ಳೆಯ ವಾತಾವರಣ ಮತ್ತು ಬಾಂಧವ್ಯ ಇದೆ. ಅನೇಕ ವಿಚಾರಗಳಲ್ಲಿ ಅವರಿಗೂ ನಮಗೂ ಇವತ್ತು ಹೊಂದಾಣಿಕೆ ಆಗಿ ಜಗತ್ತಿನಲ್ಲೇ ದೊಡ್ಡ ಶಕ್ತಿಗಳಾಗಿ ನಾವು ಆಗತಕ್ಕಂತಹ ಎಲ್ಲಾ ಸೂಚನೆಗಳೂ ಇವತ್ತು ಕಂಡು ಬರುತ್ತಿದೆ. ಅದಕ್ಕೆ ಎರಡು ದೇಶಗಳೂ ತಾತ್ವಿಕವಾದ ಒಪ್ಪಿಗೆಯನ್ನು ಕೊಟ್ಟಿದೆ. ಇದೆಲ್ಲಾ ಆಗಬೇಕಾದರೆ ದಿವಂಗತ ಶ್ರೀ ಕೆ.ಆರ್. ನಾರಾಯಣನ್ ಅವರೇ ಇದಕ್ಕೆ ಮೂಲ ಕಾರಣವಾಗಿದ್ದಾರೆ. ಅವರು ರಾಯಭಾರಿಯಾಗಿದ್ದಾಗಲೇ ನಡೆದಂತಹ ವ್ಯವಸ್ಥೆ ಇದು ಎಂಬುದನ್ನು ಈ ದೇಶದ ಜನ ತಿಳಿದುಕೊಳ್ಳಬೇಕಾಗುತ್ತದೆ. ಅವರ ಉಳಿದ ವಿಚಾರಗಳ ಬಗ್ಗೆ ಎಲ್ಲರೂ ಹೇಳಿದ್ದಾರೆ. ಅವರು ಎಂತಹ ರಾಷ್ಟ್ರಪತಿಗಳಾಗಿದ್ದರು, ರಾಷ್ಟ್ರಪತಿಗಳಾಗಿದ್ದಾಗ, ಯಾವ ರೀತಿ ವರ್ತನೆ ಮಾಡಿದರು, ಗುಜರಾತಿನಲ್ಲಿ ನಡೆದಂತಹ ದುರಂತಗಳ ಬಗ್ಗೆ ಅವರು ಸರ್ಕಾರಕ್ಕೆ ಬರೆದ ಪತ್ರ, ಅದರ ಬಗ್ಗೆ ಇವತ್ತಿಗೂ ಕೂಡ ವಿವಾದ ಇದೆ. ಆ ಪತ್ರವನ್ನು ಬಹಿರಂಗಗೊಳಿಸಬೇಕೆಂದು ತನಿಖೆ ಮಾಡತಕ್ಕಂತಹ ಆಯೋಗ ಕೇಳುತ್ತಿದೆ. ಅದನ್ನು ಕೊಡುವುದಕ್ಕಾಗುವುದಿಲ್ಲವೆಂದು ಸರ್ಕಾರ ಹೇಳುತ್ತಿದೆ, ಯಾವ ಕಾರಣದಿಂದ ಕೊಡುವುದಿಲ್ಲ ಏನು ಎಂದು ಮಾತ್ರ ಹೇಳುತ್ತಿಲ್ಲ. ಏಕೆಂದರೆ ಆ ದುರಂತ ನಡೆದಂತಹ ಸಂದರ್ಭದಲ್ಲಿ ಭಾರೀ ಮನ ನೊಂದು ಸರ್ಕಾರಕ್ಕೆ ಪತ್ರ ಬರೆದಿದ್ದರು. ಆ ಪತ್ರ ಏನೆಂದು ಸಾಧಾರಣವಾಗಿ ಎಲ್ಲರಿಗೂ ಗೊತ್ತಿದೆ. ಅಂತಹ ಒಬ್ಬ ರಾಷ್ಟ್ರಪತಿಯಾಗಿ ಹಲವಾರು ಸಂದರ್ಭಗಳಲ್ಲಿ ಈ ದೇಶವನ್ನು ಇಕ್ಕಟ್ಟಿನಿಂದ ಪಾರು ಮಾಡಿದ್ದಾರೆ. ಅದೇ ರೀತಿಯಲ್ಲಿ ಡಾ: ಮೋದಿಯವರ ಬಗ್ಗೆ ನಾವು ಎಷ್ಟು ಹೇಳಿದರೂ ಸಾಕಾಗುವುದಿಲ್ಲ. ಅವರ ದಯಾಪರತೆ, ಕಣ್ಣಿನ ದಾನವೆಂದು ಅವರು ಏನು ಹೇಳಿದ್ದಾರೆ, ಅದರಷ್ಟು ಮುಖ್ಯವಾದ ದಾನ ಬಹುಶಃ ದೇಶದಲ್ಲಿ ವಿದ್ಯಾ ದಾನ ಬಿಟ್ಟರೆ ಅದು ಒಂದೇ ದೊಡ್ಡ ದಾನ. ಲಕ್ಷಾಂತರ ಜನರಿಗೆ ಅವರು ಕಣ್ಣಿನ ದಾನವನ್ನು ಮಾಡಿದ್ದಾರೆ. ಅವರು ನಿಜವಾಗಿಯೂ ನಮ್ಮ ಕರ್ನಾಟಕದ ಹಾಗೂ ದೇಶದ ಆಸ್ತಿಯಾಗಿದ್ದರು. ಅದೇ ರೀತಿಯಲ್ಲಿ ನಾಗೇಗೌಡರು. ಗ್ರಾಮೀಣ ಪ್ರದೇಶದ ಸಂಸ್ಕೃತಿಯನ್ನು ನಿರಂತರವಾಗಿ ಕಾಪಾಡಿ ಮುಂದಿನ ಪೀಳಿಗೆಗೆ ಅದನ್ನು ವಿಸ್ತರಿಸುವಂತೆ ಅವರು ಮಾಡಿರುವಂತಹ ಪ್ರಯತ್ನ ಸಾಮಾನ್ಯವಾದ

ಪ್ರಯತ್ನ ಅಲ್ಲ. ಡಾ: ನಂಜುಂಡಪ್ಪನವರು ಅವರು ಒಬ್ಬ ಖ್ಯಾತ ಅರ್ಥ ಶಾಸ್ತ್ರಜ್ಞರು. ನಾವು ನಿಜವಾಗಿ ಏನಾದರೂ ಅವರಿಗೆ ಗೌರವ ಸಲ್ಲಿಸಬೇಕೆಂದರೆ, ಅವರು ಏನು ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಬಗ್ಗೆ ವರದಿ ಕೊಟ್ಟಿದ್ದಾರೆ ಅದನ್ನು ಚಾಚೂ ತಪ್ಪದೆ ಯಾವುದೇ ಸರ್ಕಾರ ಇರಲಿ, ಯಾವುದೇ ಸರ್ಕಾರ ಬರಲಿ ಅದನ್ನು ಜಾರಿ ಮಾಡಿದರೆ ಖಂಡಿತವಾಗಿ ಕರ್ನಾಟಕ ಎಲ್ಲಾ ರೀತಿಯಲ್ಲಿಯೂ ಅಭಿವೃದ್ಧಿ ಆಗುತ್ತದೆ. ಆಗ ಡಾ: ನಂಜುಂಡಪ್ಪನವರಿಗೆ ನಿಜವಾದ ಗೌರವ ಸಲ್ಲಿಸಿದ ಹಾಗಾಗುತ್ತದೆ. ಅದರ ಬಗ್ಗೆ ನನ್ನ ಒಂದು ಸಲಹೆ ಏನಿದೆ ಎಂದರೆ, ನಮ್ಮಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸ್ಟಡೀಸ್ ಎಂದು ಒಂದು ಇನ್‌ಸ್ಟಿಟ್ಯೂಟ್ ಮಾಡಿದ್ದಾರೆ, ಇವರು ಖ್ಯಾತ ಅರ್ಥ ಶಾಸ್ತ್ರಜ್ಞರಾಗಿದ್ದ ಕಾರಣಕ್ಕೋಸ್ಕರ ಇವರ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಿ ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳ ಆರ್ಥಿಕ ಅಭಿವೃದ್ಧಿ ಅಧ್ಯಯನ ಸಂಸ್ಥೆಯನ್ನು ರಚನೆ ಮಾಡಿದರೆ ಅದರಲ್ಲಿ ಇಡೀ ರಾಜ್ಯದ ಮತ್ತು ದೇಶದ ಗ್ರಾಮೀಣ ಅಭಿವೃದ್ಧಿ, ಗ್ರಾಮೀಣ ಪ್ರದೇಶದ ಆರ್ಥಿಕ ಸ್ಥಿತಿಗತಿಗಳು ಹಿಂದುಳಿಯುವಿಕೆ ಬಗ್ಗೆ ಆಳವಾದ ಅಧ್ಯಯನವನ್ನು ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟರೆ ನಿಜವಾಗಿ ನಾವು ಡಾ: ನಂಜುಂಡಪ್ಪನವರಿಗೆ ಗೌರವ ಕೊಟ್ಟ ಹಾಗಾಗುತ್ತದೆ. ಇಲ್ಲದಿದ್ದರೆ ಇದು ಮಾಮೂಲಿ ಹಾಗೆ ಎಲ್ಲರೂ ಸತ್ತ ಹಾಗೆ ಒಂದು ಸಂತಾಪ ಮಾಡಿ ಹೋದ ಹಾಗಾಗುತ್ತದೆ. ಮುಖ್ಯವಾಗಿ ಶ್ರೀ ಸಿ.ಜಿ. ಕೃಷ್ಣಸ್ವಾಮಿಯವರು ನನಗೆ 30 ವರ್ಷಗಳ ಹಳೆಯ ಗೆಳೆಯರು. ನಾನು ಅವರು ಇಬ್ಬರೂ ಸಾಧಾರಣ 1971ನೇ ಇಸವಿಯಲ್ಲಿ ಒಂದೇ ಚಳುವಳಿಗೆ ಒಂದೇ ಸಂದರ್ಭದಲ್ಲಿ ಬಂದಂತಹವರು. ಅವರು ಸಾಯುವುದಕ್ಕೆ ಇನ್ನು ಎರಡು ದಿವಸಗಳಿವೆ ಎನ್ನುವ ಸಂದರ್ಭದಲ್ಲಿ ಕೂಡ ನನ್ನನ್ನು ದೂರವಾಣಿ ಮುಖಾಂತರ ಸಂಪರ್ಕ ಮಾಡಿ, ಯಾವುದೋ ಒಂದು ಬೇರೆ ವಿಚಾರ ಮಾತನಾಡಲಿಕ್ಕೆ ಇದೆ, ನಾನು ಸಿರಿಗೆರೆಗೆ ಹೋಗುತ್ತಿದ್ದೇನೆ, ಬಂದಮೇಲೆ ನನಗೆ ಸಿಗಬೇಕು, ನಾನು ಮಾತನಾಡಬೇಕು ಎಂದು ಹೇಳಿದ್ದರು. ಅದೇ ಅವರು ನನ್ನ ಜೊತೆಯಲ್ಲಿ ಕಡೆಯದಾಗಿ ಮಾತನಾಡಿದ್ದು. ನಾವು 30 ವರ್ಷಗಳಿಂದ ಜೊತೆಯಲ್ಲಿದ್ದವರು. ಅವರಿಗೆ ಎಂತಹ ಸಾಮಾಜಿಕ ಬದ್ಧತೆ ಇತ್ತು, ಎಂತಹ ಸಾಮಾಜಿಕ ಕಳಕಳಿ ಇತ್ತು ಎಂಬುದು ಅವರನ್ನು ಬಲ್ಲವರಿಗೆ ಮಾತ್ರ ಗೊತ್ತು ಅವರಿಗೆ ಜನರ ಬಗ್ಗೆ ಇದ್ದಂತಹ ಪ್ರೀತಿ ವಿಶ್ವಾಸ ಎಷ್ಟು ಏನು ಎಂಬುದು ಹತ್ತಿರದಿಂದ ಬಲ್ಲವರಿಗೆ ಮಾತ್ರ ಗೊತ್ತು. ಅಂಥವರಿಗೆ ಮಾತ್ರ ಶ್ರೀ ಸಿಜಿ ಕೃಷ್ಣ ಸ್ವಾಮಿ ಬದ್ಧತೆ ಬಗ್ಗೆ ಗೊತ್ತಾಗುತ್ತದೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಈಗಾಗಲೇ ಹೇಳಿದ್ದಾರೆ. ಅವರು ನಾಟಕ ಅಕೆಡಮಿಯ ಅಧ್ಯಕ್ಷರು ಕೂಡ ಆಗಿದ್ದರು. ಅದಕ್ಕೋಸ್ಕರ ನಾನು ಒಂದು ಸಲಹೆ ಕೊಡುವುದು, ಶ್ರೀ ಕೃಷ್ಣ ಸ್ವಾಮಿಯವರಿಗೆ ನಾವು ಗೌರವ ಕೊಡುವುದಾದರೆ ಅವರ ಹೆಸರಿನಲ್ಲಿ ಯಾವುದಾದರೂ ಒಂದು ರಂಗ ಮಂದಿರವನ್ನು ನಿರ್ಮಾಣ ಮಾಡತಕ್ಕಂಥದ್ದು ಆಗಬೇಕು. ಅವರು ಎಲ್ಲಿ ಕಡೆಯಲ್ಲಿ ಸತ್ತರು ಅಲ್ಲಿ ಒಂದು ರಂಗ ಮಂದಿರವನ್ನು ನಿರ್ಮಾಣ ಮಾಡಬೇಕು. ಮೈಸೂರಿನಲ್ಲಿ ಯಾವ ರೀತಿ ಕಲಾ ಮಂದಿರವನ್ನು ಮಾಡಿದ್ದೀರಿ ಆ ರೀತಿಯಲ್ಲಿ ಶ್ರೀ ಕೃಷ್ಣಸ್ವಾಮಿಯವರ ಹೆಸರಿನಲ್ಲಿ ಒಂದು ರಂಗ ಮಂದಿರವನ್ನು ಕಲಾ ವಿದ್ಯಾ ಸಂಸ್ಥೆಯನ್ನು ಪ್ರಾರಂಭ ಮಾಡಿ ಅವರಿಗೆ ಗೌರವ ಕೊಡಬೇಕೆಂದು ಹೇಳಿ, ಉಳಿದ 24 ಜನರು ಯಾರು ಗಣ್ಯರು ನಿಧನ ಹೊಂದಿದ್ದಾರೆ ಅವರೆಲ್ಲರಿಗೂ ಕೂಡ ಸಂತಾಪ ಸೂಚಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೋಲಾರ) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಎಲ್ಲರೂ ಮಾತನಾಡಿದ್ದಾರೆ. ಸುಮಾರು 24 ಜನ ಗಣ್ಯರು ತೀರಿ ಹೋಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ

ಸಿಗುವ ಹಾಗೆ ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ಕೋರಿಕೊಳ್ಳುತ್ತೇನೆ. ಮನುಷ್ಯ ಹುಟ್ಟಿದ ತಕ್ಷಣ ಬೆಳೆಯುವುದು ಮತ್ತು ಸತ್ತು ಹೋಗುವುದು ಅದು ಜನರಲ್ ಥೀಯರಿ. ಒಬ್ಬ ಮನುಷ್ಯ ಸತ್ತು ಹೋದ ಮೇಲೆ ಅವರು ಹಾಗಿದ್ದರು, ಹೀಗಿದ್ದರು ಎಂದು ಹೇಳುವುದು ಪ್ರಾಕ್ಟೀಸ್ ಆಗಿದೆ. ಏನೋ ಹೊಸದಾಗಿ ಸತ್ತು ಹೋಗಿರುವವರ ತರಹ ನಾವು ಹೇಳುವುದು. ಒಬ್ಬ ಮನುಷ್ಯ ಒಂದು ಸಾರಿ ಸಾಯುವುದಿಲ್ಲ, ಸುಮಾರು ಸಾರಿ ಸತ್ತು ಹೋಗುತ್ತಾನೆ. ಅವನು ಹುಟ್ಟಿದ ತಕ್ಷಣ 10 ವರ್ಷಗಳಾಗುತ್ತವೆ. 10 ವರ್ಷ ಕಳೆದ ಮೇಲೆ 10 ರಿಂದ 20ನೇ ವರ್ಷಕ್ಕೆ ಹೋಗುತ್ತಾನೆ. 20ನೇ ವರ್ಷಕ್ಕೆ ಹೋಗುವ ವೇಳೆಗೆ ಹಿಂದಿನ 10 ವರ್ಷ ಸತ್ತು ಹೋಗಿರುತ್ತದೆ. 20 ರಿಂದ 40ನೇ ವರ್ಷಕ್ಕೆ ಹೋದಾಗ ಅವರು ಅವತ್ತು ಯುವಕರಾಗಿದ್ದರು, ಆ 20 ವರ್ಷ ಸತ್ತು ಹೋಗಿದೆ, ಮತ್ತೆ ಮಿಡ್ಲ್ ಏಜ್‌ಗೆ ಬರುತ್ತಾರೆ, ಮುದುಕ ಆಗುವಾಗ ಮಿಡ್ಲ್ ಏಜ್ ಸತ್ತು ಹೋಗಿದೆ. ಮುದುಕ ಆದ ಮೇಲೆ ಅದೂ ಕೂಡ ಸತ್ತು ಹೋಗಿದೆ. ಕೊನೆಯಲ್ಲಿ ಇವನು ಸಾಯುತ್ತಾನೆ. ಇದಕ್ಕೆ ನಾವು ಏನು ಹೇಳುತ್ತೇವೆ, ಅಯ್ಯೋ ಪಾಪ ಸತ್ತು ಹೋಗಿದ್ದಾರೆ. ಮಂತ್ರಿಗಳು ಇದ್ದಾರೆ, ಮಂತ್ರಿಗಳು ಯಾವಾಗ ಹೋಗುತ್ತಾರೋ, ಎಲ್ಲಿ ಯಾವ ಪ್ರೋಗ್ರಾಂಗೆ ಹೋಗುತ್ತಾರೋ, ಪ್ರಧಾನ ಮಂತ್ರಿಗಳು ಯಾವ ಪ್ರೋಗ್ರಾಂಗೆ ಹೋಗುತ್ತಾರೋ, ಎಲ್ಲ ಹೇಳುವುದು ಮನುಷ್ಯ ಇರುವವರೆಗೆ ಮಂತ್ರಿಗಳು ಹೋಗುತ್ತಿದ್ದಾರೆ, ಅಲ್ಲಿ ಹೋಗುತ್ತಿದ್ದಾರೆ, ಇಲ್ಲಿ ಹೋಗುತ್ತಿದ್ದಾರೆಂದು ಹೇಳುತ್ತೇವೆ. ಮಂತ್ರಿಗಳು ಸತ್ತು ಹೋದರೆ ಮಂತ್ರಿಗಳು ಯಾವಾಗ ಸುಡುಗಾಡಿಗೆ ಹೋಗುವುದು ಎಂದು ಕೇಳುವುದಿಲ್ಲ, ಬಾಡಿ ಯಾವಾಗ ಹೋಗುತ್ತದೆ ಎಂದು ಕೇಳುತ್ತಾರೆ. ಇಂತಹ ಸ್ಥಿತಿಯಲ್ಲಿ ನಾವು ಇದ್ದೇವೆ. ಇದುವರೆಗೆ ನಾವು ಏನು ಕೆಲಸ ಮಾಡಿದೆವು, ಭೂಮಿ ಮೇಲೆ ಏನು ಒಳ್ಳೆಯದು ಮಾಡಿದ್ದೇವೆ, ನಾವು ತೀರಿ ಹೋದರೆ ಸಾವಿರ ಜನರಿಗೆ ಏನು ಅನುಕೂಲವಾಗುತ್ತದೆ, ಯಾವ ತರಹ ನಾವು ಇದ್ದೆವು, ಕಂಡೋಲೆನ್ಸ್ ಮೇಲೆ ನಾವು ಮಾತನಾಡುವ ಸಂದರ್ಭದಲ್ಲಿ ನಾವೂ ಒಂದು ದಿನ ತೀರಿ ಹೋಗುವವರೇ, ಇರುವವರೆಗೆ ಒಳ್ಳೆಯದು ಮಾಡಬೇಕು, ಒಳ್ಳೆಯ ರೀತಿಯಾಗಿ ಇರಬೇಕು, ಸುಮ್ಮನೆ ದಿನ ದಿನ ಸಾಯಬಾರದು, ಒಂದು ಏಜ್‌ನಲ್ಲಿ ನಾವು ಸತ್ತು ಹೋಗಿದ್ದೆವು, ಈಗ ನಾವು ಹೊಸದಾಗಿ ಸಾಯುವುದು ಏನೂ ಇಲ್ಲ. ಎಂದು ಹೇಳುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಇಂತಹ ವ್ಯಕ್ತಿಗಳು ರಾಜ್ಯಕ್ಕೆ ಮತ್ತು ದೇಶಕ್ಕೆ ಒಳ್ಳೆಯದು ಮಾಡಿದ್ದಾರೆ, ಯಾರೇ ತೀರಿ ಹೋಗಲಿ ಅವರು ತೀರಿ ಹೋದ ಮೇಲೆ ಪಾಪ ಒಳ್ಳೆಯ ಮನುಷ್ಯ ತೀರಿ ಹೋಗಿದ್ದಾರೆಂದು ಹೇಳುತ್ತೇವೆ. ಅವರು ಏನು ಕೆಲಸ ಬಿಟ್ಟು ಹೋಗಿದ್ದಾರೆ ಆ ಕೆಲಸವನ್ನು ನಾವು ಮುಂದುವರೆಸಬೇಕು. ಒಬ್ಬ ಕಳ್ಳ ಸತ್ತು ಹೋದರೆ ನಾವು ಹೋಗಿ ಅವನ ಮಗನಿಗೆ ನಿಮ್ಮ ತಂದೆ ಏನು ಕೆಲಸ ಬಿಟ್ಟು ಹೋಗಿದ್ದಾರೆ ಅದನ್ನು ಮಾಡು ಎಂದು ಹೇಳುವುದಕ್ಕಾಗುವುದಿಲ್ಲ. ಅದು ತಪ್ಪಾಗುತ್ತದೆ. ಒಬ್ಬ ಕುಡುಕ ಸತ್ತು ಹೋದರೆ ನಿಮ್ಮ ತಂದೆ ಏನು ಕೆಲಸ ಬಿಟ್ಟು ಹೋಗಿದ್ದಾನೆ ಅದನ್ನು ನೀನು ಮುಂದುವರೆಸು ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಮನುಷ್ಯ ಯಾವಾಗಲೂ ಹೃದಯದಿಂದ, ಆತ್ಮ ಸಾಕ್ಷಿಯಾಗಿ ಸತ್ಯಾಂಶದಿಂದ ನಾವು ಕೆಲಸ ಮಾಡಿ, ನಾವು ತೀರಿ ಹೋಗಿ ಪುನಃ ಮುಂದಿನ ಜನರೇಷನ್ ನಮ್ಮ ಬಗ್ಗೆ ಮಾತನಾಡುವ ಸ್ಥಿತಿಯಲ್ಲಿ ನಾವು ಕೆಲಸ ಮಾಡಬೇಕಾಗಿದೆ. ಇಂತಹ ವ್ಯಕ್ತಿಗಳೆಲ್ಲ ಇಂದು ನಮ್ಮ ಜೊತೆಯಲ್ಲಿ ಇಲ್ಲ. ಆದುದರಿಂದ ಅವರ ಕುಟುಂಬದ ಸದಸ್ಯರು ಯಾರ್‍ಯಾರಿದಾರೆ ಅವರಿಗೆಲ್ಲ ಒಳ್ಳೆಯ ರೀತಿಯಲ್ಲಿ ದೇವರು ಆಶೀರ್ವಾದ ಮಾಡಿ, ಅವರ ಹೃದಯಗಳಿಗೆ ಶಕ್ತಿ ಕೊಟ್ಟು ಅವರ ಆತ್ಮಕ್ಕೆ ಶಾಂತಿ ಸಿಗಲಿ

ಎಂದು ದೇವರಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕೆ ಬಹಳ ಸಂತೋಷ. ನಾನೂ ಒಂದು ಸಾರಿ ತೀರಿ ಹೋಗುತ್ತೇನೆ, ತೀರಿ ಹೋದ ಮೇಲೆ ಒಬ್ಬ ಒಳ್ಳೆಯ ವ್ಯಕ್ತಿ ಇದ್ದ ಎಂದು ಹೇಳಬೇಕೆಂದು ಕೇಳಿಕೊಂಡು, ಮೃತರಿಗೆ ಶಾಂತಿ ಸಿಗಲಿ ಎಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸಂತಾಪ ಸೂಚನಾ ನಿರ್ಣಯದ ಮೇಲಿನ ಚರ್ಚೆ ಮುಗಿದಿದೆ . ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಉಪಾಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಸದನವನ್ನು ಸಂಜೆ ನಾಲ್ಕು ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 3–30 ಗಂಟೆಗೆ ಮುಂದೂಡಲ್ಪಟ್ಟು ಪುನಃ ಸಂಜೆ 4–00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

ಸದನವು ಮಧ್ಯಾಹ್ನ ಪುನಃ 4 ಗಂಟೆ 15 ನಿಮಿಷಕ್ಕೆ ಸಮಾವೇಶಗೊಂಡಿತು ಸನ್ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಲಾದ ವಿಷಯಗಳು:

ವಿಷಯ: ಬಹುಮತ ಸಾಬೀತುಗೊಳಿಸುವ ಬಗ್ಗೆ.

ಶ್ರೀ ಬಸವರಾಜ ರಾಯರೆಡ್ಡಿ : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಮತ್ತು ನಮ್ಮ ಸ್ನೇಹಿತ ಶಾಸಕರುಗಳಾದ ಸಿ.ಎಸ್. ನಾಡಗೌಡರು, ಎಂ.ಬಿ. ಪಾಟೀಲರು, ಮತ್ತು ಕುಮಾರ ಬಂಗಾರಪ್ಪನವರು ಒಂದು ಪತ್ರವನ್ನು ಕೊಟ್ಟಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೆ, ಬೆಳಿಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಉಪಾಧ್ಯಕ್ಷರಿಗೆ ಅವಕಾಶ ಕೇಳಿದಾಗ ಅಡ್ಜರ್ನ್ ಮಾಡಿದರು. ದಯವಿಟ್ಟು ಮೊದಲು ಅವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಅಧ್ಯಕ್ಷರು : ಅವರು ಮಾತನಾಡಲಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಇವೊತ್ತು ನಾನು ಮತ್ತು ನಮ್ಮ....

ಮಾನ್ಯ ಸದಸ್ಯರು : ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಮಾತನಾಡಲು ಎದ್ದು ನಿಂತಿದ್ದಾರೆ. ಮೊದಲು ಮಾತನಾಡಲು ಅವರಿಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಒಂದು ಸಂಪ್ರದಾಯವನ್ನಾದರೂ ಪಾಲನೆ ಮಾಡಿ ಸ್ವಾಮಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ತಮ್ಮ ಬಗ್ಗೆ ನಮಗೆ ಅಪಾರವಾದ ಗೌರವವಿದೆ.